ಶುಕ್ರವಾರ, ಅಕ್ಟೋಬರ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 293 | ಪುಟ 12
prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸುನೀಲ್‌ಗೆ ಪ್ರಶಸ್ತಿ
ಭಾರತ ಮೂಲದ ಇತಿಹಾಸಕಾರ ಸುನೀಲ್ ಅಮ್ರುತ್ ಅವರ ಕೃತಿಯು ಪ್ರತಿಷ್ಠಿತ ಬ್ರಿಟಿಷ್ ಅಕಾಡೆಮಿ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ
8

ಸೆಮಿಗೆ ಭಾರತ
ಪ್ರತೀಕಾ ರಾವಲ್ (122) ಮತ್ತು ಸ್ಮೃತಿ ಮಂದಾನ (109) ಅವರ ಶತಕಗಳ ನೆರವಿನಿಂದ ಭಾರತ ತಂಡವು ಗುರುವಾರ ನ್ಯೂಜಿಲೆಂಡ್ ತಂಡವನ್ನು ಮಣಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತು

ಸೆನ್ಸೆಕ್ಸ್ 84,556 | ನಿಫ್ಟಿ 25,891 | $/₹ 87.88 | ಚಿನ್ನ (Std. 10g) ₹1,28,820 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,63,770 (ಬೆಂಗಳೂರು)

ಒಂದು ಮತಕಳವಿಗೆ ₹80 'ಕೂಲಿ'

ಮತಕಳವು ಪ್ರಕರಣ: ಅಕ್ರಮ ಅರ್ಜಿ ಸಲ್ಲಿಸಿದ್ದವರಿಗೆ ₹4.80 ಲಕ್ಷ ಪಾವತಿ

• ಜಯಸಿಂಹ ಆರ್.

ಬೆಂಗಳೂರು: 'ಒಬ್ಬ ಮತದಾರನ ಚೀಟಿಯನ್ನು ಅಕ್ರಮವಾಗಿ ರದ್ದುಪಡಿಸಲು ಅರ್ಜಿ ಸಲ್ಲಿಸಿದ್ದಕ್ಕೆ ₹80. ಎರಡು ಅರ್ಜಿಗಳಿಗೆ ₹160...'

ಕಾಂಗ್ರೆಸ್‌ನ ಬಿ.ಆರ್. ಪಾಟೀಲ ಅವರು ಪ್ರತಿನಿಧಿಸುತ್ತಿರುವ ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ 'ಮತ ಕಳ್ಳತನ'ದ ಬೆನ್ನು ಹತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಪತ್ತೆ ಮಾಡಿದ ಅಕ್ರಮದ ಜಾಡು ಇದು.

'2023ರ ವಿಧಾನಸಭೆ ಚುನಾವಣೆಗೆ ಪೂರ್ವದಲ್ಲಿ, ಈ ಕ್ಷೇತ್ರದಲ್ಲಿ ಒಟ್ಟು 6,000ಕ್ಕೂ ಹೆಚ್ಚು ಮತದಾರರ ಚೀಟಿಗಳನ್ನು ಅಕ್ರಮವಾಗಿ ರದ್ದುಪಡಿಸಲು ಅರ್ಜಿ ಸಲ್ಲಿಸಿದ್ದವರಿಗೆ ₹4.80 ಲಕ್ಷ ಕೂಲಿ ನೀಡಲಾಗಿದೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ಮಾಹಿತಿ ನೀಡಿವೆ.

'ಮೊಹಮ್ಮದ್ ಅಶ್ಫಾಕ್ ಮತ್ತು ಅಕ್ರಂ ಎಂಬವರು ಪಾಲುದಾರಿಕೆಯಲ್ಲಿ ನಡೆಸುತ್ತಿದ್ದ ಸೈಬರ್ ಸೆಂಟರ್ ಒಂದರಲ್ಲಿ ಜುನೇದ್, ಅಸ್ಲಂ, ನದೀಂ ಅವರು ಕೆಲಸ ಮಾಡುತ್ತಿದ್ದರು. 2022ರ ಡಿಸೆಂಬರ್‌ನಿಂದ 2023ರ ಫೆಬ್ರುವರಿವರೆಗೆ ಹಗಲೂ-ರಾತ್ರಿ

ಸೈಬರ್ ಸೆಂಟರ್‌ನಲ್ಲಿಯೇ ಉಳಿದು ಈ ಮೂವರೂ ಅಕ್ರಮವಾಗಿ ಅರ್ಜಿಗಳನ್ನು ಸಲ್ಲಿಸಿದ್ದಾರೆ.

'ಈ ಸೈಬರ್ ಸೆಂಟರ್‌ನಲ್ಲಿ ಆಧಾರ್ ತಿದ್ದುಪಡಿ, ಬಿಪಿಎಲ್ ತಿದ್ದುಪಡಿ, ಜಾತಿ-ಆದಾಯ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸುವ ಕೆಲಸ ಮಾಡಲಾಗುತ್ತಿತ್ತು. ಹೀಗೆ ಅರ್ಜಿ ಸಲ್ಲಿಸಲು ಬಂದಿದ್ದವರ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡು 100 ಹೊಸ ಸಿಮ್ ಕಾರ್ಡ್‌ಗಳನ್ನು ಖರೀದಿಸಲಾಗಿದೆ. ಜತೆಗೆ ಕಲಬುರಗಿ ಸುತ್ತಮುತ್ತಲ ಇರುವ ಕೋಳಿ ಫಾರ್ಮ್‌ಗಳಲ್ಲಿ ದುಡಿಯುವ 75 ಕೂಲಿ ಕಾರ್ಮಿಕರ ಮೊಬೈಲ್ ನಂಬರ್‌ಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ.

'ಚುನಾವಣಾ ಆಯೋಗದ ನಿಯಮಗಳ ಪ್ರಕಾರ, ಒಂದು ವಿಧಾನ ಸಭಾ ಕ್ಷೇತ್ರದ ಮತದಾರನ ಚೀಟಿಯನ್ನು ರದ್ದುಪಡಿಸಲು ಅರ್ಜಿ ಸಲ್ಲಿಸುವವರು ಅದೇ ಕ್ಷೇತ್ರದ ಮತದಾರರು ಆಗಿರಬೇಕು.

ಆರು ಮಂದಿ ಬಂಧನಕ್ಕೆ ತಯಾರಿ

30 ವ್ಯಕ್ತಿಗಳ ವಿಚಾರಣೆ ನಡೆಸಿರುವ ಎಸ್‌ಐಟಿ ಆರು ಮಂದಿಯ ಬಂಧನಕ್ಕೆ ಸಿದ್ಧತೆ ನಡೆಸಿದೆ.

- ಅಕ್ರಮವಾಗಿ ಅರ್ಜಿ ಸಲ್ಲಿಸಿದ್ದವರಿಗೆ ದೊಡ್ಡಮೊತ್ತದ ಹಣ ನೀಡಿದ್ದ ಸೈಬರ್ ಸೆಂಟರ್ ಮಾಲೀಕ ಅಶ್ಫಾಕ್
- ಅಶ್ಫಾಕ್‌ಗೆ ಚಾರ್ಟರ್ಡ್ ಅಕೌಂಟೆಂಟ್ (ಸಿ.ಎ) ಒಬ್ಬರಿಂದ ಹಣ ರವಾನೆ. ಸಿ.ಎಗೆ ಬಾರ್ ಉದ್ಯೋಗಿಯಿಂದ ಹಣ
- ಕಲಬುರಗಿಯ ಇಬ್ಬರು ಸಿ.ಎಗಳ ಮನೆ, ಸುಭಾಷ ಗುತ್ತೇದಾರ ಅವರ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಶೋಧ ನಡೆಸಿದ್ದ ಎಸ್‌ಐಟಿ
- ಚುನಾವಣಾ ಆಯೋಗದ ಪೋರ್ಟಲ್‌ಗೆ ಲಾಗಿನ್ ಆಗಲು ಸಾವಿರಕ್ಕೂ ಹೆಚ್ಚು ನಕಲಿ 'ಬಳಕೆದಾರರ ಖಾತೆ' ಸೃಷ್ಟಿ
- ಅರ್ಜಿಗಳನ್ನು ಸಲ್ಲಿಸಲು 'ಬಲ್ಕ್ ಅಪ್‌ಲೋಡ್' ತಂತ್ರಾಂಶ ಬಳಸಲಾಗಿದೆಯೇ ಎಂಬ ದಿಕ್ಕಿನಲ್ಲಿ ತನಿಖೆ
- ಸುಭಾಷ ಗುತ್ತೇದಾರ ಅವರ ಮನೆಯಲ್ಲಿ ಪತ್ತೆಯಾದ ಅರೆಬರೆ ಸುಟ್ಟ ಮತದಾರರ ಅರ್ಜಿಗಳು, ಸೈಬರ್ ಸೆಂಟರ್‌ನಿಂದ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಪರಸ್ಪರ ಹೋಲಿಸಿ ತನಿಖೆ

12 ಸಾವಿರಕ್ಕೂ ಹೆಚ್ಚು ಚೀಟಿ ರದ್ದತಿಗೆ ಯತ್ನ

ಆರೋಪಿಗಳು ತಾವು ಸೃಷ್ಟಿಸಿದ್ದ ಬಳಕೆದಾರರ ನಕಲಿ ಖಾತೆಗಳ ಮೂಲಕ ಅಕ್ರಮವಾಗಿ 12,000ಕ್ಕೂ ಹೆಚ್ಚು ಮತದಾರರ ಚೀಟಿಗಳನ್ನು ರದ್ದುಪಡಿಸಲು ಅರ್ಜಿ ಸಲ್ಲಿಸಲು ಯತ್ನಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಆದರೆ ಒಂದು 'ಬಳಕೆದಾರರ ಖಾತೆ' ಮೂಲಕ ಗರಿಷ್ಠ ಆರು ಅರ್ಜಿಗಳನ್ನು ಮಾತ್ರ ಸಲ್ಲಿಸಬಹುದಾಗಿದೆ. ಹೀಗಾಗಿ ಸುಮಾರು 6,000 ಅರ್ಜಿಗಳು ಸಲ್ಲಿಕೆಯ ವೇಳೆಯೇ ತಿರಸ್ಕೃತವಾಗಿವೆ. 6,018 ಅರ್ಜಿಗಳು ಮಾತ್ರ ಸಲ್ಲಿಕೆಯಾಗಿವೆ ಎಂದೂ ಎಸ್‌ಐಟಿ ಮೂಲಗಳು ಹೇಳಿವೆ.

ಆಳಂದ ಕ್ಷೇತ್ರದ ವಿವಿಧ ಮತಗಟ್ಟೆಗಳ ಮತದಾರರ ಪಟ್ಟಿಯನ್ನು ಇರಿಸಿ ಕೊಂಡಿದ್ದ ಆರೋಪಿಗಳು, ಆ ಪೈಕಿ ಕೆಲ ಮಂದಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಮತದಾರರ ಎಪಿಕ್ ಸಂಖ್ಯೆ, ಹೊಸ ಸಿಮ್ ಕಾರ್ಡ್‌ಗಳ ಮೂಲಕ ನಕಲಿ 'ಬಳಕೆದಾರರ ಖಾತೆ' ಸೃಷ್ಟಿಸಿದ್ದಾರೆ.

'ಈ ಖಾತೆಗಳನ್ನು ಬಳಸಿಕೊಂಡು ಮತದಾರರ ಚೀಟಿಗಳನ್ನು ರದ್ದುಪಡಿಸಲು ಫಾರಂ-7 ಅನ್ನು ಸಲ್ಲಿಸಿದ್ದಾರೆ. ಈ ಅರ್ಜಿಗಳನ್ನು ಸಲ್ಲಿಸುವ ವೇಳೆ, ಅರ್ಜಿದಾರರ ಪರಿಚಯಸ್ಥರ ಮೊಬೈಲ್ ಸಂಖ್ಯೆ ನಮೂದಿಸುವುದು ಕಡ್ಡಾಯ. ಆ ಜಾಗದಲ್ಲಿ ಕೋಳಿ ಫಾರ್ಮ್‌ನ ಕೂಲಿ ಕಾರ್ಮಿಕರ ನಂಬರ್‌ಗಳನ್ನು ಹಾಕಿದ್ದಾರೆ. ಹೀಗೆ ಎಪಿಕ್ ಸಂಖ್ಯೆ, ಹೊಸ ಸಿಮ್ ಕಾರ್ಡ್‌ಗಳ ನಂಬರ್ ಮತ್ತು ಕೋಳಿ ಫಾರ್ಮ್ ಕೂಲಿಕಾರ್ಮಿಕರ ಮೊಬೈಲ್ ನಂಬರ್‌ಗಳನ್ನು ಸಂಯೋಜಿಸಿ ಸಾವಿರಕ್ಕೂ ಹೆಚ್ಚು 'ಬಳಕೆದಾರರ ಖಾತೆ'ಗಳನ್ನು ಸೃಷ್ಟಿಸಿದ್ದಾರೆ.

'2023ರ ಫೆಬ್ರುವರಿಯಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾದ ನಂತರ, ಪೊಲೀಸರು ಮೊಹಮ್ಮದ್ ಅಶ್ಫಾಕ್ ಅವರನ್ನು ಕರೆಸಿ ವಿಚಾರಣೆ ನಡೆಸಿದ್ದರು. ಕೆಲವೇ ದಿನಗಳಲ್ಲಿ ಆತ ದುಬೈಗೆ ಪರಾರಿಯಾಗಿದ್ದಾನೆ. ಆನಂತರದಲ್ಲಿ ಸೈಬರ್ ಸೆಂಟರ್‌ಗೆ ಬಾಗಿಲು ಹಾಕಲಾಗಿತ್ತು.

'ಪೊಲೀಸರು ಸಲ್ಲಿಸಿದ್ದ ವರದಿಯ ಆಧಾರದಲ್ಲಿ ಮೊಹಮ್ಮದ್ ಅಶ್ಫಾಕ್, ಸೈಬರ್ ಸೆಂಟರ್‌ನಲ್ಲಿ ಕೆಲಸ ಮಾಡಿದ್ದವರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ ದೊಡ್ಡ ಪ್ರಮಾಣದ ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿತ್ತು. ಈ ಎಲ್ಲರ ಮನೆ ಮೇಲೆ ದಾಳಿ ನಡೆಸಿ, ವಿಚಾರಣೆ ನಡೆಸಿದ ನಂತರ ಅಕ್ರಮವಾಗಿ ಅರ್ಜಿ ಸಲ್ಲಿಸಿದ್ದಕ್ಕೇ ಹಣ ಪಾವತಿ ಮಾಡಲಾಗಿದೆ ಎಂಬುದು ಗೊತ್ತಾಯಿತು.
9

ಓಡು ಓಡು ಓಡಲೇ...

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಹಾವೇರಿಯ ವೀರಭದ್ರೇಶ್ವರ ದೇವಸ್ಥಾನದ ಎದುರು ಬುಧವಾರ ಹಮ್ಮಿಕೊಂಡಿದ್ದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ 'ಹಾವೇರಿ ಏಳುಕೋಟಿ' ಹೋರಿಯ ರೋಮಾಂಚನಕಾರಿ ಓಟದ ನೋಟ

'ಶಕ್ತಿ' ಪ್ರದರ್ಶನಕ್ಕೆ ಪೈಪೋಟಿ

'ಪಥಸಂಚಲನ'ಕ್ಕೆ ಅನುಮತಿ ಕೋರಿ ಮತ್ತೆ 4 ಮನವಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ 'ಪಥಸಂಚಲನ'ದ ಮೂಲಕ 'ಶಕ್ತಿ' ಪ್ರದರ್ಶಿಸಲು ಪೈಪೋಟಿ ಹೆಚ್ಚುತ್ತಿದ್ದು, ನವೆಂಬರ್ 2ರಂದು ಪಥಸಂಚಲನ-ಪ್ರತಿಭಟನೆಗೆ ಅನುಮತಿ ಕೋರಿ ಮತ್ತೆ ನಾಲ್ಕು ಸಂಘಟನೆಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿವೆ.

ಸಾರ್ವಜನಿಕ ಸ್ಥಳದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿಷೇಧಿಸಬೇಕು ಎಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದ ಸಚಿವ ಪ್ರಿಯಾಂಕ್ ಖರ್ಗೆ ತವರು ಕ್ಷೇತ್ರದಲ್ಲೇ ಅದ್ದೂರಿಯಾಗಿ ಪಥಸಂಚಲನ ನಡೆಸಲು ಪಟ್ಟು ಹಿಡಿದಿರುವ ಆರ್‌ಎಸ್‌ಎಸ್, ಹೈಕೋರ್ಟ್ ನಿರ್ದೇಶನದಂತೆ ಅನುಮತಿ ಕೋರಿ ಜಿಲ್ಲಾಡಳಿತಕ್ಕೆ ಹೊಸದಾಗಿ ಅರ್ಜಿ ಸಲ್ಲಿಸಿತ್ತು. ಆರ್‌ಎಸ್‌ಎಸ್ ಪಥಸಂಚಲನಕ್ಕೆ ಪ್ರತಿಯಾಗಿ ಚಿತ್ತಾಪುರದಲ್ಲಿ ಅದೇ ದಿನದಂದು ಪಥಸಂಚಲನ, ಪ್ರತಿಭಟನೆ ನಡೆಸಲು ಇನ್ನಷ್ಟು ಸಂಘಟನೆಗಳು ಸಜ್ಜಾಗಿವೆ.

ಹೈಕೋರ್ಟ್‌ನಲ್ಲಿ ಇಂದು ವಿಚಾರಣೆ

ಆರ್‌ಎಸ್‌ಎಸ್ ಪಥಸಂಚಲನ ಕುರಿತ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಕಲಬುರಗಿ ಪೀಠ ಅಕ್ಟೋಬರ್ 24ರಂದು ಮಧ್ಯಾಹ್ನ ನಡೆಸಲಿದೆ.

ಚಿತ್ತಾಪುರದಲ್ಲಿ ಅಕ್ಟೋಬರ್ 19ರಂದು ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಮುಂದಾಗಿತ್ತು. ಆದರೆ, ಅದೇ ದಿನ ಮೆರವಣಿಗೆ ನಡೆಸಲು ಭೀಮ್ ಆರ್ಮಿ ಮತ್ತು ಭಾರತೀಯ ದಲಿತ ಪ್ಯಾಂಥರ್ ಸಂಘಟನೆಗಳೂ ಅವಕಾಶ ಕೋರಿದ್ದವು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಲಿದೆ ಎಂಬ ಕಾರಣ ನೀಡಿ, ತಹಶೀಲ್ದಾರರು ಮೂರೂ ಸಂಘಟನೆಗಳಿಗೆ ಅನುಮತಿ ನಿರಾಕರಿಸಿದ್ದರು.

ಇದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಮುಖಂಡ ಅಶೋಕ ಪಾಟೀಲ ಅವರು ಅ.19ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಕಲಬುರಗಿ ಪೀಠವು, ಹೊಸದಾಗಿ ಅರ್ಜಿ ಸಲ್ಲಿಸಲು ಸೂಚಿಸಿತ್ತು. ಪಥಸಂಚಲನ ಕುರಿತು ವರದಿ ಸಲ್ಲಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಿ, ಹೈಕೋರ್ಟ್ ವಿಚಾರಣೆಯನ್ನು ಮುಂದೂಡಿತ್ತು.

ಅಕ್ಟೋಬರ್ 21ರಂದು ಆರ್‌ಎಸ್‌ಎಸ್ ಜೊತೆಗೆ ಭೀಮ್ ಆರ್ಮಿ, ಭಾರತೀಯ ದಲಿತ ಪ್ಯಾಂಥರ್ ಸಂಘಟನೆಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದವು. ಬುಧವಾರದಂದು ಗೊಂಡ-ಕುರುಬ ಎಸ್.ಟಿ ಹೋರಾಟ ಸಮಿತಿ ಹಾಗೂ ಗುರುವಾರದಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಇಂಡಿಯನ್ ಕ್ರಿಶ್ಚಿಯನ್ ವೆಲ್‌ಫೇರ್ ಅಸೋಸಿಯೇಷನ್ ಕರ್ನಾಟಕ ಸಂಘಟನೆ ಹಾಗೂ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಮನವಿ ಮಾಡಿವೆ. ಇದರೊಂದಿಗೆ ಚಿತ್ತಾಪುರದಲ್ಲಿ ಪಥಸಂಚಲನ-ಮೆರವಣಿಗೆ ನಡೆಸಲು ಏಳು ಸಂಘಟನೆಗಳು ಮನವಿ ಮಾಡಿದಂತಾಗಿದೆ.
9

ಸಾಮೂಹಿಕ ಅತ್ಯಾಚಾರ: ಆರು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಬಾತ್ಮೀದಾರರು ಎಂದು ಹೇಳಿಕೊಂಡು ಬಾಡಿಗೆ ಮನೆಯೊಂದಕ್ಕೆ ನುಗ್ಗಿ ದರೋಡೆ ನಡೆಸಿ, ಪಶ್ಚಿಮ ಬಂಗಾಳ ಮೂಲದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಆರೋಪದಡಿ ಆರು ಮಂದಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಠಾಣೆಯ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ.

28 ವರ್ಷದ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ನವೀನ್, ಕಾರ್ತಿಕ್, ಸುಯೋಗ್, ಸೀನ ಹಾಗೂ ಜಂಗ್ಲಿ ಪೃಥ್ವಿ ಸೇರಿದಂತೆ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಮುಖ ಆರೋಪಿ ಮಿಥುನ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಪತಿ ಹಾಗೂ ಇಬ್ಬರು ಮಕ್ಕಳೊಂದಿಗೆ ಆರು ವರ್ಷದ ಹಿಂದೆ ಸಂತ್ರಸ್ತೆ ಬೆಂಗಳೂರಿಗೆ ಬಂದಿದ್ದರು.
8

ಕಾಂಗ್ರೆಸ್‌ನಲ್ಲೀಗ 'ಉತ್ತರಾಧಿಕಾರಿ ಪರ್ವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡೂವರೆ ವರ್ಷಗಳ ಬಳಿಕ 'ನಾಯಕತ್ವ ಬದಲಾವಣೆ' ಎಂಬ ವಿಷಯದ ಸುತ್ತ ಗಿರಕಿ ಹೊಡೆಯುತ್ತಿದ್ದ ಆಡಳಿತಾರೂಢ ಕಾಂಗ್ರೆಸ್‌ನ ಒಳ ರಾಜಕಾರಣ, ಈಗ 'ಉತ್ತರಾಧಿಕಾರಿ ಪರ್ವ'ದ ಕಡೆಗೆ ಹೊರಳಿದೆ.

ಡಾ. ಯತೀಂದ್ರ

ಬೆಳಗಾವಿಯಲ್ಲಿ ಬುಧವಾರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಡಾ. ಯತೀಂದ್ರ, 'ನನ್ನ ತಂದೆ ರಾಜಕಾರಣದ ಸಂಧ್ಯಾಕಾಲದಲ್ಲಿದ್ದಾರೆ. ಅವರಂತೆಯೇ ಸೈದ್ಧಾಂತಿಕ ರಾಜಕಾರಣ ದಲ್ಲಿ ನಂಬಿಕೆ ಇಟ್ಟಿರುವ ಸಚಿವ ಸತೀಶ ಜಾರಕಿಹೊಳಿ ಅವರು ಸಿದ್ದರಾಮಯ್ಯ ನಂತರ ಅಹಿಂದ ನಾಯಕತ್ವ ವಹಿಸಿ ಕೊಳ್ಳಲು ಸಮರ್ಥರು. ಹಾಗಂತ ನಾಯಕತ್ವ ಬದಲಾವಣೆಯ ಪ್ರಶ್ನೆ ಇಲ್ಲ' ಎಂದಿದ್ದರು. ಯತೀಂದ್ರ ಅವರ ಮಾತು ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿದೆ.

'ಘೋಷಿಸಲು ಯತೀಂದ್ರ ಯಾರು?'

ಹುಬ್ಬಳ್ಳಿ: 'ಮುಂದಿನ ಮುಖ್ಯಮಂತ್ರಿ ಕುರಿತು ಹೇಳಿಕೆ ನೀಡಲು ಡಾ.ಯತೀಂದ್ರ ಅವರಿಗೆ ಅಧಿಕಾರ ಕೊಟ್ಟಿದ್ದು ಯಾರು? ಅವರೊಬ್ಬ ವಿಧಾನ ಪರಿಷತ್ ಸದಸ್ಯ ಅಷ್ಟೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸಿದ್ದರಾಮಯ್ಯ ಅವರ ನಂತರ ನಾಯಕತ್ವ ವಹಿಸಿಕೊಳ್ಳಲು ಸತೀಶ ಜಾರಕಿಹೊಳಿ ಸಮರ್ಥರು ಎಂದು ಡಾ. ಯತೀಂದ್ರ ಹೇಳಿರುವುದಕ್ಕೆ ಗುರುವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಎಲ್ಲವನ್ನೂ ಡಾ. ಯತೀಂದ್ರ ಹೇಳುವುದಾದರೆ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕಥೆ ಏನಾಗಬೇಕು? ದೇವಾಲಯಗಳಿಗೆ ಭೇಟಿ ನೀಡಿ, ವಿಶೇಷ ಪೂಜೆ ಹಾಗೂ ತುಲಾಭಾರ ಸೇವೆ ಸಲ್ಲಿಸುತ್ತಿದ್ದಾರೆ. ನವೆಂಬರ್ ಕ್ರಾಂತಿ ವಿಷಯದ ಚರ್ಚೆಯೂ ಸಿದ್ದರಾಮಯ್ಯ ಅವರ ಮನೆಯಲ್ಲೇ ನಡೆದಿದೆ' ಎಂದರು.

ಸೂಕ್ತ ಸಮಯದಲ್ಲಿ ಪ್ರತಿಕ್ರಿಯೆ: ಡಿಕೆಶಿ

'ಈ ವಿಚಾರವಾಗಿ ಈ ಸಂದರ್ಭದಲ್ಲಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

'ಮುಖ್ಯಮಂತ್ರಿ ಬದಲಾವಣೆ ಕುರಿತು ಮಾತನಾಡುವ ಶಾಸಕರ ವಿರುದ್ಧ ಕೈಗೊಳ್ಳುವ ಶಿಸ್ತುಕ್ರಮ ಯತೀಂದ್ರ ವಿಷಯದಲ್ಲಿ ಯಾಕೆ ಇಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಸೂಕ್ತ ಸಮಯದಲ್ಲಿ ಪ್ರತಿಕ್ರಿಯೆ ನೀಡುತ್ತೇನೆ' ಎಂದರು.

'2028ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾನು ಮುಖ್ಯಮಂತ್ರಿಯಾಗಲು ಬಯಸುವೆ. ನಾನು 30 ವರ್ಷಗಳಿಂದ ಅಹಿಂದ ಪರ ಹೋರಾಡುತ್ತಿದ್ದೇನೆ. ಅಹಿಂದ ಇಲ್ಲದೇ ಸರ್ಕಾರ ರಚಿಸಲು ಆಗದು. ನಾಯಕತ್ವಕ್ಕೆ ಇನ್ನೂ ಸಾಕಷ್ಟು ಸಮಯವಿದೆ. ಮುಂದೆ ನೋಡೋಣ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ.

ಇತ್ತ ಬೆಂಗಳೂರಿನಲ್ಲಿ ಮಾತನಾಡಿದ ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, 'ಮುಖ್ಯಮಂತ್ರಿ ಸ್ಥಾನಕ್ಕೆ ಎಲ್ಲರೂ ಸಮರ್ಥರೇ. ಇಲ್ಲಿ ಯಾರೂ ಸನ್ಯಾಸಿಗಳಲ್ಲ' ಎನ್ನುವ ಮೂಲಕ ತಾವೂ ಆಕಾಂಕ್ಷಿ ಎಂದು ತಮ್ಮ ದಾಳ ಉರುಳಿಸಿದ್ದಾರೆ.

ಸಚಿವರಾದ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಆರ್.ಬಿ. ತಿಮ್ಮಾಪುರ, ಈಶ್ವರ ಖಂಡ್ರೆ ಅವರೆಲ್ಲರೂ ಪ್ರತಿಕ್ರಿಯೆ ನೀಡಿದ್ದಾರೆ.

ಡಿಸಿಎಂ ಡಿ.ಕೆ. ಶಿವಕುಮಾರ್ ಪರ ಯಾವತ್ತೂ ಧ್ವನಿ ಎತ್ತುತ್ತಿರುವ ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್, 'ಯತೀಂದ್ರ ಅವರ ಮಾತಿನ್ನೂ ಬಲಿತಿಲ್ಲ. ಜತೆಗೆ ಶಕ್ತಿಯೂ ಇಲ್ಲ. ಅವರು ವಿಧಾನಸಭೆ ಸದಸ್ಯರೂ ಅಲ್ಲ. ಅವರು ತಮ್ಮ ಇತಿಮಿತಿ ಅರಿತು ಗೌರವಯುತ ಹೇಳಿಕೆ ನೀಡಬೇಕು' ಎಂದಿದ್ದಾರೆ.

ಇನ್ನಷ್ಟು ಸುದ್ದಿ 5

ಚಿನಕುರುಳಿ — ಪ್ರಕಾಶ್ ಶೆಟ್ಟಿ

'ರಷ್ಯಾದಿಂದ ಭಾರತದ ತೈಲ ಖರೀದಿ ಶೀಘ್ರದಲ್ಲೇ ಸ್ಥಗಿತ'



ವಾಷಿಂಗ್ಟನ್/ನವದೆಹಲಿ (ಪಿಟಿಐ): ಭಾರತವು ಈ ವರ್ಷದ ಅಂತ್ಯದ ವೇಳೆಗೆ ರಷ್ಯಾದಿಂದ ಕಚ್ಚಾ ತೈಲ ಖರೀದಿ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಹೇಳಿದ್ದಾರೆ.

ಶ್ವೇತಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಅವರು, 'ಕಚ್ಚಾತೈಲ ಖರೀದಿ ಪ್ರಕ್ರಿಯೆ ಸಂಪೂರ್ಣವಾಗಿ ಸ್ಥಗಿತಗೊಳಿಸಲು ಸಮಯ ಬೇಕಾಗುತ್ತದೆ' ಎಂದೂ ಹೇಳಿದ್ದಾರೆ.

ರಷ್ಯಾದಿಂದ ಕಚ್ಚಾತೈಲ ಖರೀದಿಗೆ ಸಂಬಂಧಿಸಿ ಟ್ರಂಪ್ ಅವರ ಹೇಳಿಕೆಗೆ ಭಾರತ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಶುಭಾಶಯ ವಿನಿಮಯ: ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಅವರಿಗೆ ದೀಪಾವಳಿ ಶುಭಾಶಯಗಳನ್ನು ಕೋರಿದ್ದಾರೆ.

ಇನ್ನಷ್ಟು ಸುದ್ದಿ 8

ಭ್ರೂಣಲಿಂಗ ಪತ್ತೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ತಾಲ್ಲೂಕಿನ ಹಾರೋಹಳ್ಳಿ-ಹುನಗನಹಳ್ಳಿಹುಂಡಿ ಗ್ರಾಮಗಳ ಸಮೀಪದ ಫಾರಂ ಹೌಸ್‌ನಲ್ಲಿ ಭ್ರೂಣಲಿಂಗ ಪತ್ತೆ ಮಾಡುತ್ತಿದ್ದ ಆರೋಪದ ಮೇಲೆ ಮಹಿಳೆ ಸೇರಿದಂತೆ ನಾಲ್ವರನ್ನು ಬಂಧಿಸಿರುವ ವರುಣ ಠಾಣೆ ಪೊಲೀಸರು, ಮೂವರ ಪತ್ತೆಗೆ ಶೋಧ ನಡೆಸಿದ್ದಾರೆ.

ಬನ್ನೂರು ರಸ್ತೆಯ ಸುತ್ತಮುತ್ತಲ ಗ್ರಾಮಗಳಲ್ಲಿ ಭ್ರೂಣಲಿಂಗ ಪತ್ತೆ ಕಾರ್ಯ ನಡೆಯುತ್ತಿರುವ ಮಾಹಿತಿ ಮೇರೆಗೆ ಎರಡು ತಿಂಗಳಿಂದ ಕಣ್ಗಾವಲು ಇಟ್ಟಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಬುಧವಾರ ಕಾರ್ಯಾಚರಣೆ ನಡೆಸಿದರು.

ಮೈಸೂರಿನ ಸ್ವಾಮಿ, ಗೋವಿಂದರಾಜು, ಶ್ಯಾಮಲಾ, ಕಾರ್ತಿಕ್, ಕೆ.ಆರ್.ನಗರದ ಭೇರ್ಯ ಗ್ರಾಮದ ಹರೀಶ್



ನಾಯಕ, ಕೆ.ಸಾಲುಂಡಿಯ ಶಿವಕುಮಾರ್ ಹಾಗೂ ಪುಟ್ಟರಾಜು ಎಂಬವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸ್ಕ್ಯಾನಿಂಗ್ ಯಂತ್ರ ಹಾಗೂ ಲಾಕರ್‌ನಲ್ಲಿಟ್ಟಿದ್ದ ₹3 ಲಕ್ಷಕ್ಕೂ ಹೆಚ್ಚು ನಗದು, ಗರ್ಭಿಣಿಯರ ಮಾಹಿತಿ ಇದ್ದ ಡೈರಿ ಸಿಕ್ಕಿದೆ. ಭ್ರೂಣಲಿಂಗ ಪತ್ತೆಗೆ ₹25 ಸಾವಿರ ಮತ್ತು ಹೆಣ್ಣು ಭ್ರೂಣ ಹತ್ಯೆಗೆ ₹30 ಸಾವಿರ ಪಡೆಯುತ್ತಿದ್ದರು ಎನ್ನಲಾಗಿದೆ.

'ಗರ್ಭಿಣಿಯೊಬ್ಬರನ್ನು ತಪಾಸಣೆ ಮಾಡಿಸುವ ಸೋಗಿನಲ್ಲಿ ತಂಡವು ತೆರಳಿದ್ದಾಗ, ಆ ಮನೆಯಲ್ಲಿ ತಪಾಸಣೆಗೆಂದು ಬಂದಿದ್ದ ಮೂವರು ಗರ್ಭಿಣಿಯರು ಇದ್ದರು. ಸ್ಕ್ಯಾನಿಂಗ್ ಉಪಕರಣವೂ ಸಿಕ್ಕಿದೆ' ಎಂದು ಕಾರ್ಯಾಚರಣೆ ತಂಡದಲ್ಲಿದ್ದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.
8

HONDA
The Power of Dreams
How we move you.
CREATE ▸ TRANSCEND, AUGMENT

The Honda Joy Fest
Bring Home a Honda, Bring Home Joy
^GET GST BENEFIT UP TO ₹14000/-

ಇನ್‌ಸ್ಟೆಂಟ್ ಕ್ಯಾಶ್‌ಬ್ಯಾಕ್ ₹5000/-** ವರೆಗೆ | ಸಾಲ 100%* ವರೆಗೆ | ಕಡಿಮೆ ROI @6.99%* | ಕಡಿಮೆ EMI ₹49* ದಿನಕ್ಕೆ

Scan to download
MyHonda-India
Customer Connect App
HDFC BANK Credit Card
IDFC FIRST Bank CREDIT CARDS
ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ
ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX ; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of ₹40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75002. **Instant Cashback up to ₹4000 is available on selected HMSI models for EMI transactions made using IDFC Bank credit cards with a minimum transaction value of ₹40000. **The offer is valid on credit card transactions processed through Pine Labs machines only and is applicable for one transaction per card/order during the offer period. **The Instant Cashback offers from HDFC Bank and IDFC Bank are valid until 31st October 2025. ^GST benefit is based on a reduction from 28% to 18% GST on the Ex-showroom price of NX 200. ^The actual savings may vary depending on the selected model and state. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122052, India; **Website:** www.honda2wheelersindia.com; **Customer Care:** customercare@honda.hmsi.in

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆಯಿದೆ

ರುದ್ರಾಕ್ಷಿ ಪ್ರದರ್ಶನ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ತಿಕ ಮಾಸ ನಿಮಿತ್ತ ನಗರದಲ್ಲಿ ಮಹಾ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟವನ್ನು ಇದೇ 27ರವರೆಗೆ ಆಯೋಜಿಸಲಾಗಿದೆ.

ಜೆ.ಪಿ ನಗರ 1ನೇ ಹಂತದ ಸಂಗಮ ಸರ್ಕಲ್ ಬಸ್ ನಿಲ್ದಾಣದ ಬಳಿ ಇರುವ ಹೋಟೆಲ್ ಲಿ ಫೋಲಿಗ್‌ನಲ್ಲಿ ರುದ್ರಾಕ್ಷ ಸಂಸ್ಥೆ ವತಿಯಿಂದ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿಸಲಾಗಿದೆ.

ಅತ್ಯಂತ ವಿರಳವಾಗಿರುವ ದುಂಡುಮುಖದ ಒಂದು ಮುಖಿ ರುದ್ರಾಕ್ಷಿಗಳೂ (ಸುಮಾರು ₹4.5 ಲಕ್ಷ) ಸೇರಿದಂತೆ ಹಲವು ರೀತಿಯ ರುದ್ರಾಕ್ಷಿಗಳು ಲಭ್ಯವಿವೆ.

‘ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಅಸಲಿ ಹಾಗೂ ನಕಲಿ ರುದ್ರಾಕ್ಷಿಗಳ ಭಿನ್ನತೆ ತಿಳಿಸಲಾಗುವುದು. ಗುಣಮಟ್ಟದ ರುದ್ರಾಕ್ಷಿಗಳನ್ನು ಗ್ರಾಹಕರಿಗೆ ಮಾರಾಟ ಮಾಡುವುದರಲ್ಲಿ ಇಂಡಸ್ -ನೇಪಾಳ ರುದ್ರಾಕ್ಷ ಸಂಸ್ಥೆ ವಿಶ್ವಾಸಾರ್ಹತೆ ಹೊಂದಿದೆ. ಆಸಕ್ತರಿಗೆ ಇತರ ಮುಖಗಳ ರುದ್ರಾಕ್ಷಿಗಳನ್ನು ತರಿಸಿ ಕೊಡಲಾಗುವುದು’ ಎಂದು ಇಂಡಸ್-ನೇಪಾಳ ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ತಿಳಿಸಿದ್ದಾರೆ.

ಪ್ರದರ್ಶನ ಮತ್ತು ಮಾರಾಟ ಬೆಳಿಗ್ಗೆ 10.30ರಿಂದ ರಾತ್ರಿ 9ರವರೆಗೆ ಇರಲಿದೆ. ಮಾಹಿತಿಗೆ: 70973 96666.

ರಾಜ್ಯಕ್ಕಿಲ್ಲ ವರ್ತುಲ ರೈಲು?

ಭೂಸ್ವಾಧೀನಕ್ಕೆ ₹60 ಸಾವಿರ ಕೋಟಿ ಯೋಜನೆ ಕೈಬಿಡಲು ಮುಂದಾದ ರೈಲ್ವೆ

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು

- ಭೂಸ್ವಾಧೀನಕ್ಕೆ ರೈತರ ವಿರೋಧ
- ಮಾರ್ಗ ನಿರ್ಮಾಣಕ್ಕೆ ಕನಿಷ್ಠ ₹20 ಸಾವಿರ ಕೋಟಿ ಅಗತ್ಯ

ನವದೆಹಲಿ: ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲ (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ಕೈಬಿಡಲು ರೈಲ್ವೆ ಇಲಾಖೆ ಮುಂದಾಗಿದೆ.

ರೈಲ್ವೆ ಮಾರ್ಗ ನಿರ್ಮಾಣಕ್ಕೆ ಬೆಂಗಳೂರು ಸುತ್ತಮುತ್ತ 2,500 ಎಕರೆ ಜಮೀನು ಭೂಸ್ವಾಧೀನ ಮಾಡಿ-ಕೊಳ್ಳಬೇಕಾಗಿದೆ. ಭೂಸ್ವಾಧೀನಕ್ಕೆ ₹60 ಸಾವಿರ ಕೋಟಿ ವೆಚ್ಚ ಆಗಲಿದೆ. ಮಾರ್ಗ ನಿರ್ಮಾಣಕ್ಕೆ ಕನಿಷ್ಠ ₹20 ಸಾವಿರ ಕೋಟಿ ಬೇಕು. ಹೀಗಾಗಿ, ಈ ಯೋಜನೆ ಕಾರ್ಯಸಾಧು ಅಲ್ಲ ಎಂಬ ನಿಲುವಿಗೆ ಬರಲಾಗಿದೆ ಎಂದು ರೈಲ್ವೆ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು 240 ಕಿ.ಮೀ.ಯ ವರ್ತುಲ ರೈಲು ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು 2023ರ ನವೆಂಬರ್‌ನಲ್ಲಿ ಘೋಷಿಸಿದ್ದರು. ಮುಂದಿನ 50 ವರ್ಷಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ವರ್ತುಲ ರೈಲ್ವೆ ಯೋಜನೆ ರೂಪಿಸಲಾಗಿದೆ. ಈ ಯೋಜನೆಯು ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳ-ನ್ನು ಸಂಪರ್ಕಿಸುವ ಉದ್ದೇಶ ಹೊಂದಿದೆ ಎಂದೂ ತಿಳಿಸಿದ್ದರು. ಯೋಜನೆಯ ಸಾಧಕ-ಬಾಧಕಗಳನ್ನು ತಿಳಿಯಲು ₹7 ಕೋಟಿ ವೆಚ್ಚದಲ್ಲಿ ಸರ್ವೆ ನಡೆಸಲಾಗಿತ್ತು.

ನೈರುತ್ಯ ರೈಲ್ವೆಯ ನೇತೃತ್ವದಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ. ಭೂಸ್ವಾಧೀನಕ್ಕೆ ಆನೇಕಲ್, ಚನ್ನರಾಯಪಟ್ಟಣ ಮತ್ತಿತರ ಕಡೆಗಳಲ್ಲಿ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರಸ್ತಾವಿತ ಮಾರ್ಗದ ವಿನ್ಯಾಸ ಬದಲಿಸಬೇಕು ಎಂದು ವಡ್ಡರಹಳ್ಳಿ ಹಾಗೂ ತಿರುಮಗೊಂಡನಹಳ್ಳಿ ರೈತರು ಪಟ್ಟು ಹಿಡಿದಿದ್ದಾರೆ. ಇದರಿಂದಾಗಿ, ಡಿಪಿಆರ್ ಆರು ತಿಂಗಳುಗಳಷ್ಟು ವಿಳಂಬವಾಗಿದೆ. ಡಿಸೆಂಬರ್‌ನಲ್ಲಿ ರೈಲ್ವೆ ಇಲಾಖೆಗೆ ಡಿಪಿಆರ್ ಸಲ್ಲಿಕೆಯಾಗಲಿದೆ. ಆ ಬಳಿಕ, ಆರ್ಥಿಕ-ತಾಂತ್ರಿಕ ಕಾರ್ಯಸಾಧ್ಯತೆ ಗಮನಿಸಿ ಯೋಜನೆ ಕೈಬಿಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಕರ್ನಾಟಕಕ್ಕೆ ರೈಲ್ವೆ ನೀಡುತ್ತಿರುವ ವಾರ್ಷಿಕ ಅನುದಾನ ₹7,500 ಕೋಟಿ. ಹತ್ತಾರು ಯೋಜನೆಗಳಿಗೆ ಈ ಅನುದಾನ ಹಂಚಿಹೋಗುತ್ತದೆ. ಪ್ರತಿವರ್ಷ 70–80 ಕಿ.ಮೀ. ವರ್ತುಲ ರೈಲು ಮಾರ್ಗ ನಿರ್ಮಾಣಕ್ಕೆ ಯೋಜಿಸಲಾಗಿತ್ತು. ಭೂಸ್ವಾಧೀನ ಹಾಗೂ ಮಾರ್ಗ ನಿರ್ಮಾಣಕ್ಕೆ ಪ್ರತಿವರ್ಷ ಕನಿಷ್ಠ ₹5 ಸಾವಿರ ಕೋಟಿಯಾದರೂ ಅನುದಾನ ಒದಗಿಸಬೇಕಾಗುತ್ತದೆ. ಒಂದೇ ಯೋಜನೆಗೆ ಈ ಮೊತ್ತ ಮಂಜೂರು ಆಗುವುದೂ ಕಷ್ಟ’ ಎಂದೂ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ವರ್ತುಲ ರೈಲು ವಿನ್ಯಾಸ

ವರ್ತುಲ ರೈಲು

- **ಮೊದಲ ಹಂತ:** ನಿಡವಂದ–ದೊಡ್ಡಬಳ್ಳಾಪುರ– ದೇವನಹಳ್ಳಿ–ಮಾಲೂರು (96 ಕಿ.ಮೀ)
- **ಎರಡನೇ ಹಂತ:** ಮಾಲೂರು– ಆನೇಕಲ್ ರಸ್ತೆ– ಹೆಜ್ಜಾಲ (98 ಕಿ.ಮೀ)
- **ಮೂರನೇ ಹಂತ:** ಹೆಜ್ಜಾಲ–ಸೋಲೂರು–ನಿಡವಂದ (46 ಕಿ.ಮೀ)
- **ಒಟ್ಟು ಉದ್ದ:** 240 ಕಿ.ಮೀ. (ಮೂರು ಹಂತಗಳು)

‘ಮಹನೀಯರ ಇತಿಹಾಸ ತಿಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಬೈಲ್ ಗೀಳಿಗೆ ಬಿದ್ದಿರುವ ಇಂದಿನ ಯುವ ಪೀಳಿಗೆಗೆ ಓದಿನ ರುಚಿ ಹತ್ತಿಸಿ, ನಾಡಿನ ಇತಿಹಾಸದ ಮಹನೀಯರ ಬಗ್ಗೆ ತಿಳಿಸುವ ಅಗತ್ಯವಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಕಿತ್ತೂರು ರಾಣಿ ಚನ್ನಮ್ಮ ಜಯಂತಿಯಲ್ಲಿ ಮಾತನಾಡಿದ ಅವರು, ‘ಯುವ ಜನತೆಗೆ ಮೊಬೈಲ್ ಒಂದೇ ದುನಿಯಾ ಆಗಿದೆ. ಇದು ನಿಜಕ್ಕೂ ದುರದೃಷ್ಟಕರ. ಒಂದು ಕುಟುಂಬದಲ್ಲಿ ಪೋಷಕರು ಮತ್ತು ಮಕ್ಕಳು ಒಟ್ಟಿಗೆ ಕುಳಿತಿದ್ದರೂ ಒಬ್ಬರನ್ನೊಬ್ಬರು ಮಾತನಾಡಿಸದ ಸ್ಥಿತಿ ನಿರ್ಮಾಣವಾಗಿದೆ’ ಎಂದರು.

‘ಮಹನೀಯರ ಜಯಂತಿಗಳನ್ನು ಆಚರಿಸಿ ವಿದ್ಯಾರ್ಥಿಗಳು ಹಾಗೂ ಯುವ ಪೀಳಿಗೆಗೆ ಇತಿಹಾಸವನ್ನು ತಿಳಿಸಬೇಕು’ ಎಂದು ಹೇಳಿದರು.

‘ಹೆಣ್ಣೆಂದರೆ ಶಕ್ತಿದೇವತೆ. ಹೆಣ್ಣೊಬ್ಬಳು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬ ಪರಮಸತ್ಯವನ್ನು ಜಗತ್ತಿಗೆ ಸಾರಿದ ನಮ್ಮ ಕನ್ನಡ ಮಣ್ಣಿನ ಹೆಣ್ಣುಮಗಳು ಚನ್ನಮ್ಮ ಅವರು ಶೌರ್ಯ, ಧೈರ್ಯ, ತ್ಯಾಗ, ರಾಜನೀತಿ, ಮಾತೃವಾತ್ಸಲ್ಯ ಮುಂತಾದ ಸದ್ಗುಣಗಳ ಖನಿ. ಎಂದೆಂದಿಗೂ ಕನ್ನಡದ ಹೆಣ್ಣುಮಕ್ಕಳ ಪ್ರತಿನಿಧಿ’ ಎಂದರು.

‘ಸಮಸಮಾಜದ ಸಾಕಾರಕ್ಕೆ ಮುನ್ನುಡಿಯನ್ನು ಅಂದೇ ಬರೆದಿದ್ದ ರಾಣಿ ಚನ್ನಮ್ಮನವರಂಥ ವೀರವನಿತೆಯರು ಉದಯಿಸಿದ ಕನ್ನಡ ನಾಡು ಧನ್ಯ. ಆ ವೀರಮಾತೆಯ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸದಾ ಕಾಯಕ ಮಾಡಿ, ಜೀವನ ಸಾರ್ಥಕಪಡಿಸಿಕೊಳ್ಳೋಣ’ ಎಂದರು.

ಮಾಜಿ ಸಚಿವೆ ರಾಣಿ ಸತೀಶ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ್ ಮೂರ್ತಿ, ಲೇಖಕ ಮಹಾಂತೇಶ ಬಿರಾದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ದೇವಿ, ಜಂಟಿ ನಿರ್ದೇಶಕರಾದ ಬನಶಂಕರಿ ಅಂಗಡಿ, ಬಲವಂತರಾಯ ಪಾಟೀಲ ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆಗೆ ಶಿವರಾಜ ತಂಗಡಗಿ ಪುಷ್ಪಾರ್ಚನೆ ಮಾಡಿದರು. ಕೆ.ಎಂ. ಗಾಯತ್ರಿ, ರಾಣಿ ಸತೀಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಸಿ.ಎಂಗೆ ಅಮಾವಾಸ್ಯೆ- ಹುಣ್ಣಿಮೆ ಗೊತ್ತಿಲ್ಲ’

ಎರಡೂವರೆ ವರ್ಷದ ಬಳಿಕ ರಾಜ್ಯಕ್ಕೆ ಗ್ರಹಣ ಮುಕ್ತಿ: ತೇಜಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಹಿರಿಯರು, ಲೋಕಾನುಭವ ಹೊಂದಿರುವವರು. ಆದರೆ, ಅವರಿಗೆ ಅಮಾವಾಸ್ಯೆ ಮತ್ತು ಹುಣ್ಣಿಮೆ ನಡುವಿನ ವ್ಯತ್ಯಾಸ ಗೊತ್ತಿಲ್ಲ. ಅಮಾವಾಸ್ಯೆ ದಿನವೂ ಸೂರ್ಯ ಇರುತ್ತಾನೆ. ಹುಣ್ಣಿಮೆ ದಿನವೂ ಸೂರ್ಯ ಇರುತ್ತಾನೆ. ವರ್ಷದ 365 ದಿನವೂ ಪ್ರಕಾಶಮಾನ-ವಾಗಿರುವುದು ಸೂರ್ಯನೇ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

‘ತೇಜಸ್ವಿ ಸೂರ್ಯ ಅಲ್ಲ, ಅಮಾವಾಸ್ಯೆ ಸೂರ್ಯ’ ಎಂಬ ಸಿದ್ದರಾಮಯ್ಯ ಅವರ ಟೀಕೆಗೆ ಪ್ರತಿಕ್ರಿಯಿಸಿದ ತೇಜಸ್ವಿ, ‘ಅಮಾವಾಸ್ಯೆ ದಿನ ಇಲ್ಲದಿರುವವನು ಚಂದ್ರ. ಚಂದ್ರನನ್ನು ನೋಡಿ ಪ್ರಾರ್ಥನೆ ಮಾಡುವ ಜನರೊಂದಿಗೆ ಅವರು ಇದ್ದಾರೆ. ಹೀಗಾಗಿ ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಂದು ಸೂರ್ಯ ಇರುವುದಿಲ್ಲ ಎಂಬ ಗೊಂದಲಕ್ಕೆ ಸಿಲುಕಿದ್ದಾರೆ. ನಮಗೆ ಅಮಾವಾಸ್ಯೆ ಮತ್ತು ಹುಣ್ಣಿಮೆ ಎರಡೂ ದಿನವೂ ಮಹತ್ವದ್ದು. ಆ ಎರಡೂ ದಿನಗಳಂದು ಲಕ್ಷ್ಮೀ ಪೂಜೆ ಮಾಡುತ್ತೇವೆ’ ಎಂದರು.

‘ಸಿದ್ದರಾಮಯ್ಯ ಹಲವು ಬಾರಿ ನನ್ನ ಬಗ್ಗೆ ವೈಯಕ್ತಿಕ ಟೀಕೆ ಮಾಡಿದ್ದಾರೆ. ಹಿಂದೆ ಚುನಾವಣೆ ವೇಳೆಯೂ ಟೀಕಿಸಿದ್ದರು. ಅವರು ಹಿರಿಯರು, ಅವರ ಬಗ್ಗೆ ವೈಯಕ್ತಿಕ ಟೀಕೆ ಮಾಡುವುದಿಲ್ಲ. ಸಂಸದನಾಗಿ ಅದು ನನಗೆ ಶೋಭೆ ತರುವುದಿಲ್ಲ. ನನ್ನ ತಂದೆ ವಯಸ್ಸಿನ ಅವರ ಬಗ್ಗೆ ಮಾತನಾಡುವ ಸಂಸ್ಕಾರವೂ ನನ್ನದಲ್ಲ’ ಎಂದು ತೇಜಸ್ವಿ ಹೇಳಿದರು.

‘ರಾಜ್ಯಕ್ಕೆ ಹಿಡಿದಿರುವ ದೊಡ್ಡ ಗ್ರಹಣವೆಂದರೆ ಕಾಂಗ್ರೆಸ್ ಆಡಳಿತ. ಎರಡೂವರೆ ವರ್ಷದ ನಂತರ ರಾಜ್ಯಕ್ಕೆ ಹಿಡಿದ ಗ್ರಹಣ ಮುಕ್ತಿಯಾಗುತ್ತದೆ. ಆ ಬಳಿಕ ಕರ್ನಾಟಕ ಸೂರ್ಯ–ಚಂದ್ರ ಇರುವವರೆಗೂ ಪ್ರಕಾಶಮಾನವಾಗಿ ಬೆಳಗುತ್ತದೆ’ ಎಂದರು.

‘ಕರ್ನಾಟಕಕ್ಕೆ ಹಿಡಿದಿರುವ ಗ್ರಹಣ ನಿಮ್ಮ ಆಡಳಿತ. ನೀವು ಅಧಿಕಾರಕ್ಕೆ ಬಂದು ಸುಮಾರು ಎರಡೂವರೆ ವರ್ಷವಾಗಿದೆ. ಬೆಂಗಳೂರು ರಸ್ತೆ ಗುಂಡಿಗಳಿಂದ ಜನರು ನರಕ ಯಾತನೆ ಅನು-ಭವಿಸುತ್ತಿದ್ದಾರೆ. ನಿಮ್ಮ ಆಡಳಿತ ಎಷ್ಟು ಚೆನ್ನಾಗಿದೆ ಎಂಬುದಕ್ಕೆ ಬೆಂಗಳೂರಿನ ರಸ್ತೆ ಗುಂಡಿಗಳೇ ಸಾಕ್ಷಿ’ ಎಂದು ಹೇಳಿದರು.

‘ಲಾಲ್‌ಬಾಗ್ ಜಾಗ ಬಿಟ್ಟುಕೊಡಲ್ಲ’

ಸುರಂಗಮಾರ್ಗಕ್ಕೆ ಲಾಲ್‌ಬಾಗ್‌ನ ಒಂದಿಂಚೂ ಜಾಗ ಬಿಟ್ಟುಕೊಡುವುದಿಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

‘ಈ ಯೋಜನೆಯ ಡಿಪಿಆರ್ ಸರಿ ಇಲ್ಲ ಎಂದು ನಗರಾಭಿವೃದ್ಧಿ ಇಲಾಖೆ ತಜ್ಞರ ಸಮಿತಿಯೇ ಹೇಳಿದೆ. ₹20 ಸಾವಿರ ಕೋಟಿಯ ಈ ಯೋಜನೆ ಕೇವಲ ಶೇ 10ರಷ್ಟು ಕಾರು ಮಾಲೀಕರಿಗೆ ಪ್ರಯೋಜನಕಾರಿ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ತೇಜಸ್ವಿ ಸೂರ್ಯ

ಅತ್ಯಾಚಾರ: ಎಸ್‌ಐಟಿ ರಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಹಲವು ಭಾಗಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ದೌರ್ಜನ್ಯ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಬೇಕು’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಂಕರ್ ಗುಹಾ ದ್ವಾರಕನಾಥ್ ಒತ್ತಾಯಿಸಿದ್ದಾರೆ.

‘ಬಸವನಗುಡಿಯ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ. ಒಂದು ವರ್ಷದ ಅವಧಿಯಲ್ಲಿ ಇದೇ ಸಂಸ್ಥೆಯಲ್ಲಿ ನಾನಾ ಕಾರಣಗಳಿಗೆ ನಾಲ್ಕೈದು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ. ಶಿಸ್ತಿನ ಹೆಸರಲ್ಲಿ ಶಾಲೆಯೊಂದರಲ್ಲಿ ಮುಖ್ಯ ಶಿಕ್ಷಕ ಹಿಂಸೆ ನಡೆಸಿರುವುದನ್ನು ನೋಡಿದ್ದೇವೆ. ಇಂತಹ ಪ್ರಕರಣಗಳಲ್ಲಿ ಸರಿಯಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು’ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಬಸವನಗುಡಿಯ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಪ್ರಕರಣಗಳ ಬಗ್ಗೆ ಸ್ಥಳೀಯ ಶಾಸಕ ರವಿಸುಬ್ರಹ್ಮಣ್ಯ ಹಾಗೂ ಸಂಸದ ತೇಜಸ್ವಿ ಸೂರ್ಯ ಏಕೆ ಮಾತನಾಡುತ್ತಿಲ್ಲ’ ಎಂದಿದ್ದಾರೆ.

ದಾಸ್ತಾನ್ ಟೆಕ್ ಫೆಸ್ಟ್ ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್ ಅಧ್ಯಯನದ ವಿದ್ಯಾರ್ಥಿಗಳಲ್ಲಿ ತಂತ್ರಜ್ಞಾನ ಮತ್ತು ಸೃಜನಶೀಲತೆಯನ್ನು ಒರೆಗೆ ಹಚ್ಚುವ ಮೂರು ದಿನಗಳ ‘ದಾಸ್ತಾನ್–2025 ಟೆಕ್ ಫೆಸ್ಟ್’ ಇತ್ತೀಚೆಗೆ ನಡೆಯಿತು.

‘ಶಿಕ್ಷಣವು ಜ್ಞಾನ, ಕರುಣೆ ಮತ್ತು ಸಾಮಾಜಿಕ ಜವಾಬ್ದಾರಿ ಒಟ್ಟುಗೂಡಿಸುವ ಮಾಧ್ಯಮ’ ಎಂಬ ಸಂದೇಶದೊಂದಿಗೆ ಅಮೃತ ವಿಶ್ವವಿದ್ಯಾಪೀಠಂ ವತಿಯಿಂದ ಬೆಂಗಳೂರು ನಗರದ ಕ್ಯಾಂಪಸ್‌ನಲ್ಲಿ ನಡೆದ ಈ ಉತ್ಸವದಲ್ಲಿ ದೇಶದ ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಯುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪತ್ತೆಹಚ್ಚಿ ಅವರಿಗೆ ತಮ್ಮ ತಾಂತ್ರಿಕ ಜ್ಞಾನ ಮತ್ತು ಸಮಸ್ಯೆಗಳ ಪರಿಹಾರ ಕಲ್ಪಿಸುವ ಮತ್ತು ಅವರ ಕೌಶಲ ಪ್ರದರ್ಶಿಸಲು ಇದು ಅನುವು ಮಾಡಿಕೊಟ್ಟಿತು.

‘ನಿಯೋ ಟೆರ್ರಾ–ಎ ನ್ಯೂ ವರ್ಲ್ಡ್’ ಎಂಬ ವಿಷಯ ವಸ್ತುವನ್ನು ಒಳಗೊಂಡ ದಾಸ್ತಾನ್–2025ರಲ್ಲಿ, ಪ್ರಾತ್ಯಕ್ಷಿಕೆ, ಹ್ಯಾಕಥಾನ್‌ಗಳ ವೈವಿಧ್ಯಮಯ ಸರಣಿ ಸ್ಪರ್ಧೆ ನಡೆದವು. ‘ಹ್ಯಾಕ್ ಯುವರ್ ಲೈಫ್’ ಹ್ಯಾಕಥಾನ್ ಮತ್ತು ‘ಚೈನ್ ರಿಯಾಕ್ಷನ್ ಚಾಲೆಂಜ್’ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು (ಎಐ) ಬಳಸಿ ದೈನಂದಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವ ಪ್ರಾತ್ಯಕ್ಷಿಕೆಗಳು ಗಮನ ಸೆಳೆದವು.

‘ಪಿಕ್ಸೆಲ್ಸ್ ಅಂಡ್ ಪರ್ಸ್ಪೆಕ್ಟಿವ್ಸ್’ ವರ್ಕ್‌ಶಾಪ್‌ನಲ್ಲಿ ಅಂತರರಾಷ್ಟ್ರೀಯ ತಜ್ಞರು ಛಾಯಾಗ್ರಹಣದ ತಾಂತ್ರಿಕ ಮತ್ತು ಕಲೆಯ ಅಂಶಗಳ ಕುರಿತು ತರಬೇತಿ ನೀಡಿದರು. ಜನಪ್ರಿಯ ರೋಬೋ ವಾರ್ಸ್ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮತ್ತು ಅನ್ಯ ರಾಜ್ಯಗಳಿಂದ ಬಂದ ತಂಡಗಳು ತಮ್ಮ ಅತ್ಯಾಧುನಿಕ ರೋಬೋಟಿಕ್ ವಿನ್ಯಾಸ ಹಾಗೂ ನಿಯಂತ್ರಣ ಕೌಶಲವನ್ನು ಪ್ರದರ್ಶಿಸಿದವು. ಉತ್ಸವದ ನೇತೃತ್ವವನ್ನು ಸ್ವಾಮಿ ನಿಷ್ಕಾಮಾಮೃತ ಚೈತನ್ಯ ವಹಿಸಿದ್ದರು. ಹಿನ್ನೆಲೆ ಗಾಯಕ ಕಾರ್ತಿಕ್ ಅಂತಿಮ ದಿನ ಸಂಗೀತ ಸಂಜೆ ನಡೆಸಿಕೊಟ್ಟರು.

ಅಮೃತ ವಿಶ್ವವಿದ್ಯಾಲಯ ವಿದ್ಯಾಪೀಠಂನ ಬೆಂಗಳೂರು ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಮೂರು ದಿನಗಳ ‘ದಾಸ್ತಾನ್–2025 ಟೆಕ್ ಫೆಸ್ಟ್’ ಆಚರಿಸಲಾಯಿತು.

ದಿವ್ಯಾ ಹಾಗರಗಿ ಸೇರಿ ಏಳು ಬಂಧನ

ಕಲಬುರಗಿ: ಸಾಮಾಜಿಕ ಕಾರ್ಯಕರ್ತೆ ಹಾಗೂ ಪಿಎಸ್‌ಐ ಹಗರಣ ಪ್ರಕರಣದ ಆರೋಪಿ ದಿವ್ಯಾ ಹಾಗರಗಿ ಮನೆ ಮೇಲೆ ಕಲಬುರಗಿ ಸಿಸಿಬಿ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ.

‘ಮನೆಯಲ್ಲಿ ಗುಂಪುಕಟ್ಟಿ ಕೊಂಡು ಇಸ್ಪೀಟ್ ಜೂಜಾಟ ನಡೆಸುತ್ತಿದ್ದ ವೇಳೆ ದಾಳಿ ನಡೆಸಿ, ಏಳು ಮಂದಿಯನ್ನು ಬಂಧಿಸಲಾಗಿದೆ. ಜೂಜಾಟದಲ್ಲಿ ಪಣಕ್ಕೆ ಇಟ್ಟಿದ್ದ ₹12,500 ಸೇರಿ ಒಟ್ಟು ₹42,500 ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಸುಂದರರಾಜ್ ರೈ

ಬೆಂಗಳೂರು: ತುಳುಕೂಟದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಸುಂದರರಾಜ್ ರೈ (57) ಅವರು ಹೃದಯಾಘಾತದಿಂದ ಗುರುವಾರ ಮಲ್ಲೇಶ್ವರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಪುತ್ರಿ ಹಾಗೂ ಪತ್ನಿ ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕುಕ್ಕುಂಜೋಡು ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಶುಕ್ರವಾರ ಬೆಳಿಗ್ಗೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ
ಸಾರ್ವಜನಿಕ ಆಸ್ಪತ್ರೆ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂ: ಸಾಆನೆ/ಡಯಟ್‌ಟೆಂಡರ್/21/2025–26 ಸಂ: 18.10.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ನೆಲಮಂಗಲ ಇಲ್ಲಿನ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ, ಹಾಲು, ಬ್ರೆಡ್, ಬಾಳೆಹಣ್ಣು, ಕೋಳಿಮೊಟ್ಟೆ ಸರಬರಾಜು ಸಂಬಂಧ ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ನಿಯಮ 1999–2000ರಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಅರ್ಹ ಅಧಿಕೃತ ಸಂಸ್ಥೆದಾರರು ಟೆಂಡರ್ ಫಾರಂಗಳನ್ನು ದಿನಾಂಕ 23.10.2025 ರಿಂದ **ದಿನಾಂಕ 06.11.2025ರ ಸಂಜೆ 05–00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ–ಲಕೋಟೆ ಪದ್ಧತಿಯಂತೆ ಸಲ್ಲಿಸುವುದು. ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ **06.11.2025 ರಂದು ಸಂಜೆ 05:00 ಗಂಟೆಯೊಳಗಾಗಿ** ಟೆಂಡರ್ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಲಕೋಟೆ ತೆರೆಯುವ **ದಿನಾಂಕ: 10.11.2025 ಸಂಜೆ 4:00 ಗಂಟೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in**ರ ಮೂಲಕ ಅಥವಾ ಆಸ್ಪತ್ರೆಯ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–
ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ

DIPR/CP/3378/SA/2025-26

NOTICE

Inviting application for Requirement of Security guards at **Marshal & Baird Barrack, Bangalore.** Interested agencies / firms can apply. Details can be obtained from **56 COY ASC (Supply) Type ‘G’,** Bangalore on any working day till **24 Oct 2025** between **0900 Hrs to 1400 Hrs.**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–263/2776/2025–26 ದಿನಾಂಕ:23.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ (ಹೈಟೆಕ್) ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Suraksha Builders & Developers Pvt Ltd., # 722, 37th Cross, 9th Main, 5th Block, Jayanagar, Bangalore-560 041	ಆನೇಕಲ್	ಸರ್ಜಾಪುರ	ರಾಯಸಂದ್ರ	143	2–15	ಕೈಗಾರಿಕೆ (ಹೈಟೆಕ್) ವಲಯ	ವಸತಿ

ಷರಾ: ಅರ್ಜಿದಾರರು ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ.143(ಹಳೇ ಸರ್ವೆ ನಂ.91) ರಲ್ಲಿರುವ 02 ಎಕರೆ 15 ಗುಂಟೆ ಜಮೀನು ಕೈಗಾರಿಕೆಗೆ ಬಳಸಲು ಸಾಧ್ಯವಿರುವುದಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು ‘ಕೈಗಾರಿಕೆ (ಹೈಟೆಕ್) ವಲಯ’ದಿಂದ ‘ವಸತಿ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anekal

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Farm House/ Land/ Resorts

Nelamangala

2 Acres 5 Guntas Land for Sale near Sondekoppa, Nelamangala. Quick and transparent deal. Good location for Layout. Direct Owners: +917899028881

RENTAL PROPERTIES

Accommodation Available

Commercial

RENT PREMIUM 3600sqft furnished office at 4th Flr Vishnupriya Towers Beside Srirampura Metro Station. 6 Cabins, 45 Workstations,Lift, Pantry, Parking. Contact: 9900029200

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Accounts & Finance

WANTED MALE/ Female Accountant for a Construction Company in Indiranagar. Call: 9642509718

General

WANTED BE / Diploma in Electrical Mechanical to take Part-time / Full-time Diploma Day & Evening classes. Wanted: Admission Development Officer, Assistants & Helpers. Contact personally with a resume, original documents. Nadgir Institute, Near Modi Hospital, Rajajinagar, Bangalore – 560010 Ph: 23387333, 8867065525, 9731721446.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Business

WE BUY RUNNING/ Sick Industries, Industrial Metal Scraps,Copper, Aluminium, Building Dismantle/ Demolition,Immediate Payment. Contact Verna Metals, Barton Centre, MG Road. 9620253180.

PERSONAL

Change of Name

I, RITHIKA PRASAD CLIFFORD Residing at No.134, 1st Floor, 3A Cross, Kasturinagar, Bangalore-560043 hereby state that both the names RITHIKA PRASAD and RITHIKA PRASAD CLIFFORD refer to one and the same person ie., myself, vide affidavit dated 27-09-2025 before Notary Y.R. Chandrasekar, Bangalore.

I, KASHI VISHWANATH CHARI PURUSHOTHAMACHARI, Residing At Papagni Matha Kalavara Village And Post Chickballapur 562103 have changed my name to KASHIVISHWANATHA CHARY PURUSHOTHAMACHARI Vide Affidavit dated 21.10.2025 sworn before advocate and notary K.H. Venkatappa, Chickaballapur.

PROPERTY CORNER

BDA AUCTIONED SITE FOR SALE IN THE PRIME LOCALITY
Property / Site bearing No. 17, 4th Cross, Maruthinagar, Nagarabhavi Main Road, 1st Stage, Maruthinagar, Chandra Layout, Bangalore-560 072, measuring 40'x40' = 1600 sqft. (Adjacent to “MARUTHI ARCADE”).
Interested parties may Contact: **98441 01612** from 9am to 5pm

CHANGE OF NAME
I, **G.V.Kumar,** Residing at # 342 MIG Type-A, Suryanagar, Chandapura, Bengaluru - 560099, have changed our minor son's name from **HARPREETH S K** to **HARPREETH S KUMAR** vide affidavit dated 15-09-2025 before notary Onkarappa N.R. Bengaluru. Henceforth he shall be called as **HARPREETH S KUMAR** only

CHANGE OF NAME
I, **SONIYA SHARIFF,** residing at No. B-29, 1105, 2nd Floor, BDA Flats, Austin Town, Vivekanagar, Bengaluru- 560047, have changed my name to **SOCORRINHA BERTA VAZ** vide affidavit dated 23-10-2025 before notary M.Narendran, Bengaluru. Henceforth I shall be called as **SOCORRINHA BERTA VAZ** only.

CHANGE OF NAME
I Suni Chenichery Nambiar W/o Santhosh Kumar Vadakayil R/o B-002 Keerthi Harmony Apts, Raghavendra Nagar, Horamavu Road, Ramamurthy Nagar, Blore - 16 Have Changed My Name to Suni Nambiar, Vide Affidavit Date 29-9-25, Sworn Before Notary Ms. B. Chitra, Blore Henceforth I Shall be called as Suni Nambiar Only.

I, MR. SYED MOHSIN, Father of Minor son SYED MOHSIN ZAIN Residing at #416, 2nd Floor, 3rd Cross, Opp HLRC, Whitefield, Bengaluru-560066, is changing to New name SYED ZAIN, vide affidavit dated 22/10/2025 before Notary Veena J, Bengaluru.

I, GURUDATTA PATIL, residing at Laggere, Bengaluru-58 have changed my name as GURUDATTA RUDRANI PATIL vide affidavit dated 23/10/2025 before Notary K.S. Bammappanavar, Bengaluru

I, JYOTHI BYSANI NAGARAJ, Residing at No.Old 51/1, New 111 Sannidi Road, Behind APS College Basavanagudi, Bengaluru 560004 have changed my name to JYOTHI SRIDHAR Vide Affidavit dated 21.10.2025 sworn before advocate and notary K.H. Venkatappa, Chickaballapur.

Lost

ದಾಖಲೆಗಳು ಕಳೆದುಹೋಗಿದೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಾವುಗಳು ಮೇದಾ ಕೃಷ್ಣಮೂರ್ತಿ ಬಿನ್ ಲೇಟ್.ಲಕ್ಷ್ಮೀ ನಾರಾಯಣಯ್ಯ. ಎಂ. ವಯಸ್ಸು 64 ವರ್ಷ, ವಾಸ ನಂ. 313/53,7ನೇ ಮುಖ್ಯರಸ್ತೆ, ವಿಲ್ಸನ್‌ಗಾರ್ಡನ್, ಕೆ.ಜಿ. ಇಂಗ್ಲೀಷ್ ಶಾಲೆ, ಆಡುಗೋಡಿ, ಬೆಂಗಳೂರು ದಕ್ಷಿಣ –560 030 ಮತ್ತು ಕೆ.ವಿ. ಸತ್ಯನಾರಾಯಣ ಬಾಬು ಬಿನ್ ಲೇಟ್.ಕೆ.ವಿ. ವೆಂಕಟರಾಮಯ್ಯ ಶೆಟ್ಟಿ, ವಯಸ್ಸು 63 ವರ್ಷ, ವಾಸ ನಂ. 6, 3ನೇ ಮುಖ್ಯ ಮೌಂಟ್ ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ, ಬೆಂಗಳೂರು–560 019 ರಲ್ಲಿ ವಾಸವಾಗಿದ್ದು, ಬೆಂಗಳೂರು ಕಾರ್ಪೋರೇಷನ್‌ಗೆ ಹೊಂದಿಕೊಂಡಂತೆ ಸುಂಕೇನಹಳ್ಳಿ, 9ನೇ ಅಡ್ಡರಸ್ತೆ, ನಿವೇಶನದ ಮುನಿಸಿಪಲ್ ನಂ. 43, ಬಿಡಿಎ ನಂ. 28/ಬಿ ರ ಸ್ವತ್ತಿಗೆ ಸಂಬಂಧಿಸಿದ ಚಕ್ಕುಬಂಧಿ ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನದ ಸಂಖ್ಯೆ 28/ಎ, ಉತ್ತರಕ್ಕೆ ಸೈಟ್ ನಂ.35 ಮತ್ತು ದಕ್ಷಿಣಕ್ಕೆ ರಸ್ತೆ ರ ಸ್ವತ್ತಿಗೆ ಸಂಬಂಧಿಸಿದ ಅಳತೆ ಪೂರ್ವ & ಪಶ್ಚಿಮಕ್ಕೆ: 24 ಅಡಿ ಮತ್ತು ಉತ್ತರ & ದಕ್ಷಿಣಕ್ಕೆ 30 ಅಡಿ ಮೂಲ ಕ್ರಯ ಪತ್ರದ ದಿನಾಂಕ 20–04–2015, ನೋಂದಣಿ ಸಂಖ್ಯೆ 543/2015–16 ಮತ್ತು ನಕಲು ಕ್ರಯ ಪತ್ರದ ದಿನಾಂಕ 21–08–2006, ದಸ್ತಾವೇಜು ನಂ. 2628/06–07 ರ ದಸ್ತಾವೇಜುಗಳು ಕಳೆದು ಹೋಗಿದ್ದು, ಸದರಿ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ನಾನು ಬೆಂಗಳೂರು ಸಿಟಿ ಪೊಲೀಸ್‌ನವರಲ್ಲಿ ದೂರು ಸಂಖ್ಯೆ 1845229/2025 ದಿನಾಂಕ: 10–10–2025 ರಂದು ನೀಡಿರುತ್ತೇನೆ. ಈ ಮೇಲಿನ ಆಸ್ತಿಯ ದಾಖಲೆಗಳು ಟ್ರಾವೆಲ್ ಮಾಡುವಾಗ ಕಳೆದುಹೋಗಿರುತ್ತದೆ.
ಆದ್ದರಿಂದ ಯಾರಿಗಾದರೂ ಈ ದಸ್ತಾವೇಜುಗಳು ದೊರಕಿದ ಪಕ್ಷದಲ್ಲಿ ಮೊಬೈಲ್ ನಂ. 98440 46255 ಗೆ ಕರೆ ಮಾಡಿ ತಿಳಿಸತಕ್ಕದ್ದು.

ಆನೇಕಲ್ ಭಾಗ ಜಿಬಿಎ ವ್ಯಾಪ್ತಿಗೆ: ಡಿಕೆಶಿ

ಐದು ನಗರ ಪಾಲಿಕೆಗಳ ವ್ಯಾಪ್ತಿಯಿಂದಾಚೆಗೆ 25 ಲಕ್ಷ ಜನಸಂಖ್ಯೆ; ಭವಿಷ್ಯದಲ್ಲಿ ಸೇರ್ಪಡೆ – ಉಪ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆನೇಕಲ್ ಭಾಗ ಭವಿಷ್ಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಸೇರಲಿದೆ. ಐದು ನಗರ ಪಾಲಿಕೆಗಳ ವ್ಯಾಪ್ತಿಯಿಂದಾಚೆಗೆ ಸುಮಾರು 25 ಲಕ್ಷ ಜನಸಂಖ್ಯೆ ಇದ್ದು, ಆ ಪ್ರದೇಶಗಳನ್ನು ಸೇರಿಸಿಕೊಳ್ಳುವ ಮುನ್ನ ಚರ್ಚೆ ನಡೆಯಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ ಅವರು, ಆನೇಕಲ್‌ನ ಮುತ್ತನಲ್ಲೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾತನಾಡಿದರು. ಆನೇಕಲ್‌ಗೆ ಈಗಾಗಲೇ ಕಾವೇರಿ ಕುಡಿಯುವ ನೀರನ್ನು ನೀಡಲಾಗುತ್ತಿದೆ. ಭವಿಷ್ಯದಲ್ಲಿ ನೀಡಬೇಕಾದ ಸವಲತ್ತುಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದರು.

'ಈ ಭಾಗದಲ್ಲಿ ಈಗಿನಿಂದಲೇ ಸಂಚಾರ ದಟ್ಟಣೆ ನಿಯಂತ್ರಣ ಯೋಜನೆ ರೂಪಿಸಬೇಕು. ನಗರ ಬೆಳವಣಿಗೆ ಆದ ನಂತರ ಯೋಜನೆ ರೂಪಿಸಲು ಕಷ್ಟವಾಗಲಿದೆ. ಅದಕ್ಕೆ ಸಭೆ ನಡೆಸಿ ಚರ್ಚಿಸಲಾಗುವುದು' ಎಂದರು.

'ಬಯೋಕಾನ್, ಇನ್ಫೊಸಿಸ್ ರಸ್ತೆಯಲ್ಲಿಯೇ ಸಂಚರಿಸಿದ್ದೀರಿ, ಅವರ ಆರೋಪದಂತೆಯೇ ರಸ್ತೆಗುಂಡಿ, ಕಸದ ಸಮಸ್ಯೆ ಕಂಡುಬಂದಿತೇ' ಎಂದು ಸುದ್ದಿಗಾರರು ಕೇಳಿದಾಗ, 'ಬಯೋಕಾನ್ ಸಂಸ್ಥೆಯು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇದೆ. ಬೆಂಗಳೂರು ನಗರ ವ್ಯಾಪ್ತಿ ಹಾಗೂ ಪಂಚಾಯಿತಿ ವ್ಯಾಪ್ತಿ ಬೇರೆ, ಬೇರೆ. ಈ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ನಾನು ಆ ಪ್ರದೇಶವನ್ನು ನೋಡಿಕೊಂಡು ಬಂದಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ಜಿಬಿಎ ವ್ಯಾಪ್ತಿಗೆ ಭವಿಷ್ಯದಲ್ಲಿ ಸೇರಲು ಅರ್ಹತೆ ಗಡಿಭಾಗ, ಬೆಂಗಳೂರು ನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಪ್ರದೇಶಗಳನ್ನು ವೀಕ್ಷಣೆ ಮಾಡಿದ್ದೇನೆ. ಕೆಲವು ನಗರ ಸಭೆಗಳು, ಪಟ್ಟಣ ಪಂಚಾಯಿತಿಗಳು ಸೇರಿದಂತೆ ಅನೇಕ ಸ್ಥಳೀಯ ಸಂಸ್ಥೆಗಳ ಗಡಿಪ್ರದೇಶಗಳು ನನ್ನ ಇಲಾಖೆ ವ್ಯಾಪ್ತಿಗೆ ಸೇರಿವೆ. ಸಂಬಂಧಪಟ್ಟ ಅಧಿಕಾರಿಗಳ ಸಭೆ ಶುಕ್ರವಾರ ನಡೆಯಲಿದೆ' ಎಂದು ತಿಳಿಸಿದರು.

'ಅಧಿಕಾರಿಗಳು ರಸ್ತೆಗುಂಡಿ ಮುಚ್ಚುತ್ತಿದ್ದಾರೆ. ಅವರಿಗೆ ಜವಾಬ್ದಾರಿ ವಹಿಸಿದ್ದೇವೆ. ಕೆಲವು ಪ್ರದೇಶಗಳಲ್ಲಿ ರಸ್ತೆ ಗುಂಡಿ ಮುಚ್ಚುವ ಬದಲು ಒಂದು ಪದರು ಡಾಂಬರು ಹಾಕುತ್ತಿದ್ದೇವೆ. ಈ ಕಾಮಗಾರಿಗಳು ನಿರಂತರವಾಗಿ ಮುಂದುವರಿಯುತ್ತವೆ. ಪ್ರಮುಖ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ವೇಗವಾಗಿ ಪೂರ್ಣಗೊಳಿಸಲಾಗುತ್ತಿದೆ. ಈಗ ಮಳೆ ಕೂಡ ಬರುತ್ತಿದೆ. ಮಳೆ ನಿಲ್ಲಲಿ ಎಂದು ನಾವು ಕಾಯುತ್ತಿದ್ದೇವೆ. ಮಳೆ ನಿಂತ ಬಳಿಕ ನಾವು ಮತ್ತೆ ಈ ಕಾಮಗಾರಿ ಮುಂದುವರಿಸುತ್ತೇವೆ' ಎಂದರು.

ದಕ್ಷಿಣ ಭಾರತದ ನಗರಾಭಿವೃದ್ಧಿ ಸಚಿವರ ಸಭೆ

ದಕ್ಷಿಣ ಭಾರತದ ಎಲ್ಲ ರಾಜ್ಯಗಳ ನಗರಾಭಿವೃದ್ಧಿ ಜವಾಬ್ದಾರಿ ಹೊಂದಿರುವ ಸಚಿವರ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 30ರಂದು ನಡೆಸಲು ಕೇಂದ್ರ ಇಂಧನ, ವಸತಿ ಹಾಗೂ ನಗರಾಭಿವೃದ್ಧಿ ಸಚಿವ ಮನೋಹರ ಲಾಲ್ ಖಟ್ಟರ್ ಅವರು ಒಪ್ಪಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಅನುದಾನಕ್ಕೆ ಒತ್ತಡ ಹಾಕುತ್ತೀರಾ ಎಂದು ಸುದ್ದಿಗಾರರು ಕೇಳಿದಾಗ, 'ಖಂಡಿತವಾಗಿ ಕೇಳುತ್ತೇವೆ. ಕೇಂದ್ರದ ನಗರಾಭಿವೃದ್ಧಿ ಸಚಿವರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ನಾವು ನಮ್ಮ ಬೇಡಿಕೆಗಳನ್ನು ಅವರ ಮುಂದೆ ಇಡುತ್ತೇವೆ. ಈಗಾಗಲೇ ಹಲವು ಬಾರಿ ಕೇಂದ್ರ ಸಚಿವರು ಹಾಗೂ ಪ್ರಧಾನಿಯನ್ನು ಭೇಟಿ ಮಾಡಿ ಅನುದಾನ ಕೇಳಿದ್ದೇವೆ' ಎಂದರು.

ಡಿ.ಕೆ ಶಿವಕುಮಾರ್ ಅವರು ಎಲೆಕ್ಟ್ರಾನಿಕ್ ಸಿಟಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶಾಸಕ ಶಿವಣ್ಣ, ಜಿಲ್ಲಾಧಿಕಾರಿ ಜಗದೀಶ್ ಉಪಸ್ಥಿತರಿದ್ದರು

ಸೇರ್ಪಡೆಗೆ ಸಮಿತಿಯಿಂದ ವರದಿ

'ಜಿಬಿಎ ಗಡಿಭಾಗದ ಪ್ರದೇಶದ ಕೆಲವು ಭಾಗಗಳನ್ನು ಮುಂದಿನ ದಿನಗಳಲ್ಲಿ ನಗರ ಪಾಲಿಕೆಗಳ ವ್ಯಾಪ್ತಿಗೆ ಸೇರಿಸಬೇಕಾಗುತ್ತದೆ. ಬಿ.ಎಸ್. ಪಾಟೀಲ್ ಅವರ ಸಮಿತಿ ಮೂಲಕ ಜಿಬಿಎ ವ್ಯಾಪ್ತಿಗೆ ಸೇರಿಸಬಹುದಾದ ಪ್ರದೇಶಗಳ ಬಗ್ಗೆ ವರದಿ ತಯಾರಾಗುತ್ತಿದೆ. ಈ ವಿಚಾರವಾಗಿ ಶಾಸಕರು, ಸಂಸದರು, ಸಾರ್ವಜನಿಕರು ಸಂಘ ಸಂಸ್ಥೆಗಳ ಜೊತೆ ಚರ್ಚಿಸಲು ಸೂಚಿಸಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಎಲೆಕ್ಟ್ರಾನಿಕ್ ಸಿಟಿ, ವೈಟ್‌ಫೀಲ್ಡ್, ವಿಮಾನ ನಿಲ್ದಾಣ ರಸ್ತೆ, ಯಲಹಂಕದ ಕೆಲವು ಪ್ರದೇಶ ಇನ್ನು ಪಂಚಾಯಿತಿಯಾಗಿಯೇ ಉಳಿದುಕೊಂಡಿವೆ. ಎಲ್ಲೆಲ್ಲಿ ನಗರೀಕರಣ ಹೆಚ್ಚಾಗಿದೆ, ಆ ಪ್ರದೇಶಗಳಲ್ಲಿ ಅಚ್ಚುಕಟ್ಟಾಗಿ ಯೋಜನೆ ರೂಪಿಸಬೇಕಿದೆ. ಕೆಲವು ಪ್ರದೇಶಗಳಲ್ಲಿ ಕಸ ವಿಲೇವಾರಿ ಮಾಡುತ್ತಾರೆ, ಮತ್ತೆ ಕೆಲವು ಪ್ರದೇಶಗಳಲ್ಲಿ ವಿಲೇವಾರಿ ಮಾಡದೇ ಅವು ಪಂಚಾಯಿತಿ ವ್ಯಾಪ್ತಿ ಎಂದು ಕಾರಣ ಹೇಳುತ್ತಾರೆ. ಹೀಗಾಗಿ ಅಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿಪಡಿಸಬೇಕಾಗಿದೆ. ನಾನು ನಕ್ಷೆಯಲ್ಲಿ ಆ ಪ್ರದೇಶಗಳನ್ನು ನೋಡುವುದಕ್ಕಿಂತ ಅಲ್ಲಿಗೆ ಹೋಗಿ ಕಣ್ಣಾರೆ ನೋಡಬೇಕು ಎಂದು ಈ ಪ್ರದೇಶಗಳಿಗೆ ಭೇಟಿ ನೀಡಿದ್ದೇನೆ' ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಬಿಜೆಪಿ ಸಂಯೋಜಕರ ತಂಡ ರಚನೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಿಗೆ ನಡೆಯುವ ಚುನಾವಣೆ ಸಂಬಂಧ ಬಿಜೆಪಿ ಸಂಯೋಜಕರ ತಂಡವನ್ನು ರಚಿಸಿದೆ.

ತಂಡದಲ್ಲಿ ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ, ಡಿ.ವಿ.ಸದಾನಂದಗೌಡ, ಎಸ್.ಸುರೇಶ್‌ಕುಮಾರ್, ಶೋಭಾ ಕರಂದ್ಲಾಜೆ, ಪಿ.ಸಿ.ಮೋಹನ್,ಡಾ. ಸಿ.ಎನ್.ಮಂಜುನಾಥ್, ತೇಜಸ್ವಿ ಸೂರ್ಯ, ಡಾ.ಕೆ.ಸುಧಾಕರ್ ಮತ್ತು ಎನ್.ಎಸ್.ನಂದೀಶ್‌ರೆಡ್ಡಿ ಇದ್ದಾರೆ.

ಸಂಘಟನಾತ್ಮಕ ಜಿಲ್ಲೆಯ ಪ್ರಮುಖರು: ಬೆಂಗಳೂರು ದಕ್ಷಿಣ– ಸಿ.ಕೆ. ರಾಮಮೂರ್ತಿ, ಬೆಂಗಳೂರು ಉತ್ತರ– ಎಸ್.ಹರೀಶ್, ಬೆಂಗಳೂರು ಕೇಂದ್ರ–ಎ. ಆರ್.ಸಪ್ತಗಿರಿಗೌಡ.

ಪಾಲಿಕೆ ಪ್ರಮುಖರು: ಬೆಂಗಳೂರು ಪೂರ್ವ– ಎಂ.ಟಿ.ಬಿ.ನಾಗರಾಜ್, ಕೆ.ಎಸ್.ನವೀನ್, ಬೆಂಗಳೂರು ಉತ್ತರ– ಮುನಿರತ್ನ, ಭಾರತಿಶೆಟ್ಟಿ, ಬೆಂಗಳೂರು ದಕ್ಷಿಣ– ಬಿ.ಎ.ಬಸವರಾಜ್, ಎನ್. ರವಿಕುಮಾರ್, ಬೆಂಗಳೂರು ಕೇಂದ್ರ– ಡಾ.ಸಿ.ಎನ್.ಅಶ್ವತ್ಥನಾರಾಯಣ, ಡಿ.ಎಸ್.ಅರುಣ್, ಬೆಂಗಳೂರು ಪಶ್ಚಿಮ– ಕೆ.ಗೋಪಾಲಯ್ಯ, ಎ.ನಾರಾಯಣ ಸ್ವಾಮಿ, ಅಶ್ವತ್ಥನಾರಾಯಣ.

ಜಲಮಂಡಳಿ ನೇರ ಫೋನ್-ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ.ರಾಮಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 24ರಂದು ಶುಕ್ರವಾರ ಬೆಳಿಗ್ಗೆ 9.30 ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 080-22945119 ಮತ್ತು 080-22229639.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ("ಕಕ್ಷಿದಾರರು") ಕೆಳಕಂಡ 'ಷೆಡ್ಯೂಲ್'ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನಮುಂದೆ 'ಷೆಡ್ಯೂಲ್ ಪ್ರಾಪರ್ಟಿ'ಗೆ ಸಂಬಂಧಿಸಿದಂತೆ, ಒಂದು ನೋಂದಾಯಿತ ಪಾಲುದಾರಿಕೆ ಸಂಸ್ಥೆಯಾಗಿರುವ ಮೆ. ಲೀಗ್ ವೆಂಚರ್ಸ್, ಕಚೇರಿ ವಿಳಾಸ ಫ್ಲಾಟ್ ನಂ. G2, ರೋಡ್ ನಂ. 34, ಆದಿತ್ಯ ಎಲೆಗನ್ಸ್, ಜುಬಿಲೀ ಹಿಲ್ಸ್, ಹೈದರಾಬಾದ್, ತೆಲಂಗಾಣ ('ಮಾಲೀಕರು') ಇವರೊಂದಿಗೆ ಖರೀದಿ ವ್ಯವಹಾರ ಮಾಡಿಕೊಳ್ಳಲು ಉತ್ಸುಕರಾಗಿದ್ದಾರೆ. ಸದರಿ ಮಾಲೀಕರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ತಾವೇ ಸಂಪೂರ್ಣ ಮಾಲೀಕರಾಗಿದ್ದೇವೆ ಜೊತೆಗೆ ಅವುಗಳ ಮೇಲೆ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿದ್ದೇವೆ ಎಂದು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಆದ್ದರಿಂದ ಈ ಪ್ರಕಟಣೆಯು ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿಸಿದಂತೆ ಮಾಲೀಕರನ್ನು ಹೊರತುಪಡಿಸಿ ಇನ್ನಾವುದೇ ವ್ಯಕ್ತಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಚಾರ್ಜ್, ಕ್ಲೈಮ್, ಅಥವಾ ಇನ್ನಾವುದೇ ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಸದರಿ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂದಿತ ಕ್ಲೇಮ್‌ಗಳನ್ನು ಅಥವಾ ಮೇಲ್ಕಂಡ ವ್ಯವಹಾರಕ್ಕೆ ಸಂಬಂದಿತ ಆಕ್ಷೇಪಣೆಗಳನ್ನು ಕೆಳಗಿನ ಸಹಿದಾರರಿಗೆ ತಿಳಿಸಬೇಕೆಂದು ಕರೆ ನೀಡಲಾಗಿದೆ. ತಮ್ಮ ಆಕ್ಷೇಪಗಳನ್ನು ಅಥವಾ ಕ್ಲೇಮ್‌ಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ ದಾಖಲೆ ಪುರಾವೆಗಳ ಮೂಲಕ ಸಮೇತ ಸದರಿ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಯಾವುದೇ ಆಕ್ಷಪಣೆಯಾಗಲಿ ಅಥವಾ ಕ್ಲೇಮ್‌ಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ ಸದರಿ ಷೆಡ್ಯೂಲ್ ಪ್ರಾಪರ್ಟಿಗಳ ಉಲ್ಲೇಖಿತ ಮಾಲೀಕರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು, ಅಧಿಕಾರ, ಕ್ಲೈಮ್, ಚಾರ್ಜ್, ಲೀನ್ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ. ಒಂದು ವೇಳೆ 15 (ಹದಿನೈದು) ದಿನಗಳ ಅವಧಿಯೊಳಗೆ ಸಲ್ಲಿಕೆಯಾಗದಿರುವ ಯಾವುದೇ ಕ್ಲೈಮ್, ಆಕ್ಷೇಪಣೆಗಳು, ಅಥವಾ ಆರೋಪಿತ ಹಿತಾಸಕ್ತಿಗಳು ಎದುರಾದಲ್ಲಿ, ಅಂತಹವುಗಳನ್ನ ವಿವೇಚನಾತ್ಮಕವಾಗಿ ಕೈಬಿಡಲಾಗುತ್ತದೆ ಹಾಗೂ ಅವುಗಳನ್ನು ಎಲ್ಲ ಉದ್ದೇಶಗಳಲ್ಲೂ ಕಡೆಗಣಿಸಲಾಗುತ್ತದೆ ಮತ್ತು ಅವುಗಳನ್ನು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾರವು ಹಾಗೂ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿತ ವ್ಯವಹಾರಗಳನ್ನು ಮುಂದುವರೆಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ.

ಷೆಡ್ಯೂಲ್

(ಷೆಡ್ಯೂಲ್ ಪ್ರಾಪರ್ಟಿಯ ವಿವರ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹಗದೂರು ಗ್ರಾಮದ ಸರ್ವೆ ನಂ. 186 ರಲ್ಲಿ (ಹಳೆಯ ಸರ್ವೆ ನಂ. 19/2) ಸ್ಥಿತಗೊಂಡಿರುವ, ವಸತಿಯೋಗ್ಯ ಅಪಾರ್ಟ್‌ಮೆಂಟ್ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ, 02 ಎಕರೆ ವಿಸ್ತೀರ್ಣವುಳ್ಳ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕಬಂದಿ ಕೆಳಗಿನಂತಿರುತ್ತದೆ: ಪೂರ್ವಕ್ಕೆ: ಸರ್ವೆ ನಂ. 19ರಲ್ಲಿನ ಸ್ವತ್ತು; ಪಶ್ಚಿಮಕ್ಕೆ: ರಸ್ತೆ ಮತ್ತು ಸರ್ವೆ ನಂ. 18ರಲ್ಲಿನ ಸ್ವತ್ತು; ಉತ್ತರಕ್ಕೆ: ಸರ್ವೆ ನಂ. 191ರಲ್ಲಿನ ಸ್ವತ್ತು; ಮತ್ತು ದಕ್ಷಿಣಕ್ಕೆ: ಸರ್ವೆ ನಂ. 19ರಲ್ಲಿನ ಸ್ವತ್ತು.

ದಿನಾಂಕ: 24.10.2025
ಸ್ಥಳ: ಬೆಂಗಳೂರು

ಶ್ರೀಮತಿ. ಬ್ರಿಜಿತಾ ಪ್ರಕಾಶ್,
ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್,
ವಕೀಲರು ಮತ್ತು ಸಾಲಿಸಿಟರ್ಸ್,
18ನೇ ಮಹಡಿ, ಎಸ್‌ಕೆಎವಿ 909, ನಂ. 9/1,
ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ವೃತ್ತ, ಬೆಂಗಳೂರು–560025, ಕರ್ನಾಟಕ, ಭಾರತ.
ಫೋನ್: 080–43503600/080–43503676
ಇಮೇಲ್: brijita.prakash@jsalaw.com

ಕನ್ನಡ ಸಿರಿ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆಯ ಪಿಂಚಣಿದಾರರ ಸಂಘ ನೀಡುವ 2025ನೇ ಸಾಲಿನ ಕನ್ನಡ ಸಿರಿ ಪ್ರಶಸ್ತಿಗೆ ಕವಿ ಬಿ.ಆರ್.ಲಕ್ಷ್ಮಣರಾವ್ ಅವರನ್ನು ಆಯ್ಕೆ ಮಾಡಲಾಗಿದೆ.

ಲಕ್ಷ್ಮಣರಾವ್

₹ 10 ಸಾವಿರ ನಗದು, ಸ್ಮರಣಿಕೆಯನ್ನು ಪ್ರಶಸ್ತಿ ಒಳಗೊಂಡಿದ್ದು, ನ.1ರಂದು ಯಶವಂತಪುರದಲ್ಲಿರುವ ಸಂಘದ ಸಭಾಂಗಣದಲ್ಲಿ ನಡೆಯುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ಎ.ಶ್ರೀನಿವಾಸ ತಿಳಿಸಿದ್ದಾರೆ.

ಸಂಘದ ಸದಸ್ಯರಿಗೆ ನೀಡುವ ಪ್ರತಿಭಾಶ್ರೀ ಪ್ರಶಸ್ತಿಯನ್ನು ರಂಗಭೂಮಿ ಕಲಾವಿದ ಎಂ.ಎನ್.ವೆಂಕಟಸುಬ್ಬರಾವ್, ಕ್ರೀಡಾಪಟು ಎಚ್.ಎನ್.ಗೋಪಾಲ ಅವರಿಗೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಶಾಲಾ ಶಿಕ್ಷಕರ ವರ್ಗಾವಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ನಡೆಸುತ್ತಿರುವ ಶಾಲೆ ಹಾಗೂ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಅವರು ಸದ್ಯ ಕೆಲಸ ಮಾಡುತ್ತಿರುವ ಸ್ಥಳದಿಂದ ಬೇರೆಡೆ ನಿಯೋಜನೆ ಅಥವಾ ವರ್ಗಾವಣೆ ಮಾಡಬಾರದು' ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಈ ಸಂಬಂಧ ಮಲ್ಲೇಶ್ವರದ ಕೋದಂಡರಾಮಪುರ ಜಿಬಿಎ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸುರೇಶ್ ನಾಯಕ್ ಸೇರಿದಂತೆ ಒಟ್ಟು 20 ಜನ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, 'ಇಂತಹುದೇ ಹಲವು ಪ್ರಕರಣಗಳಲ್ಲಿ ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠಗಳು, ಮಧ್ಯಂತರ ಆದೇಶ ನೀಡಿವೆ. ಹಾಗಾಗಿ, ಈ ಪ್ರಕರಣದಲ್ಲೂ ಅರ್ಜಿದಾರರಿಗೆ ಆ ಆದೇಶ ಅನ್ವಯವಾಗಲಿದೆ' ಎಂದು ತಿಳಿಸಿತು. ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಜಿಬಿಎಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಜಿಬಿಎ ವತಿಯಿಂದ ನಗರದ ವಿವಿಧೆಡೆಯ ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರಾಗಿ ಮತ್ತು ಉಪನ್ಯಾಸಕರಾಗಿ 2008ರಿಂದ ಕಾರ್ಯ ನಿರ್ವಹಿಸುತ್ತಿರುವವರು ಈ ಅರ್ಜಿ ಸಲ್ಲಿಸಿದ್ದಾರೆ.

KARNATAKA REDDYJANA SANGHA MEDICAL COLLEGE AND RESEARCH CENTER

Sy No 26 & 27, Kasavanahalli Village, Varthur Hobli, Bangalore 560035

The above upcoming medical college inviting below mentioned posts

Dean / Principal /Director / Medical Superintendent / Associate Professors / Professors / Senior Residents/ Tutor

To the Following Subjects

• Anatomy • Physiology • Bio Chemistry • Pharmacology • Pathology • Microbiology • Community Medicine • Forensic Medicine • General medicine Pediatric • Psychiatric • Dermatology • General Surgery • Orthopedics • ENT • Ophthalmology • OBG • Anesthesia • Radio Diagnosis • Dentistry • CMO

Nursing Staffs | Laboratory Technician | Radiology Technician | OT / MRD Technician | Optometris

(Qualification as per the NMC Norms)

Mob: +91 9483027233 (Dr K Venkatagiri) | Mail id: karnatakareddyjsmcrc@gmail.com

Interested candidates may send their resumes to the **General Secretary,** Karnataka ReddyJana Sangha, No 1, Mahayogi Vemana Road, 3rd Block, Koramangala, Bangalore - 560034.



ಚಿಟಿಕೆ ಸುದ್ದಿ

ಇಬ್ಬರಿಗೆ ಸಂಗೀತ ಶಿರೋಮಣಿ ಪ್ರಶಸ್ತಿ


ಸತೀಶ


ಗೋಪಾಲ್

ಬೆಂಗಳೂರು: ನಗರದ ಪಂಡಿತ್ ಆರ್.ವಿ.ಶೇಷಾದ್ರಿ ಗವಾಯಿ ಪುಣ್ಯಸ್ಮೃತಿ ಸಮಿತಿ ಹಾಗೂ ನಾದವಾಹಿನಿ ಶ್ರೀ ದತ್ತ ಸಂಗೀತ ವಿದ್ಯಾನಿಕೇತನ ಸಂಸ್ಥೆಯು ತಬಲಾ ವಾದಕ ಸತೀಶ್ ಹಂಪಿಹೊಳಿ ಹಾಗೂ ಗಾಯಕ ಗೋಪಾಲ್ ರಾಯಚೂರ್ ಅವರನ್ನು ಸಂಗೀತ ಶಿರೋಮಣಿ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಅ.25ರ ಮಧ್ಯಾಹ್ನ 3ಕ್ಕೆ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆಯುವ ಸಂಸ್ಥೆಯ 40ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಬೇಲಿಮಠದ ಶಿವರುದ್ರ ಸ್ವಾಮೀಜಿ, ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ಗಾಯಕ ವಿ.ಎಂ. ನಾಗರಾಜ್ ಅವರು ಪಾಲ್ಗೊಳ್ಳುವರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಭಾರತೀಯ ವಿಜ್ಞಾನ ಸಂಸ್ಥೆಯ 66/11ಕೆವಿ ಉಪಕೇಂದ್ರದ ವ್ಯಾಪ್ತಿಯಲ್ಲಿ ಅ.25ರಂದು ಶನಿವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಮಲ್ಲೇಶ್ವರ, ಯಶವಂತಪುರ ಪೈಪ್‌ಲೈನ್ ರಸ್ತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಾಯು ಮಾಲಿನ್ಯ ದಾಖಲೆ ಇಳಿಕೆ

ಕೋವಿಡ್ ನಂತರ ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಭಾರಿ ಇಳಿಕೆ: ಶಬ್ದ ಮಾಲಿನ್ಯಕ್ಕಿಲ್ಲ ಅಂಕುಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಂತರದಲ್ಲಿ ಮೊದಲ ಬಾರಿಗೆ ದೀಪಾವಳಿ ಸಂದರ್ಭದಲ್ಲಿ ವಾಯು ಮಾಲಿನ್ಯ ನಗರದಲ್ಲಿ ದಾಖಲೆ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಸಾಂಕ್ರಾಮಿಕ ರೋಗ ಕೋವಿಡ್ ಬಾಧಿಸಿದ್ದ 2020ರಲ್ಲಿ ಅದರ ಹಿಂದಿನ ವರ್ಷಕ್ಕಿಂತ ದೀಪಾವಳಿ ಸಂದರ್ಭದಲ್ಲಿ ಶೇ 30.34ರಷ್ಟು ವಾಯು ಮಾಲಿನ್ಯ ಕಡಿಮೆಯಾಗಿತ್ತು. 2024ಕ್ಕೆ ಹೋಲಿಸಿದರೆ 2025ರಲ್ಲಿ ವಾಯು ಮಾಲಿನ್ಯ (ವಾಯು ಗುಣಮಟ್ಟ ಇಂಡೆಕ್ಸ್– ಎಕ್ಯೂಐ) ಶೇ 44ರಷ್ಟು ಇಳಿಕೆಯಾಗಿದೆ.

2019 ಮತ್ತು 2020ರಲ್ಲಿ ಏಳು ಮಾಪನ ಕೇಂದ್ರಗಳಿದ್ದವು. ಪ್ರಸ್ತುತ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಗರದ 11 ಸ್ಥಳಗಳಲ್ಲಿ ಎಕ್ಯೂಐ ಮಾಪನ ಕೇಂದ್ರಗಳನ್ನು ಹೊಂದಿದೆ. ಈ ದತ್ತಾಂಶದಂತೆ, ಕಳೆದ ವರ್ಷದ ದೀಪಾವಳಿ ಸಂದರ್ಭಕ್ಕಿಂತ ಈ ಬಾರಿ ಹೆಬ್ಬಾಳದಲ್ಲಿ ಅತಿಕಡಿಮೆ (–179%) ವಾಯು ಮಾಲಿನ್ಯ ದಾಖಲಾಗಿದೆ. 11 ಮಾಪನ ಕೇಂದ್ರದಲ್ಲಿ ಸಾಣೆಗುರುವನಹಳ್ಳಿಯಲ್ಲಿ ಮಾತ್ರ ಶೇ 2ರಷ್ಟು ವಾಯು ಮಾಲಿನ್ಯ ವೃದ್ಧಿಯಾಗಿದೆ.

ಶಬ್ದ ಮಾಲಿನ್ಯಕ್ಕಿಲ್ಲ ಅಂಕುಶ: ವಾಯು ಮಾಲಿನ್ಯ ದಾಖಲೆ ಪ್ರಮಾಣದಲ್ಲಿ ಕಡಿಮೆಯಾಗಿದ್ದರೂ, ದೀಪಾವಳಿ ಸಂದರ್ಭದಲ್ಲಿ ಶಬ್ದ ಮಾಲಿನ್ಯ ಮಾತ್ರ ಇಳಿಕೆಯಾಗಿಲ್ಲ. 'ಬೆಂಗಳೂರಿನ ಹಿರಿಯ ಪರಿಸರ ಅಧಿಕಾರಿ' ವ್ಯಾಪ್ತಿಯಲ್ಲಿ 14 ಮಾಪನ ಕೇಂದ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೊಂದಿದ್ದು, ಅದರಲ್ಲಿ ಆನೇಕಲ್, ನೆಲಮಂಗಲ, ದೊಡ್ಡಬಳ್ಳಾಪುರದಲ್ಲಿ ಮಾತ್ರ ಶಬ್ದ ಮಾಲಿನ್ಯ ಕಡಿಮೆಯಾಗಿದೆ.

ಹೊಸಕೋಟೆಯಲ್ಲಿ ಅತಿಹೆಚ್ಚು ಶಬ್ದ ಮಾಲಿನ್ಯ ದಾಖಲಾಗಿದ್ದು, ದಾಸರಹಳ್ಳಿ, ಪೀಣ್ಯ, ಎಇಸಿಎಸ್ ಲೇಔಟ್, ಕುಂದಲಹಳ್ಳಿ, ವೈಟ್‌ಫೀಲ್ಡ್, ಯಲಹಂಕ ಆರ್‌ಟಿಒ ಕಚೇರಿ ಪ್ರದೇಶಗಳಲ್ಲಿ ಶಬ್ದ ಮಾಲಿನ್ಯ ದೀಪಾವಳಿ ಸಂದರ್ಭದಲ್ಲಿ ಹೆಚ್ಚಾಗಿದೆ.

ಎಲ್ಲೆಲ್ಲಿ ವಾಯು ಮಾಲಿನ್ಯ (ಎಕ್ಯೂಐ) ಎಷ್ಟು? (2024/2025)

ಮಾಪನ ಕೇಂದ್ರ	2024ರ ದೀಪಾವಳಿಯ 3 ದಿನದ ಸರಾಸರಿ	2025ರ ದೀಪಾವಳಿಯ 3 ದಿನದ ಸರಾಸರಿ	ಇಳಿಕೆ/ಹೆಚ್ಚಳ
ಸಾಣೆಗುರುವನಹಳ್ಳಿ	82	84	↑ 2%
ಹೆಬ್ಬಾಳ	185	66	↓ 179%
ನಿಮ್ಹಾನ್ಸ್	84	52	↓ 62%
ಜಿಗಣಿ	136	85	↓ 60%
ಪೀಣ್ಯ	145	91	↓ 59%
ಜಯನಗರ	112	74	↓ 52%
ಕಸ್ತೂರಿನಗರ	141	95	↓ 48%
ಸಿಲ್ಕ್ ಬೋರ್ಡ್	106	90	↓ 18%
ಕವಿಕಾ	103	88	↓ 17%
ಸಿಟಿ ರೈಲ್ವೆ ಸ್ಟೇಷನ್	124	107	↓ 16%
ಆರ್.ವಿ. ಎಂಜಿನಿಯರಿಂಗ್ ಕಾಲೇಜು, ಆರ್.ಆರ್. ನಗರ	97	84	↓ 15%

ಶಬ್ದಮಾಲಿನ್ಯ ಎಲ್ಲೆಲ್ಲಿ ಎಷ್ಟು? (ಡೆಸಿಬಲ್‌ನಲ್ಲಿ)

ಮಾಪನ ಕೇಂದ್ರ	ಸ್ಟ್ಯಾಂಡರ್ಡ್ ಪ್ರಮಾಣ	ದೀಪಾವಳಿ ಮುನ್ನ (ಅ.13)	2025ರ ದೀಪಾವಳಿ 3 ದಿನದ ಸರಾಸರಿ	ಇಳಿಕೆ/ಹೆಚ್ಚಳ
ಹೊಸಕೋಟೆ	45	37.85	75.73	↑ 50%
ಅರ್ಬನ್ ಯುಕೊ ಪಾರ್ಕ್, ಪೀಣ್ಯ	70	42.6	72.88	↑ 42%
ದಾಸರಹಳ್ಳಿ	45	45.1	72.94	↑ 38%
ಯಲಹಂಕ	55	60.69	79.72	↑ 24%
ರಾಮನಗರ	45	62.7	74.68	↑ 16%
ವೈಟ್‌ಫೀಲ್ಡ್	55	65.36	75.70	↑ 14%
ಜಯನಗರ 4ನೇ ಬ್ಲಾಕ್	55	63.53	71.47	↑ 11%
ಇಂದಿರಾನಗರ	40	65.75	73.83	↑ 11%
ಸರ್ಜಾಪುರ	45	80.4	90.04	↑ 11%
ಬೊಮ್ಮನಹಳ್ಳಿ	55	62.62	67.66	↑ 7%
ವಿಜಯನಗರ	45	71.17	76.76	↑ 7%
ಆನೇಕಲ್	45	81.79	77.71	↓ 5%
ನೆಲಮಂಗಲ	55	75.65	73.80	↓ 3%
ದೊಡ್ಡಬಳ್ಳಾಪುರ	45	71.35	70.10	↓ 2%



ಸುದ್ದಿ 2 ನಿಮಿಷ

ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕರ ಪ್ರತಿಭಟನೆ

ಬೆಂಗಳೂರು: ಬೋನಸ್, ವೇತನಭತ್ಯೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ದೀಪಾಂಜಲಿನಗರ ಬಿಎಂಟಿಸಿ ಘಟಕದ ಎಲೆಕ್ಟ್ರಿಕ್ ಬಸ್ (ಇವಿ) ಚಾಲಕರು ಗುರುವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

ಡಿಪೊದಲ್ಲಿ 100ಕ್ಕೂ ಹೆಚ್ಚು ಬಸ್‌ಗಳ ಚಾಲಕರು ಪ್ರತಿಭಟನೆಯಲ್ಲಿ ಭಾಗವಹಿಸಿ, ಆಕ್ರೋಶ ವ್ಯಕ್ತಪಡಿಸಿದರು.

'ಕಳೆದ ಎರಡು ವರ್ಷಗಳಿಂದ ಹಾಜರಾತಿ ಬೋನಸ್, ವೇತನ ಭತ್ಯೆ ಪಾವತಿ ಮಾಡಿಲ್ಲ. ಅಪಘಾತಗಳು ಸಂಭವಿಸಿದಾಗ ಬಿಎಂಟಿಸಿ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಬಸ್ ಚಾಲಕರು ಪ್ರತಿಭಟನೆ ನಡೆಸಿದ್ದರಿಂದ ಎರಡು ಮೂರು ಗಂಟೆ ಕಾಲ 38ಕ್ಕೂ ಹೆಚ್ಚು ಮಾರ್ಗದಲ್ಲಿ ಸಂಚರಿಸುವ ಇವಿ ಬಸ್‌ಗಳ ಸಂಚಾರದಲ್ಲಿ ವ್ಯತ್ಯವಾಯಿತು. ಪ್ರತಿಭಟನನಿರತ ಚಾಲಕರೊಂದಿಗೆ ಮಾತನಾಡಿ ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ನಂತರ ಚಾಲಕರು ಕರ್ತವ್ಯಕ್ಕೆ ಹಾಜರಾದರು' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

'ಸ್ಥಳೀಯ ಆ್ಯಪ್‌ಗಳಿಗೆ ಬೆಂಬಲ'

ಬೆಂಗಳೂರು: 'ಬೆಂಗಳೂರು ನಗರ, ಹುಬ್ಬಳ್ಳಿ ಮತ್ತು ಮಂಗಳೂರಿನ ಆಟೊ ಮತ್ತು ಕ್ಯಾಬ್ ಚಾಲಕ ಸಂಘಟನೆಗಳಿಗೆ ಸೇರಿದ 10 ಸಾವಿರಕ್ಕೂ ಹೆಚ್ಚು ಚಾಲಕರು ಸ್ಥಳೀಯ ಆ್ಯಪ್‌ಗಳನ್ನು ಬೆಂಬಲಿಸುವ ವೋಕಲ್ ಫಾರ್ ಲೋಕಲ್ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ' ಎಂದು ಆದರ್ಶ ಆಟೊ ಮತ್ತು ಟ್ಯಾಕ್ಸಿ ಚಾಲಕರ ಒಕ್ಕೂಟದ ಮಂಜುನಾಥ್, ಪೀಸ್ ಆಟೊ ಸಂಘಟನೆಯ ಮುಖ್ಯಸ್ಥ ರಘು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಓಲಾ ಮತ್ತು ಊಬರ್‌ನಂತಹ ದೊಡ್ಡ ಕಂಪನಿಗಳು ಸಾರಿಗೆ ಕ್ಷೇತ್ರದ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತಿವೆ. ಆಟೊ, ಟ್ಯಾಕ್ಸಿ, ಕ್ಯಾಬ್ ಚಾಲಕರಿಗೆ ನೀಡುವ ಆದಾಯವನ್ನು ಕಡಿತಗೊಳಿಸುತ್ತಿವೆ. ನಮ್ಮ ಕಠಿಣ ಪರಿಶ್ರಮ ಗೌರವಿಸುವ ಮತ್ತು ನಮ್ಮ ಸ್ವಂತ ಕಾಲಿನ ಮೇಲೆ ನಿಲ್ಲಲು ಅವಕಾಶ ನೀಡುವ ನ್ಯಾಯೋಚಿತ ವ್ಯವಸ್ಥೆಯನ್ನು ನಾವು ಬಯಸುತ್ತೇವೆ. ಆದ್ದರಿಂದ ಸ್ಥಳೀಯ ಆ್ಯಪ್‌ಗಳಿಗೆ ಬೆಂಬಲ ನೀಡಲು ನಿರ್ಧರಿಸಲಾಗಿದೆ' ಎಂದು ವಿವರಿಸಿದರು.

ಬಹು ರಾಷ್ಟ್ರೀಯ ಕಂಪನಿಗಳ ಆ್ಯಪ್‌ಗಳಲ್ಲಿ ಆರಂಭದಲ್ಲಿ ದೊಡ್ಡ ಪ್ರೋತ್ಸಾಹದೊಂದಿಗೆ ಚಾಲಕರನ್ನು ಆಕರ್ಷಿಸಲಾಗುತ್ತದೆ. ನಂತರ ಚಾಲಕರ ಆದಾಯವನ್ನು ಕಡಿತಗೊಳಿಸಲಾಗುತ್ತದೆ. ಚಾಲಕರು 12 ರಿಂದ 14 ಗಂಟೆಗಳ ಕಾಲ ವಾಹನ ಚಲಾಯಿಸುತ್ತಾರೆ. ಆದರೂ ಕುಟುಂಬಗಳ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಸಂಪಾದಿಸಲು ಆಗುತ್ತಿಲ್ಲ. ಕಂಪನಿಗಳು ನೀಡುವ ಪ್ರೋತ್ಸಾಹದ ಮೊತ್ತ ಬದಲಾಗುತ್ತಲೇ ಇರುತ್ತದೆ. ಚಾಲಕರ ಮತ್ತು ಪ್ರಯಾಣಿಕರ ಸ್ನೇಹಿಯಾಗಿರುವ ನಮ್ಮ ಯಾತ್ರಿ ಆ್ಯಪ್ ಬಳಸಲು ನಿರ್ಧರಿಸಲಾಗಿದೆ' ಎಂದರು.

ಪಿ.ಜಿಯಲ್ಲಿ ತಿಗಣೆ ಔಷಧ ಸಿಂಪಡಣೆ ಬಿ.ಟೆಕ್ ಪದವೀಧರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಯಿಂಗ್ ಗೆಸ್ಟ್‌ನಲ್ಲಿ-(ಪಿ.ಜಿ) ಸಿಂಪಡಣೆ ಮಾಡಿದ್ದ ತಿಗಣೆ ಔಷಧದ ವಾಸನೆ ತಾಳಲಾರದೇ ಅಸ್ವಸ್ಥಗೊಂಡಿದ್ದ ಬಿ.ಟೆಕ್ ಪದವೀಧರ ಮೃತಪಟ್ಟಿರುವ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಅಶ್ವತ್ ನಗರದಲ್ಲಿ ನಡೆದಿದೆ.

ಪವನ್ (21) ಮೃತಪಟ್ಟವರು.

ಆಂಧ್ರಪ್ರದೇಶದ ತಿರುಪತಿಯ ನಿವಾಸಿ ಪವನ್ ಅವರು ಮೂರು ತಿಂಗಳಿಂದ ಅಶ್ವತ್ ನಗರದ ಬಿಎಂಆರ್ ಪಿ.ಜಿಯೊಂದರಲ್ಲಿ ನೆಲಸಿದ್ದರು. ರಜೆಯ ಹಿನ್ನೆಲೆಯಲ್ಲಿ ಅ.16ರಂದು ಆಂಧ್ರಪ್ರದೇಶಕ್ಕೆ ತೆರಳಿದ್ದರು. ಪಿ.ಜಿಯಲ್ಲಿ ತಿಗಣೆ ಸಮಸ್ಯೆ ಹೆಚ್ಚಾಗಿತ್ತು. ಮಾಲೀಕರು ಪವನ್ ಉಳಿದುಕೊಂಡಿದ್ದ ಕೊಠಡಿಯ ಮಾಸ್ಟರ್ ಕೀ ಬಳಸಿ ಕೊಠಡಿಗೆ ಹೋಗಿ ಔಷಧ ಸಿಂಪಡಿಸಿದ್ದರು.

ಪವನ್

ಊರಿಗೆ ಹೋಗಿದ್ದ ಪವನ್ ಅವರು ಅ.19ರಂದು ಪಿ.ಜಿಗೆ ವಾಪಸ್ ಆಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿ.ಜಿ ಮಾಲೀಕರು ತಿಗಣೆ ಔಷಧ ಸಿಂಪಡಣೆ ಮಾಡಿರುವುದು ಪವನ್ ಅವರಿಗೆ ಗೊತ್ತಿರಲಿಲ್ಲ. ಅಂದು ರಾತ್ರಿ ನಿದ್ರೆಗೆ ಜಾರಿದ್ದರು. ನಿದ್ರೆ ಮಾಡುವಾಗ ಔಷಧದ ವಾಸನೆ ತಾಳಲಾರದೆ ಅಸ್ವಸ್ಥಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ನಿರ್ಲಕ್ಷ್ಯ ತೋರಿದ ಆರೋಪದಡಿ ಪಿ.ಜಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪತ್ನಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿದ ಪ್ರಕರಣ

ಮಹೇಂದ್ರ ರೆಡ್ಡಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿ ಡಾ.ಕೃತಿಕಾ ರೆಡ್ಡಿ ಅವರಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿ 'ಸಹಜ ಸಾವು' ಎಂಬುದಾಗಿ ಬಿಂಬಿಸಿದ್ದ ಡಾ.ಜಿ.ಎಸ್.ಮಹೇಂದ್ರ ರೆಡ್ಡಿ ಅವರ ಪೊಲೀಸ್ ಕಸ್ಟಡಿ ಅವಧಿ ಮುಕ್ತಾಯವಾಗಿದ್ದು, ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಆರೋಪಿಯ ಬಂಧನದ ಬಳಿಕ ಹೆಚ್ಚಿನ ವಿಚಾರಣೆಗೆಂದು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದ ಮಾರತ್‌ಹಳ್ಳಿ ಠಾಣೆಯ ಪೊಲೀಸರು, ವಿಚಾರಣೆ ನಡೆಸಿ ಗುರುವಾರ ನಗರದ 29ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಬಳಿಕ ಬಿಗಿ ಭದ್ರತೆಯಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು ಎಂದು ಮೂಲಗಳು ಹೇಳಿವೆ.

'ಐ.ವಿ ಮೂಲಕ ಪತ್ನಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ. ಕೃತಿಕಾ ರೆಡ್ಡಿ ಅವರು ಪದೇ ಪದೇ ಅನಾರೋಗ್ಯದಿಂದ ಬಳಲುತ್ತಿದ್ದರು. ಇದರಿಂದ ಬೇಸತ್ತಿದ್ದೆ. ಪತ್ನಿಗೆ ವಿಚ್ಛೇದನ ನೀಡಿದರೆ ಮಾವನ ಮನೆಯಿಂದ ಹಣಕಾಸು ನೆರವು ಹಾಗೂ ಆಸ್ತಿ ಸಿಗುವುದಿಲ್ಲ ಎಂದು ಅನಸ್ತೇಶಿಯಾ ನೀಡಿ ಕೊಲೆಗೆ ಸಂಚು ರೂಪಿಸಿದ್ದೆ. ಪತ್ನಿಯ ಆರೋಗ್ಯ ಸಮಸ್ಯೆಯನ್ನೇ ಬಂಡವಾಳ ಮಾಡಿಕೊಂಡು ಕೊಲೆ ಮಾಡಿ ಅದನ್ನು ಸಹಜ ಸಾವು ಎಂದು ಬಿಂಬಿಸಲು ಯೋಜನೆ ಸಿದ್ಧಪಡಿಸಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

> **ಒಂದು ಹಂತದ ತನಿಖೆ ಪೂರ್ಣವಾಗಿದೆ. ಈ ಪ್ರಕರಣದಲ್ಲಿ ಆದಷ್ಟು ಬೇಗ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು**
> **ಸೀಮಾಂತ್‌ಕುಮಾರ್ ಸಿಂಗ್**
> ನಗರ ಪೊಲೀಸ್ ಕಮಿಷನರ್

ಕೊಲೆಯಾದ ಕೃತಿಕಾ ರೆಡ್ಡಿ ಹಾಗೂ ಆರೋಪಿ ಮಹೇಂದ್ರ ರೆಡ್ಡಿ

ಅಪರಾಧ ಸುದ್ದಿ

ಪತ್ನಿ ಕೊಲೆ ಮಾಡಿರುವುದಾಗಿ ಸಂದೇಶ: 'ಮಹೇಂದ್ರ ರೆಡ್ಡಿ ಅವರ ಮೊಬೈಲ್ ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ತಜ್ಞರು ದತ್ತಾಂಶವನ್ನು ಮರು ಸಂಗ್ರಹಿಸಿದ್ದಾರೆ. ಹಲವು ಮಹತ್ವದ ಸಾಕ್ಷಿಗಳು ದೊರೆತಿವೆ. ಕೃತಿಕಾ ರೆಡ್ಡಿ ಅವರು ಮೃತಪಟ್ಟ ಬಳಿಕ ಸ್ನೇಹಿತರೊಬ್ಬರಿಗೆ ಪತ್ನಿಯನ್ನು ಕೊಲೆ ಮಾಡಿರುವುದಾಗಿ ಆರೋಪಿ ಸಂದೇಶ ಕಳುಹಿಸಿರುವುದು ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಚಲಿಸುತ್ತಿದ್ದ ರೈಲಿಗೆ ಸಿಲುಕಿ ವಕೀಲ ಆತ್ಮಹತ್ಯೆ

ಹೇಮಂತ್

ಬೆಂಗಳೂರು: ನಗರದ ಜ್ಞಾನಭಾರತಿ ಬಳಿ ಚಲಿಸುತ್ತಿದ್ದ ರೈಲಿಗೆ ಸಿಲುಕಿ ವಕೀಲರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜೆ.ಪಿ.ನಗರ ನಿವಾಸಿ ಹೇಮಂತ್ ಕುಮಾರ್(32) ಆತ್ಮಹತ್ಯೆ ಮಾಡಿಕೊಂಡವರು.

ಬೆಂಗಳೂರಿನಿಂದ ಮೈಸೂರಿಗೆ ಗುರುವಾರ ಬೆಳಿಗ್ಗೆ 6.30ರ ಸುಮಾರಿಗೆ ತೆರಳುತ್ತಿದ್ದ ಹಂಪಿ ಎಕ್ಸ್‌ಪ್ರೆಸ್‌ಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ಹೇಮಂತ್ ಅವರು ಈ ಹಿಂದೆ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಬಳಿಕ ಕೆಲಸ ತೊರೆದು ವಕೀಲ ವೃತ್ತಿ ಮಾಡುತ್ತಿದ್ದರು. ಅವರ ಪತ್ನಿ ನೇಹಾ ಸಹ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ. ಅ.21ರಂದು ಹೇಮಂತ್ ಅವರು ಮನೆ ತೊರೆದು ಹೋಗಿದ್ದರು. ಈ ಸಂಬಂಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಈ ನಡುವೆ ಗುರುವಾರ ಬೆಳಿಗ್ಗೆ ರೈಲ್ವೆ ಹಳಿಯ ಮೇಲೆ ಹೇಮಂತ್ ಅವರ ಮೃತದೇಹ ಪತ್ತೆಯಾಗಿದೆ.

ಮೆಜೆಸ್ಟಿಕ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್‌ಸ್ಪೆಕ್ಟರ್ ವಿರುದ್ಧ ಡಿಜಿಗೆ ದೂರು

ಬೆಂಗಳೂರು: 'ಡಿಜೆ ಹಳ್ಳಿ (ದೇವರಜೀವನಹಳ್ಳಿ) ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸುನಿಲ್ ಅವರು ಮದುವೆ ಆಗುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ 36 ವರ್ಷದ ಸಂತ್ರಸ್ತೆಯೊಬ್ಬರು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ನೀಡಿದ್ದಾರೆ. ಇನ್‌ಸ್ಪೆಕ್ಟರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

'ಉಪ ನೋಂದಾಣಾಧಿಕಾರಿ ಕಚೇರಿಯಲ್ಲಿ ಮದುವೆ ಆಗುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಅಲ್ಲದೇ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡಿದ್ದಾರೆ. ವಿಷಯ ಬಹಿರಂಗಪಡಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ' ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

'ಇನ್‌ಸ್ಪೆಕ್ಟರ್ ಅವರು ಮನೆ ಕೊಡಿಸುತ್ತೇನೆ. ಬ್ಯೂಟಿ ಪಾರ್ಲರ್ ನಿರ್ಮಿಸಿಕೊಡುತ್ತೇನೆ ಎಂದು ಹೇಳಿ ಎಂಟನೇ ಮೈಲಿಯಲ್ಲಿರುವ ಮನೆ ಹಾಗೂ ಹೋಟೆಲ್‌ಗೆ ಕರೆದೊಯ್ದು ಕೃತ್ಯ ಎಸಗಿದ್ದರು' ಎಂದು ಮಹಿಳೆ ಆರೋಪಿಸಿದ್ದಾರೆ. ವಾಟ್ಸ್‌ಆ್ಯಪ್ ಸಂದೇಶಗಳನ್ನೂ ಮಹಿಳೆ ಬಹಿರಂಗಪಡಿಸಿದ್ದಾರೆ.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ಮಕ್ಕಳಿಂದ ವಚನ ನೃತ್ಯ ಪ್ರದರ್ಶನ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಉದ್ಯೋಗ ಮೇಳ: ಅತಿಥಿ: ಶೋಭಾ ಕರಂದ್ಲಾಜೆ, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ರಾಷ್ಟ್ರೀಯ ರೇಷ್ಮೆ ಹುಳು ಬೀಜ ಸಂಸ್ಥೆಯ 50ನೇ ವರ್ಷಾಚರಣೆ: ಪಬಿತ್ರಾ ಮಾರ್ಗರಿಟಾ, ಕೆ. ವೆಂಕಟೇಶ್, ಡಾ.ಕೆ. ಸುಧಾಕರ್, ತೇಜಸ್ವಿ ಸೂರ್ಯ, ಡಾ.ಸಿ.ಎನ್. ಮಂಜುನಾಥ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಹಾಲ್, ಬೆಳಿಗ್ಗೆ 10.30

ಎಸ್.ವಿ.ಆರ್ @50–ಸಾಧನೆ, ಸಂಭ್ರಮ, ಚಿತ್ರೋತ್ಸವ: ಬೆಳಿಗ್ಗೆ 10.30ಕ್ಕೆ 'ಭೂಮಿ ತಾಯಿಯ ಚೊಚ್ಚಲ ಮಗ', ಮಧ್ಯಾಹ್ನ 2.30ಕ್ಕೆ 'ಕುರಿಗಳು ಸಾರ್ ಕುರಿಗಳು' ಚಲನಚಿತ್ರಗಳ ಪ್ರದರ್ಶನ, ಆಯೋಜನೆ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಡಾ. ರಾಜ್‌ಕುಮಾರ್ ಭವನ, ಕರ್ನಾಟಕ ಕಲಾವಿದರ ಸಂಘ, ಚಾಮರಾಜಪೇಟೆ

ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ: ಎಂ. ವಾಸುದೇವ ರಾವ್, ಪ್ರಶಸ್ತಿ ಸ್ವೀಕರಿಸುವವರು: ಕಾಂಚನ ಈಶ್ವರ ಭಟ್, ಗೀತಾ ರಮಾನಂದ್, ವೀಣೆ ವಾದನ: ಗೀತಾ ರಮಾನಂದ್, ಮೃದಂಗ: ಕಾಂಚನ ಈಶ್ವರ ಭಟ್, ಘಟ: ಶಮಿತ್ ಎಸ್. ಗೌಡ, ಆಯೋಜನೆ: ಸುಸ್ವರಾಲಯ ಕಾಲೇಜ್ ಆಫ್ ಮ್ಯೂಸಿಕ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.30

'ಸೌಹಾರ್ದ ದೀಪಾವಳಿ' ಮೆರವಣಿಗೆ: ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಕಾರ್ಪೊರೇಷನ್ ವೃತ್ತದಿಂದ ಪುರಭವನದವರೆಗೆ, ಸಂಜೆ 4.30

ಚಿತ್ರಾ ನಾಟಕೋತ್ಸವ–2025: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಪ್ರಸನ್ನ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಭಾನು ನಾಣಿ ಅಂಗಳ, ಸುಚಿತ್ರಾ, ಬನಶಂಕರಿ ಎರಡನೇ ಹಂತ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ವಿಧಿ ಕಾಮತ್, ಅತಿಥಿಗಳು: ಅರವಿಂದ್ ಕಾಮತ್, ಜಿ.ಬಿ. ಹರೀಶ್, ವೈ.ಕೆ. ಸಂಧ್ಯಾ ಶರ್ಮಾ, ಮೀನಾಕ್ಷಿ ಕಾಮತ್, ಆಯೋಜನೆ: ನೃತ್ಯ ಸಾಮ್ರಾಟ್ ಆರ್ಟ್ಸ್ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ದಿವಾನ್ ಮಿರ್ಜಾ ಇಸ್ಮಾಯಿಲ್ ಜನ್ಮದಿನ: ಭಾಗವಹಿಸುವವರು: ವಿ. ಅನುರಾಧ, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಬಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

ಟಾಕ್: ದಿ ಆರ್ಟ್ ಆಫ್ ಲ್ಯಾಂಗ್ವೇಜ್: ಭಾಗವಹಿಸುವವರು: ಮಮತಾ ಸಾಗರ್, ಅರುಂಧತಿ ಘೋಷ್, ಅನನ್ಯಾ ಡಿ., ಸ್ಥಳ: ಮ್ಯಾಪ್, ಕಸ್ತೂರಬಾ ರಸ್ತೆ, ಸಂಜೆ 6.30

'ಮಹಾಭಾರತದ ಉಪಾಖ್ಯಾನಗಳು' ಧಾರ್ಮಿಕ ಪ್ರವಚನ: ಆನಂದತೀರ್ಥಾಚಾರ್ ಮಳಗಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

ನೈಜೀರಿಯಾದ ಇಬ್ಬರು ಪೆಡ್ಲರ್‌ಗಳ ಸೆರೆ

ಬಿಸ್ಕತ್ ಪೊಟ್ಟಣದಲ್ಲಿ ಹೈಡ್ರೊಗಾಂಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿ ಹಾಗೂ ಸಿಬ್ಬಂದಿ, ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿ ₹5.50 ಕೋಟಿ ಮೌಲ್ಯದ ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನೈಜೀರಿಯಾದ ಡುರೊ ಮಿಶೆಲ್ ಹಾಗೂ ಇಬು ಸಾಮ್ಯುವೆಲ್ ಎಂಬುವರನ್ನು ಬಂಧಿಸಿದ್ದು, ಅವರಿಂದ 1 ಕೆ.ಜಿ 47 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಹಾಗೂ ₹42 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ದೆಹಲಿಯಿಂದ ಬೆಂಗಳೂರಿಗೆ ಎಂಡಿಎಂಎ ಕ್ರಿಸ್ಟಲ್ ತರಿಸಿಕೊಂಡು ಮಾರಾಟ ಮಾಡುತ್ತಿದ್ದರು. ಬ್ಯುಸಿನೆಸ್ ವೀಸಾದ ಅಡಿ 2017ರಲ್ಲಿ ಭಾರತಕ್ಕೆ ಬಂದಿದ್ದ ಆರೋಪಿಗಳು, ನಗರದ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೆಲಸಿದ್ದರು. ಆರಂಭದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಆರೋಪಿಗಳು, ತಮಿಳುನಾಡಿನಿಂದ ಬಟ್ಟೆ ಖರೀದಿಸಿ ನೈಜೀರಿಯಾಗೆ ರಫ್ತು ಮಾಡುತ್ತಿದ್ದರು ಎಂದು ಹೇಳಿದರು.

ಡುರೊ

ಇಬು

ಬಳಿಕ ಸುಲಭವಾಗಿ ಹಣ ಸಂಪಾದನೆ ಮಾಡಲು ದೆಹಲಿಯಿಂದ ಲಗೇಜ್‌ಗಳ ಮೂಲಕ ಆರೋಪಿಗಳು ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು. ಬಳಿಕ, ನಗರದ ಕಾಲೇಜು ಹಾಗೂ ಪೇಯಿಂಗ್ ಗೆಸ್ಟ್ (ಪಿ.ಜಿ) ಎದುರು ಡ್ರಗ್ಸ್ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದರು. ಆರೋಪಿಗಳ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಮಾಹಿತಿ ನೀಡಿದರು.

ಕೆ.ಜಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ವಿದೇಶಿ ಅಂಚೆ ಕಚೇರಿಗೆ ಥಾಯ್ಲೆಂಡ್‌ನಿಂದ ಬಂದಿದ್ದ ಪಾರ್ಸೆಲ್‌ನಲ್ಲಿದ್ದ ₹3 ಕೋಟಿ ಮೌಲ್ಯದ ಮೂರು ಕೆ.ಜಿ. ಹೈಡ್ರೊಗಾಂಜಾ ಜಪ್ತಿ ಮಾಡಲಾಗಿದೆ. ಅಂಚೆ ಕಚೇರಿಗೆ ವಿದೇಶದಿಂದ ಅನುಮಾನಾಸ್ಪದ ಪಾರ್ಸೆಲ್ ಬರುತ್ತಿರುವುದಾಗಿ ಕಸ್ಟಮ್ಸ್ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದಾಗ ಅಪಾರ ಪ್ರಮಾಣದ ಹೈಡ್ರೊಗಾಂಜಾ ಪತ್ತೆ ಆಗಿದೆ ಎಂದು ಮಾಹಿತಿ ನೀಡಿದರು.

'ವಿದೇಶಿ ಕಂಪನಿಗಳ ಬಿಸ್ಕತ್, ಚಾಕೊಲೇಟ್ ಪೊಟ್ಟಣಗಳಲ್ಲಿ ಮರೆಮಾಚಿ ಡ್ರಗ್ಸ್ ಅನ್ನು ನಗರದ ವಿದೇಶಿ ಅಂಚೆ ಕಚೇರಿಗೆ ತರಲಾಗುತ್ತಿತ್ತು. ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯಡಿ (ಎನ್‌ಡಿಪಿಎಸ್) ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೊಲೆ ಆರೋಪಿ ಬಂಧನ

ಸಾಹಿಲ್

ಬೆಂಗಳೂರು: ಯಲಚೇನಹಳ್ಳಿಯ ಸಿದ್ದೇಶ್ವರ ಗ್ಲಾಸ್ ಆ್ಯಂಡ್ ಪ್ಲೈವುಡ್ಸ್ ಅಂಗಡಿಯ ಎದುರು ಮಲಗಿದ್ದ ವ್ಯಕ್ತಿಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದ ಆರೋಪಿಯನ್ನು ಕೋಣನಕುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಇಲಿಯಾಸ್ ನಗರದ ನಿವಾಸಿ ಸಾಹಿಲ್ ಪಾಷಾ (22) ಬಂಧಿತ ಆರೋಪಿ. ಆರೋಪಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದ. ಕೃತ್ಯ ಎಸಗಿದ 4 ತಾಸಿನ ಒಳಗೆ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಅಂಗಡಿಯ ಎದುರು ವ್ಯಕ್ತಿಯೊಬ್ಬರು ಮಲಗಿದ್ದರು. ಅವರ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿ ಆರೋಪಿ ಪರಾರಿ ಆಗಿದ್ದ. ಮದ್ಯದ ನಶೆಯಲ್ಲಿ ಕೃತ್ಯ ಎಸಗಿರುವಂತೆ ಕಂಡುಬರುತ್ತಿದೆ. ಕೊಲೆಯಾದ ಅಪರಿಚಿತ ವ್ಯಕ್ತಿ ಚಿಂದಿ ಆಯುವ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಐದು ದಿನ ಕಡಲೆಕಾಯಿ ಪರಿಷೆ

ಬೆಂಗಳೂರು: ಬಸವನಗುಡಿಯಲ್ಲಿ ಕಡಲೆಕಾಯಿ ಪರಿಷೆಯನ್ನು ನವೆಂಬರ್ 17ರಿಂದ ಆಯೋಜಿಸಲು ಮುಜರಾಯಿ ಇಲಾಖೆ ನಿರ್ಧರಿಸಿದೆ.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ, ಎರಡು ದಿನಗಳ ಕಡಲೆಕಾಯಿ ಪರಿಷೆಯನ್ನು ಮೊದಲ ಬಾರಿಗೆ ಐದು ದಿನಕ್ಕೆ ವಿಸ್ತರಿಸಿ, ವಿಜೃಂಭಣೆಯಿಂದ ಆಚರಿಸಲು ತೀರ್ಮಾನ ಕೈಗೊಳ್ಳಲಾಯಿತು.

2024ರ ಕಾರ್ತಿಕ ಮಾಸ ಕೊನೆಯ ಸೋಮವಾರದ ಸಂದರ್ಭದಲ್ಲಿ ನಡೆದಿದ್ದ ಕಡಲೆಕಾಯಿ ಪರಿಷೆಯಲ್ಲಿ ಸುಮಾರು ಐದು ಲಕ್ಷ ಭಕ್ತಾದಿಗಳು ಭಾಗವಹಿಸಿದ್ದರು. ಪ್ಲಾಸ್ಟಿಕ್ ಮುಕ್ತ ಕಡಲೆಕಾಯಿ ಪರಿಷೆಯೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಈ ಬಾರಿ ಐದು ದಿನ ನಡೆಯುವ ಕಡಲೆಕಾಯಿ ಪರಿಷೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೆಂಬರ್ 17ರಂದು ಚಾಲನೆ ನೀಡಲಿದ್ದಾರೆ. 21 ಬಸವಣ್ಣ ಮೂರ್ತಿಗಳನ್ನು ದೇವಸ್ಥಾನಕ್ಕೆ ಆಹ್ವಾನಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಗುತ್ತದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಪರಿಷೆ ಸಂದರ್ಭದಲ್ಲಿ ಬುಲ್ ಟೆಂಪಲ್ ರಸ್ತೆ, ಗಾಂಧಿ ಬಜಾರ್, ಎನ್.ಆರ್. ರಸ್ತೆಗಳಲ್ಲೂ ದೀಪಾಲಂಕಾರ ಮಾಡಲಾಗುವುದು. ಅಂಗಡಿಯವರು ಬಟ್ಟೆ ಬ್ಯಾಗ್‌ಗಳನ್ನು ಬಳಸಲು ಮತ್ತು ಸಾರ್ವಜನಿಕರಿಗೆ 'ಪರಿಷೆಗೆ ಬನ್ನಿ, ಕೈ ಚೀಲ ತನ್ನಿ' ಎಂಬ ಘೋಷಣೆಯೊಂದಿಗೆ ಎನ್‌ಜಿಒಗಳ ಸಹಕಾರದೊಂದಿಗೆ ಪ್ಲಾಸ್ಟಿಕ್ ಮುಕ್ತ ಪರಿಷೆ ಆಚರಿಸಲು ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಬುಲ್ ಟೆಂಪಲ್ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಈ ಬಾರಿಯೂ ಸುಂಕ ವಸೂಲಾತಿ ಟೆಂಡರ್ ಕೈಬಿಡಲಾಗುತ್ತದೆ. ಯಾವುದೇ ಸುಂಕ ಸಂಗ್ರಹಿಸುವುದಿಲ್ಲ. ಕಡಲೆಕಾಯಿ ಪರಿಷೆ ದಿನಗಳಂದು ಆರೋಗ್ಯ, ಸ್ವಚ್ಛತೆ, ನೈರ್ಮಲ್ಯಕ್ಕೆ ಒತ್ತು ನೀಡಲಾಗುತ್ತದೆ. ನೂಕು ನುಗ್ಗಲು ಉಂಟಾಗದಂತೆ ತಡೆಯಲು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕರಾದ ರವಿ ಸುಬ್ರಹ್ಮಣ್ಯ, ಉದಯ ಗರುಡಾಚಾರ್, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ಕೆ.ಎಂ .ನಾಗರಾಜ್, ಶ್ರೀ ದ್ವಾರಕಾನಾಥ್, ನಗರ ಪಾಲಿಕೆ ಹೆಚ್ಚುವರಿ ಆಯುಕ್ತ ದಿಗ್ವಿಜಯ ಬೋಡ್ಕೆ ಉಪಸ್ಥಿತರಿದ್ದರು.

ಅರ್ಜಿ ವಾಪಸು ಪಡೆದ ಈಶ್ವರಪ್ಪ

ಬೆಂಗಳೂರು: ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಡಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಾಪಸು ಪಡೆದುಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯನ್ನು ರದ್ದುಪಡಿಸುವಂತೆ ಕೋರಿ ಈಶ್ವರಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಈಶ್ವರಪ್ಪ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್, 'ಪ್ರಕರಣ ರದ್ದುಪಡಿಸುವಂತೆ ಕೋರಿ ಈ ಅರ್ಜಿ ಸಲ್ಲಿಸಲಾಗಿದೆ. ಆದರೆ, ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾದ ಬಳಿಕ ಕಾನೂನಿನಲ್ಲಿ ಇರುವ ಅವಕಾಶಗಳಡಿ ಸೂಕ್ತ ರೀತಿಯಲ್ಲಿ ಹೈಕೋರ್ಟ್‌ಗೆ ಪುನಃ ಅರ್ಜಿ ಸಲ್ಲಿಸಲಾಗುವುದು. ಆದ್ದರಿಂದ, ಈ ಮೊದಲು ಸಲ್ಲಿಸಲಾಗಿರುವ ಅರ್ಜಿಯನ್ನು ವಾಪಸು ಪಡೆದುಕೊಳ್ಳಲಾಗುವುದು' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ: ಅರ್ಜಿ ವಿಚಾರಣೆ ಪೂರ್ಣ

ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣದಲ್ಲಿ ತಮ್ಮ ವಿರುದ್ಧ ಸಂಜ್ಞೇಯ ಅಪರಾಧ ಪರಿಗಣಿಸಿರುವುದನ್ನು ರದ್ದುಪಡಿಸುವಂತೆ ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಇತರ ಆರೋಪಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಯಡಿಯೂರಪ್ಪ ಪರ ವಾದ ಪೂರ್ಣಗೊಳಿಸಿದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು 'ಸಂತ್ರಸ್ತೆಯ ಹೇಳಿಕೆಯನ್ನಷ್ಟೇ ಪರಿಗಣಿಸಿ, ಸಂಜ್ಞೇಯ ಅಪರಾಧ ಪರಿಗಣಿಸಲಾಗಿದೆ ಎಂದು ವಿಚಾರಣಾ ನ್ಯಾಯಾಲಯ ಹೇಳಬೇಕಿತ್ತು. ಆದರೆ ಆ ರೀತಿ ಮಾಡಿಲ್ಲ. ಪ್ರಕರಣವನ್ನು ಹೊಸದಾಗಿ ಪರಿಗಣಿಸುವಂತೆ ಸಮನ್ವಯ ನ್ಯಾಯಪೀಠ ವಿಚಾರಣಾ ನ್ಯಾಯಾಲಯಕ್ಕೆ ಆದೇಶಿಸಿತ್ತು. ಅದನ್ನೂ ಮಾಡಲಾಗಿಲ್ಲ. ಸಂಜ್ಞೇಯ ಅಪರಾಧ ಪರಿಗಣಿಸುವಾಗ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ವಿವೇಚನೆ ಬಳಕೆ ಮಾಡಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಸಂತ್ರಸ್ತೆಯ ತಾಯಿ ಮತ್ತು ಯಡಿಯೂರಪ್ಪ ನಡುವಿನ ಆಡಿಯೊ ರೆಕಾರ್ಡಿಂಗ್ ನಾಶಪಡಿಸಲಾಗಿದೆ. ಅದು ಇಲ್ಲ ಎಂದಾದರೆ ಯಡಿಯೂರಪ್ಪ ಅವರು ₹2 ಲಕ್ಷ ಮೊತ್ತವನ್ನು ಅಂದು ಸಂತ್ರಸ್ತೆಗೆ ನೀಡಿದ್ದಾದರೂ ಯಾಕೆ? ಸಂತ್ರಸ್ತೆಯ ತಾಯಿಯ ಮೊಬೈಲ್ ಕಸಿದ ಸಹ ಆರೋಪಿ ಅರುಣ್ ಎಂಬವರು ಜಾಲತಾಣದಲ್ಲಿ ಅಪ್ಲೋಡ್ ಮಾಡಲಾಗಿದ್ದ ಆಡಿಯೊ ರೆಕಾರ್ಡಿಂಗ್ ಡಿಲೀಟ್ ಮಾಡಿಸಲಾಗಿದೆ. ಆದರೆ, ಸಂತ್ರಸ್ತೆ ಮೊಬೈಲ್‌ನಲ್ಲಿ ಅಸಲಿ ಆಡಿಯೊ ಇದೆ' ಎಂದರು.

ಸುದೀರ್ಘ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶ ಕಾಯ್ದಿರಿಸಿತು.

ಬೈರತಿ ಬಸವರಾಜ್ ವಿರುದ್ಧ ಕೋಕಾ: ಆಕ್ಷೇಪ

ಬೆಂಗಳೂರು: 'ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರ ವಿರುದ್ಧ ಕೋಕಾ ಕಾಯ್ದೆ ಹೇರುವಿಕೆ ಕಾನೂನುಬಾಹಿರ' ಎಂದು ಅವರ ಪರ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಕೋಕಾ (ಕರ್ನಾಟಕ ರಾಜ್ಯ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ) ಹೇರಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಪ್ರಕರಣದ ಐದನೇ ಆರೋಪಿಯಾದ ಶಾಸಕ ಬಸವರಾಜ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಸವರಾಜ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಅರ್ಜಿದಾರರ ವಿರುದ್ಧ ಕೋಕಾ ಕಾಯ್ದೆಯ ನಿಯಮಗಳನ್ನು ಹೇರಿರುವುದು ಕಾನೂನುಬಾಹಿರ. ಅರ್ಜಿದಾರರು ಸಿಐಡಿ ತನಿಖೆಗೆ ಸಹಕರಿಸಲು ಸದಾ ಸಿದ್ಧರಿದ್ದಾರೆ. ಯಾವ ಸಮಯಕ್ಕೆ ಹಾಜರಾಗಬೇಕು ಎಂದು ತಿಳಿಸಿದರೆ, ಅದರಂತೆ ನಡೆದುಕೊಳ್ಳುತ್ತಾರೆ' ಎಂದರು. ಇದಕ್ಕೆ ಪ್ರತಿಯಾಗಿ ಸಿಐಡಿಯ ಆಕ್ಷೇಪಣೆ ಸಲ್ಲಿಸಿದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಹೈಕೋರ್ಟ್ ಅರ್ಜಿದಾರರಿಗೆ ನೀಡಿರುವ ಮಧ್ಯಂತರ ರಕ್ಷಣೆಯ ಆದೇಶ ತೆರವುಗೊಳಿಸಬೇಕು' ಎಂದು ಮನವಿ ಮಾಡಿದರು.

ವಾದ-ಪ್ರತಿವಾದ ಆಲಿಸಿದ ಪೀಠ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು. ಅಂತೆಯೇ, ಬೈರತಿ ಬಸವರಾಜ್ ಅವರಿಗೆ ರಕ್ಷಣೆ ನೀಡಲಾಗಿರುವ ಮಧ್ಯಂತರ ಆದೇಶವನ್ನು ವಿಸ್ತರಿಸಿ ನ್ಯಾಯಪೀಠ ಆದೇಶಿಸಿತು.

ಮೆಟ್ರೊ ಜಾಹೀರಾತು ಟೆಂಡರ್: ವಿವಾದ

ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿಕೊಡಲು ತಾಂತ್ರಿಕ ಸ್ಕೋರಿಂಗ್ ವ್ಯವಸ್ಥೆ: ಆರೋಪ

• ನವೀನ್ ಮಿನೇಜಸ್

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಕರೆದಿರುವ ಜಾಹೀರಾತು ಟೆಂಡರ್ ವಿವಾದಕ್ಕೀಡಾಗಿದೆ. ಒಬ್ಬ ವ್ಯಕ್ತಿಗೆ ಅನುಕೂಲವಾಗುವಂತೆ ಮಾಡಲು ತಾಂತ್ರಿಕ ಸ್ಕೋರಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಇದು ಪಾರದರ್ಶಕತೆ ಮತ್ತು ನ್ಯಾಯಯುತ ಸ್ಪರ್ಧೆಯನ್ನು ದುರ್ಬಲಗೊಳಿಸಿದೆ ಎಂದು ಬಿಡ್ಡರ್‌ಗಳು ಆರೋಪಿಸಿದ್ದಾರೆ.

ನಮ್ಮ ಮೆಟ್ರೊಗೆ ಪ್ರಯಾಣ ದರ ಹೊರತಾದ ಆದಾಯಕ್ಕೆ ಜಾಹೀರಾತು ಪ್ರಮುಖ ಕೊಡುಗೆಯಾಗಿದೆ, ಇದು ನಿಗಮವು ತನ್ನ ಜಾಲವನ್ನು ವಿಸ್ತರಿಸುವಾಗ ಮತ್ತು ಸಾಲಗಳನ್ನು ಮರುಪಾವತಿಸುವಾಗ ಹಣ ಸಂಗ್ರಹಿಸಲು ಸಹಾಯ ಮಾಡುತ್ತದೆ. ಈ ಟೆಂಡರ್ ಬಹಳ ಹಿಂದಿನಿಂದಲೂ ಬಾಕಿ ಇತ್ತು. ಒಂದು ಸಂಸ್ಥೆಯು ಹೆಚ್ಚಿನ ಮೊತ್ತ ಉಲ್ಲೇಖಿಸದಿದ್ದರೂ, ಆ ಏಜೆನ್ಸಿಗೆ ಅನುಕೂಲವಾಗುವಂತೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ ಎಂದು ಟೀಕೆಗಳು ಕೇಳಿಬಂದಿವೆ.

ಸುಮಾರು ಏಳು ವರ್ಷಗಳ ನಂತರ, ಬಿಎಂಆರ್‌ಸಿಎಲ್ ಮೆಟ್ರೊ ಸಂಚಾರ ಇರುವ ಮೂರು ಮಾರ್ಗ, ತಯಾರಾಗುತ್ತಿರುವ ಎರಡು ಮಾರ್ಗ ಹಾಗೂ ಮುಂದೆ ನಿರ್ಮಿಸಲು ಯೋಜಿಸಿರುವ ಮಾರ್ಗಗಳಲ್ಲಿ ಮೆಟ್ರೊ ಕಂಬಗಳು ಮತ್ತು ಪೋರ್ಟಲ್‌ಗಳಲ್ಲಿ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ. ನೇರಳೆ, ಹಸಿರು, ಹಳದಿ, ಗುಲಾಬಿ ಮತ್ತು ನೀಲಿ ಮಾರ್ಗಗಳನ್ನು ಒಳಗೊಂಡಿರುವ ಒಪ್ಪಂದ 12 ವರ್ಷಗಳ ಅವಧಿಗೆ ಇದ್ದು, ಅದನ್ನು ಇನ್ನೂ ಮೂರು ವರ್ಷಗಳವರೆಗೆ ವಿಸ್ತರಿಸಲು ಅವಕಾಶ ಇದೆ.

ಟೆಂಡರ್‌ಗಾಗಿ ಅಧಿಕಾರಿಗಳ ಮುಂದೆ ಪ್ರಸ್ತುತಿಗಾಗಿ 30 ಅಂಕ ನಿಗದಿಪಡಿಸಲಾಗಿದೆ. ಇದು ಅಸಹಜವಾದ ನಡೆಯಾಗಿದೆ. ಹೆಚ್ಚು ಬಿಡ್ ಮಾಡಿದವರನ್ನು ಬಿಟ್ಟು ಬೇರೆಯವರನ್ನು ಆಯ್ಕೆ ಮಾಡಲು ಈ ಅಂಕಗಳು ಕಾರಣವಾಗಬಹುದು ಎಂಬುದು ಬಿಡ್ಡರ್‌ಗಳ ದೂರು.

ಈ ರೀತಿಯ ಟೆಂಡರ್ ವ್ಯವಸ್ಥೆಯಿಂದ ಬಿಎಂಆರ್‌ಸಿಎಲ್‌ಗೆ ₹15 ಕೋಟಿಯಿಂದ ₹25 ಕೋಟಿವರೆಗೆ ನಷ್ಟ ಉಂಟಾಗಬಹುದು. ಅಂಕಗಳ ವ್ಯವಸ್ಥೆಯ ಟೆಂಡರ್ ಬದಲಾಯಿಸದೇ ಇದ್ದರೆ ನಮ್ಮ ಮೆಟ್ರೊಗೆ ಆದಾಯದಲ್ಲಿ ಖೋತಾ ಆಗಲಿದೆ ಎಂದು ಜಾಹೀರಾತು ಸಂಸ್ಥೆಯ ಪ್ರತಿನಿಧಿಯೊಬ್ಬರು ತಿಳಿಸಿದರು.

ಸ್ಥಳೀಯ ಬಿಡ್ಡರ್‌ಗಳನ್ನು ಹೊರಗಿಡಲು ಟೆಂಡರ್ ಷರತ್ತುಗಳನ್ನು ಈ ರೀತಿ ನಿಗದಿಪಡಿಸಲಾಗಿದೆ ಎಂದು ಕೆಲವು ಜಾಹೀರಾತುದಾರರು ಆರೋಪಿಸಿದ್ದಾರೆ. 'ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಮೆಟ್ರೊ ಕಾರಿಡಾರ್‌ಗಳನ್ನು ಒಂದೇ ಪ್ಯಾಕೇಜ್‌ಗೆ ಸೇರಿಸಲಾಗಿದೆ. ಜೊತೆಗೆ, ಒಪ್ಪಂದದ ಅವಧಿ ದೀರ್ಘವಾಗಿದೆ. ಈ ಅಂಶಗಳನ್ನು ಗಮನಿಸಿದರೆ, ಹೆಚ್ಚು ಸ್ಪರ್ಧಾತ್ಮಕವಾಗಿರಬೇಕಿತ್ತು. ಆದರೆ, ಅಧಿಕಾರಿಗಳು ತಮಗೆ ಬೇಕಾದವರಿಗೆ ನೀಡಲು ಅವಕಾಶವಾಗುವಂತೆ ಷರತ್ತುಗಳನ್ನು ಮಾಡಲಾಗಿದೆ ಎಂದು ಅವರು ದೂರಿದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

8,755 ಬೋರ್ಡ್

ಬಿಎಂಆರ್‌ಸಿಎಲ್ ತನ್ನ ನೆಟ್‌ವರ್ಕ್‌ನಾದ್ಯಂತ ಜಾಹೀರಾತುಗಳಿಗಾಗಿ 8,755 ಬೋರ್ಡ್‌ಗಳನ್ನು ಗುರುತಿಸಿದೆ.

ಇದರಲ್ಲಿ ಚಲ್ಲಘಟ್ಟ ಮತ್ತು ವೈಟ್‌ಫೀಲ್ಡ್ ನಡುವೆ 2,194 ಬೋರ್ಡ್‌ಗಳು, ಬೊಮ್ಮಸಂದ್ರ ಮತ್ತು ಆರ್.ವಿ. ರಸ್ತೆ ನಡುವೆ 1,220, ಮಾದಾವರ ಮತ್ತು ರೇಷ್ಮೆ ಸಂಸ್ಥೆ ನಡುವೆ 1,613, ಕಾಳೇನ ಅಗ್ರಹಾರ ಮತ್ತು ನಾಗವಾರ ನಡುವೆ 768, ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ 2,960 ಬೋರ್ಡ್‌ಗಳು ಸೇರಿವೆ.

ಹಾವೇರಿ: ಹೋರಿ ಬೆದರಿಸುವ ಸ್ಪರ್ಧೆ– ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಶ್ರೀಕಾಂತ ಕೋಣನಕೇರಿ

ಭರತ್ ಹಿಂಗಮೇರಿ


ಘನಿಸಾಬ ಹುಸೇನ್

ಹಾವೇರಿ: ದೀಪಾವಳಿ ಹಬ್ಬದ ಪ್ರಯುಕ್ತ ಜಿಲ್ಲೆಯ ವಿವಿಧೆಡೆ ಬುಧವಾರ ನಡೆದ 'ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆ' ಹಾಗೂ 'ಹೋರಿಗಳ ಮೆರವಣಿಗೆ' ವೇಳೆ ಹೋರಿಗಳು ಗುದ್ದಿ ನಾಲ್ವರು ಮೃತಪಟ್ಟಿದ್ದಾರೆ.

ಹಾವೇರಿಯ ದಾನೇಶ್ವರಿನಗರದ ಚಂದ್ರಶೇಖರ ಕೋಡಿಹಳ್ಳಿ (75), ಹಾವೇರಿ ತಾಲ್ಲೂಕಿನ ದೇವಿಹೊಸೂರಿನ ಘನಿಸಾಬ ಮಹಮ್ಮದ್ ಹುಸೇನ್ ಬಂಕಾಪುರ (75), ಹಾನಗಲ್ ತಾಲ್ಲೂಕಿನ ತಿಳವಳ್ಳಿಯ ಭರತ್ ರಾಮಪ್ಪ ಹಿಂಗಮೇರಿ (24), ಯಳವಟ್ಟಿ ಗ್ರಾಮದ ಶ್ರೀಕಾಂತ ಗುರುಶಾಂತಪ್ಪ ಕೋಣನಕೇರಿ (40) ಮೃತರು.

'ಹೆಸ್ಕಾಂನ ನಿವೃತ್ತ ಲೈನ್‌ಮನ್ ಚಂದ್ರಶೇಖರ್ ಅವರಿಗೆ ಹಾವೇರಿಯ ಹಳೆಯ ಪಿ.ಬಿ. ರಸ್ತೆಯ ಬಳಿ ಹೋರಿ ಗುದ್ದಿತು. ದೇವಿಹೊಸೂರಿನ ಹೊಂಡದ ಓಣಿಯಲ್ಲಿರುವ ಮನೆಯ ಕಟ್ಟೆ ಮೇಲೆ ಕೂತಿದ್ದ ಘನಿಸಾಬ ಅವರ ಕುತ್ತಿಗೆ ಮತ್ತು ಎದೆಗೆ ಹೋರಿ ತಿವಿಯಿತು. ತಿಳವಳ್ಳಿ ಗ್ರಾಮದ ಮುಖ್ಯ ರಸ್ತೆಯ ಗೇಟ್ ಬಳಿ ನಿಂತಿದ್ದ ವೇಳೆ ಭರತ್ ಅವರಿಗೆ ಹೋರಿ ಗುದ್ದಿತ್ತು. ಯಳವಟ್ಟಿ ಗ್ರಾಮದಲ್ಲಿಯೂ ಹೋರಿ ಗುದ್ದಿದ್ದರಿಂದ ಶ್ರೀಕಾಂತ್ ಅವರ ಎದೆ ಹಾಗೂ ತಲೆಗೆ ಪೆಟ್ಟಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ವಿವಿಧ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಚಿಟಿಕೆ ಸುದ್ದಿ

ಉಮಾಶ್ರೀಗೆ 'ಶ್ರೀ ಶಿವಕುಮಾರ ಪ್ರಶಸ್ತಿ'

ಉಮಾಶ್ರೀ

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿದವರಿಗೆ ತಾಲ್ಲೂಕಿನ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘ ಕೊಡಮಾಡುವ 'ಶ್ರೀ ಶಿವಕುಮಾರ ಪ್ರಶಸ್ತಿ'ಗೆ ನಟಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಆಯ್ಕೆಯಾಗಿದ್ದಾರೆ.

2004ರಿಂದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಹೆಸರಿನಲ್ಲಿ ನೀಡಲಾಗುವ ಪ್ರಶಸ್ತಿಯು ₹50,000 ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ನ. 2ರಿಂದ 7ರವರೆಗೆ ಸಾಣೇಹಳ್ಳಿಯಲ್ಲಿ ನಡೆಯುವ ರಾಷ್ಟ್ರೀಯ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಾಣೇಹಳ್ಳಿಯ ತರಳಬಾಳು ಶಾಖಾ ಮಠದ ಪೀಠಾಧ್ಯಕ್ಷ ಪಂಡಿತಾರಾಧ್ಯ ಸ್ವಾಮೀಜಿ ತಿಳಿಸಿದ್ದಾರೆ.

ಮಣಿಕಂಠ ವಿರುದ್ಧ ಪ್ರಕರಣ

ಕಲಬುರಗಿ: 'ಆರ್‌ಎಸ್‌ಎಸ್ ವಿರುದ್ಧ ಮಾತು ಮುಂದುವರಿಸಿದರೆ ಆರ್‌ಎಸ್‌ಎಸ್ ಕಾರ್ಯಕರ್ತರು ಸಚಿವ ಪ್ರಿಯಾಂಕ್ ಖರ್ಗೆ ಮನೆಗೂ ಬರಬಹುದು' ಎಂದಿದ್ದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ವಿರುದ್ಧ ನಗರದ ಬ್ರಹ್ಮಪುರ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

'ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ನಡೆಸುವ ಚಟುವಟಿಕೆಗಳಿಗೆ ನಿಷೇಧ ಹೇರಬೇಕು ಎಂದು ಪತ್ರ ಬರೆದ ಸಚಿವ ಪ್ರಿಯಾಂಕ್ ಅವರಿಗೆ ಬೆದರಿಕೆ ಫೋನ್ ಕರೆಗಳು ಬಂದಿರಬಹುದು. ಇದೇ ರೀತಿ ಮಾತು ಮುಂದುವರಿಸಿದರೆ ಆರ್‌ಎಸ್‌ಎಸ್ ಕಾರ್ಯಕರ್ತರು ಅವರ ಮನೆಗೂ ಬರಬಹುದು. ಎಚ್ಚರಿಕೆಯಿಂದ ಇದ್ದು, ಆರ್‌ಎಸ್‌ಎಸ್‌ಗೆ ಕ್ಷಮೆ ಕೇಳಬೇಕು' ಎಂದು ಇತ್ತೀಚೆಗೆ ಮಣಿಕಂಠ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದರು.

'ಸಚಿವರಿಗೆ ಜೀವ ಬೆದರಿಕೆ ಹಾಕಿರುವ ಮಣಿಕಂಠ ರಾಠೋಡ ವಿರುದ್ಧ ಕಾನೂನುಕ್ರಮಕ್ಕೆ ಒತ್ತಾಯಿಸಿ ಸಿದ್ಧಾರೂಢ ಕಾಂಬಳೆ ಪೊಲೀಸರಿಗೆ ದೂರು ನೀಡಿದ್ದರು.

ಜೋಗಿಕೊಪ್ಪ ಇಲಿಜ್ವರ ಪತ್ತೆ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): 'ತಾಲ್ಲೂಕಿನ ಕಿರವತ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೋಗಿಕೊಪ್ಪ ಗ್ರಾಮದಲ್ಲಿ ಗುರುವಾರ ಒಂದು ಇಲಿಜ್ವರ (ಲೆಪ್ಟೊಸ್ಪೈರೋಸಿಸ್) ಪ್ರಕರಣ ವರದಿಯಾಗಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನರೇಂದ್ರ ಪವಾರ ತಿಳಿಸಿದ್ದಾರೆ.

'ಈ ವರ್ಷ ಒಟ್ಟು 7 ಪ್ರಕರಣಗಳು ವರದಿಯಾಗಿವೆ.ಇದು ಒಂದು ಬ್ಯಾಕ್ಟೀರಿಯಾ ಸೋಂಕು. ಸೋಂಕಿತ ಇಲಿಗಳು ಮತ್ತು ಇತರ ದಂಶಕಗಳ (ರೊಡೆಂಟ್ಸ್) ಮೂತ್ರದ ಮೂಲಕ ಹರಡುತ್ತದೆ. ಜ್ವರ, ತಲೆ ನೋವು, ಸುಸ್ತು, ಮೈ-ಕೈ ನೋವುಗಳಂತಹ ಲಕ್ಷಣ ಇರುತ್ತದೆ.

'ಅವಕಾಶ ಕೊಡಬೇಡಿ'

ಯಾದಗಿರಿ: 'ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗೆ ಈ ವೇದಿಕೆಯಿಂದ ಕೇಳಿಕೊಳ್ಳುವುದು ಇಷ್ಟೆ; ನೋಂದಣಿ ಇಲ್ಲದ ಸಂಘಕ್ಕೆ ಪಥಸಂಚಲನ ನಡೆಸಲು ಅವಕಾಶ ಕೊಡಬೇಡಿ' ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

'₹400 ಕೋಟಿ ನೀಡಲು 'ಕೈ' ವರಿಷ್ಠರಿಂದ ಸೂಚನೆ'

'ಕಪ್ಪ ಒಪ್ಪಿಸಿದರೆ ಡಿಕೆಶಿ ಸಿ.ಎಂ'

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ದಾವಣಗೆರೆ: ಚಾಮುಂಡೇಶ್ವರಿ, ಮಾರಮ್ಮನ ದೇಗುಲ ಕಾಂಗ್ರೆಸ್‌ಗೆ ಇಷ್ಟವಾಗುವುದಿಲ್ಲ. ದೆಹಲಿಯಲ್ಲಿರುವ 'ಇಟಲಿ ಟೆಂಪಲ್' ಸುತ್ತಿ ಸರಿಯಾದ ಕಪ್ಪ ಒಪ್ಪಿಸಿದರೆ ಮಾತ್ರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

'ಡಿ.ಕೆ. ಶಿವಕುಮಾರ್ ದಾರಿತಪ್ಪಿದ ಮಗನಂತೆ ವರ್ತಿಸುತ್ತಿದ್ದಾರೆ. ಬೆಂಗಳೂರಿನ ರಸ್ತೆ ಗುಂಡಿಗಳನ್ನು ಮುಚ್ಚಿಸುವುದು ಬಿಟ್ಟು ದೇಗುಲಗಳಿಗೆ ಅಲೆದಾಡುತ್ತಿದ್ದಾರೆ. ದೇಗುಲ ದರ್ಶನ (ಟೆಂಪಲ್ ರನ್) ಮಾಡಿದರೆ ಪ್ರಯೋಜನವಿಲ್ಲ ಎಂಬುದನ್ನು ಕಾಂಗ್ರೆಸ್ ನಾಯಕರೇ ಹೇಳಿದ್ದಾರೆ. ಕಾಂಗ್ರೆಸ್‌ನ 'ದೊಡ್ಡ ದೇಗುಲ' ಸುತ್ತದೇ ಹೋದರೆ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ' ಎಂದು ಗುರುವಾರ ಸುದ್ದಿಗಾರರೆದುರು ಅಭಿಪ್ರಾಯ ವ್ಯಕ್ತಪಡಿಸಿದರು.

'ನವೆಂಬರ್ ಕ್ರಾಂತಿಯ ಬಗ್ಗೆ ನಾನು ನೀಡಿದ ಹೇಳಿಕೆಯನ್ನು ಕಾಂಗ್ರೆಸ್ ಅಲ್ಲಗಳೆದಿತ್ತು. ಸಿದ್ದರಾಮಯ್ಯ ಅವರ ರಾಜಕೀಯ ಸಂಧ್ಯಾಕಾಲದ ಬಗ್ಗೆ ಅವರ ಪುತ್ರ, ವಿಧಾನಪರಿಷತ್ ಸದಸ್ಯ ಯತೀಂದ್ರ ಬಹಿರಂಗ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಒಡೆದ ಮನೆಯಾಗಿದ್ದು, ಡಿ.ಕೆ. ಶಿವಕುಮಾರ್ ಅವರಿಗೆ ಪಂಗನಾಮ ಹಾಕಲು ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ' ಎಂದರು.

'ಬಿಹಾರ ಚುನಾವಣೆಗೆ ₹400 ಕೋಟಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಕಾಂಗ್ರೆಸ್ ಹೈಕಮಾಂಡ್ ಟಾರ್ಗೆಟ್ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮನೆಯಲ್ಲಿ ಔತಣಕೂಟ ಏರ್ಪಡಿಸಿ ಸಚಿವರಿಗೆ ಈ ವಿಚಾರ ಮುಟ್ಟಿಸಿದ್ದಾರೆ. ಇಲಾಖಾವಾರು ಕಪ್ಪ ನಿಗದಿಪಡಿಸಲಾಗಿದೆ. ಕಪ್ಪ ಕೊಟ್ಟವರನ್ನು ಮಾತ್ರ ಸಂಪುಟದಲ್ಲಿ ಉಳಿಸಿಕೊಳ್ಳಲಾಗುತ್ತಿದೆ. ಸಚಿವ ಸ್ಥಾನಕ್ಕೆ ಕಪ್ಪವೇ ಮಾನದಂಡ' ಎಂದು ಹೇಳಿದರು.

'ಚಿತ್ತಾಪುರದಲ್ಲಿ ಯಾರಾದರೂ ಮೆರವಣಿಗೆ ನಡೆಸಲಿ: ಅಭ್ಯಂತರವಿಲ್ಲ'

ಹುಬ್ಬಳ್ಳಿ: 'ಚಿತ್ತಾಪುರದಲ್ಲಿ ನವೆಂಬರ್ 2 ರಂದು ಭೀಮ ಆರ್ಮಿ, ದಲಿತ ಸಂಘಟನೆಗಳು, ಹಿಂದುಳಿದ ವರ್ಗಗಳು ಸೇರಿ ಯಾರಾದರೂ ಮೆರವಣಿಗೆ ನಡೆಸಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ' ಎಂದು ಆರ್.ಅಶೋಕ ಹೇಳಿದರು.

'ಮುಖ್ಯಮಂತ್ರಿ ಅಧಿಕಾರದ ಹಸ್ತಾಂತರ ಪ್ರಕ್ರಿಯೆ ನಡೆಯುತ್ತಿರುವ ಕಾರಣ ಆರ್‌ಎಸ್‌ಎಸ್ ವಿಷಯವನ್ನು ಮುನ್ನೆಲೆಗೆ ತರಲಾಗಿದೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ವಿಧಾನ ಪರಿಷತ್ತು ಸದಸ್ಯ ಸಿ.ಟಿ.ರವಿ ಮಾತನಾಡಿ, 'ಆರ್‌ಎಸ್‌ಎಸ್ ಕಾರ್ಯಕರ್ತರ ಕೈಯಲ್ಲಿರುವ ಲಾಠಿ ಜನರಲ್ಲಿ ಶಿಸ್ತು, ಆತ್ಮವಿಶ್ವಾಸ, ದೇಶಪ್ರೇಮ ಮೂಡಿಸಲು ಇದೆಯೇ ಹೊರತು ಸಂಘರ್ಷಕ್ಕಲ್ಲ' ಎಂದರು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹಡಗಲು ಗ್ರಾಮದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ತೆಂಗಿನ ತೋಟಗಳು ಜಲಾವೃತವಾಗಿವೆ

ಮಳೆ: ರಾಗಿ, ಈರುಳ್ಳಿ ಬೆಳೆಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ, ಚಿಕ್ಕಮಗಳೂರು, ಮೈಸೂರು ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಬುಧವಾರ ಮುಂಜಾನೆ ಹಾಗೂ ಗುರುವಾರ ಬಿರುಸಿನ ಮಳೆಯಾಗಿದ್ದು, ಹಲವು ಕಡೆ ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಈರುಳ್ಳಿ ಬೆಳೆಗಳಿಗೆ ಹಾನಿಯಾಗಿದೆ.

ಚಿತ್ರದುರ್ಗ ವರದಿ: ಬುಧವಾರ ಮಧ್ಯರಾತ್ರಿಯಿಂದ ಮಳೆ ಬಿರುಸಾಗಿದ್ದು ಬೆಳೆಗೆ ತೀವ್ರ ಹಾನಿಯಾಗಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ ರಾಗಿ, ಹೊಳಲ್ಕೆರೆ ತಾಲ್ಲೂಕಿನಲ್ಲಿ ಮೆಕ್ಕೆಜೋಳ, ಚಳ್ಳಕೆರೆ ತಾಲ್ಲೂಕಿನಲ್ಲಿ ಈರುಳ್ಳಿ ಬೆಳೆ ಹಾಳಾಗಿದೆ.

ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯ ಭರ್ತಿಯಾಗಿ ಕೋಡಿ ಬಿದ್ದಿದ್ದು, ವರ್ಷದಲ್ಲಿ ಎರಡನೇ ಬಾರಿಗೆ ಜಲಾಶಯ ಭರ್ತಿಯಾಗಿ ಕೋಡಿಯಲ್ಲಿ ನೀರು ಹರಿಯುತ್ತಿದೆ. ಸದ್ಯ ಜಲಾಶಯಕ್ಕೆ 6,702 ಕ್ಯೂಸೆಕ್ ಒಳಹರಿವು ಇದೆ. 6,418 ಕ್ಯೂಸೆಕ್ ಹೊರಹರಿವು ಇದೆ.

ದಾವಣಗೆರೆ ವರದಿ: ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ ಕಟಾವಿಗೆ ಬಂದಿರುವ ಬೆಳೆ ನೀರು ಪಾಲಾಗುವ ಆತಂಕ ಮೂಡಿದೆ.

ನೆಲಕ್ಕೊರಗಿದ ಭತ್ತ–ಕಲಬುರಗಿ ವರದಿ: ನಗರ ಸೇರಿದಂತೆ ಕಲ್ಯಾಣ ಕರ್ನಾಟಕದ ಅಲ್ಲಲ್ಲಿ ಉತ್ತಮ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಭತ್ತದ ಫಸಲು ನೆಲಕ್ಕೊರಗಿದೆ. ಕೊಪ್ಪಳ, ಕುಷ್ಟಗಿ, ಕನಕಗಿರಿ, ಮುನಿರಾಬಾದ್, ಯಲಬುರ್ಗಾ ಭಾಗದಲ್ಲಿ ಮಳೆ ಸುರಿದಿದೆ.

ಕಲಬುರಗಿಯಲ್ಲಿ ಮಧ್ಯಾಹ್ನ ಅರ್ಧ ಗಂಟೆ ಮಳೆ ಸುರಿದಿದೆ. ಜಿಲ್ಲೆಯ ಕಾಳಗಿ, ಕಮಲಾಪುರ ಹಾಗೂ ಆಳಂದದಲ್ಲೂ ಮಳೆಯಾದ ಬಗ್ಗೆ ವರದಿಯಾಗಿದೆ.

ಮನೆಗಳಿಗೆ ಹಾನಿ-ಮೈಸೂರು ವರದಿ: ಜಿಲ್ಲೆಯೂ ಸೇರಿದಂತೆ ಕಾವೇರಿ ಕಣಿವೆಯಲ್ಲಿ ಬುಧವಾರ ನಸುಕಿನಿಂದ ಗುರುವಾರ ಬೆಳಿಗ್ಗೆಯವರೆಗೂ ಜೋರು ಮಳೆಯಾಯಿತು. ಇದರಿಂದಾಗಿ ಅಲ್ಲಲ್ಲಿ ಮನೆಗಳು, ಬೆಳೆಗಳಿಗೆ ಹಾನಿಯಾಗಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಾದ್ಯಂತ ಬುಧವಾರ ಭಾರಿ ಮಳೆಯಾಯಿತು. ಹಾರಂಗಿ ಜಲಾಶಯ ಅಕ್ಟೋಬರ್ ತಿಂಗಳಿನಲ್ಲಿ ಇದೇ ಮೊದಲ ಬಾರಿಗೆ ಎರಡನೇ ಸಲ ಭರ್ತಿಯಾಗಿದೆ.

ಮಂಡ್ಯ ವರದಿ: ಜಿಲ್ಲೆಯ ಕಿಕ್ಕೇರಿ ಹೋಬಳಿಯ ಕಾರಿಗಾನಹಳ್ಳಿ ಗ್ರಾಮದ ಕಾಂತರಾಜು ಎಂಬವರ ಮನೆ ಕುಸಿದಿದ್ದು, ಮನೆಯಲ್ಲಿದ್ದ ದವಸ–ಧಾನ್ಯ, ಅಡುಗೆ ಪಾತ್ರೆಗಳು ಹಾಳಾಗಿವೆ.

ಹಾಸನ ವರದಿ: ಹಾಸನ ಜಿಲ್ಲೆಯಲ್ಲಿ ಎರಡು ದಿನಗಳಿಂದ ಜಿಲ್ಲೆಯಲ್ಲಿ ಉತ್ತಮ ಮಳೆ ಬಿದ್ದಿದೆ. ಬುಧವಾರ ರಾತ್ರಿ ಸುರಿದ ಜೋರು ಮಳೆಯಿಂದಾಗಿ ಕೆಲ ಗ್ರಾಮಗಳಲ್ಲಿ ರಸ್ತೆಗಳಿಗೆ ಹಾನಿ ಉಂಟಾಗಿದೆ.

ಗುಡುಗಿನ ಅರ್ಭಟ– ಹುಬ್ಬಳ್ಳಿ ವರದಿ: ಧಾರವಾಡ, ಉತ್ತರ ಕನ್ನಡ, ಗದಗ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಯ ವಿವಿಧೆಡೆ ಕೆಲವೆಡೆ ಮಳೆ ಸುರಿಯಿತು.

12 ಮನೆಗೆ ಹಾನಿ: ಬಳ್ಳಾರಿ ಜಿಲ್ಲೆಯಲ್ಲಿ ಎರಡು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ 12 ಮನೆಗಳಿಗೆ ಹಾನಿಯಾಗಿದೆ.

ನೀರಿನಲ್ಲಿ ಕೊಚ್ಚಿ ಹೋಗಿದ್ದ ರೈತ ಶವವಾಗಿ ಪತ್ತೆ

ಚಿಕ್ಕಮಗಳೂರು: ಜಿಲ್ಲೆಯ ಬಯಲು ಸೀಮೆಯ ಪ್ರದೇಶದಲ್ಲಿ ಮಳೆ ಜೋರಾಗಿದ್ದು, ತೆಂಗಿನ ತೋಟಗಳು ಜಲಾವೃತಗೊಂಡಿವೆ. ತಾಲ್ಲೂಕಿನ ದೇವಗೊಂಡನಹಳ್ಳಿಯಲ್ಲಿ ನೀರಿನಲ್ಲಿ ಕೊಚ್ಚಿಹೋದ ರೈತರೊಬ್ಬರು ಮೃತಪಟ್ಟಿದ್ದಾರೆ.

ಎಮ್ಮೆ ಮೇಯಿಸಲು ಹೋಗಿದ್ದ ಲಕ್ಷ್ಮಣಗೌಡ ಮನೆಗೆ ವಾಪಸ್ ಬಂದಿರಲಿಲ್ಲ. ಬುಧವಾರ ಹಳ್ಳದ ನೀರಿನಲ್ಲಿ ಅವರ ಮೃತದೇಹ ದೊರೆತಿದೆ. ಹಳ್ಳ ದಾಟುವಾಗ ಕಾಲುಜಾರಿ ಬಿದ್ದಿರಬಹುದು ಎಂದು ಶಂಕಿಸಲಾಗಿದೆ.

ಕಿತ್ತೂರು ಉತ್ಸವಕ್ಕೆ ಅಡ್ಡಿ– ಬೆಳಗಾವಿ (ವರದಿ): ಜಿಲ್ಲೆಯ ಚನ್ನಮ್ಮನ ಕಿತ್ತೂರಿನಲ್ಲಿ ಗುರುವಾರ ಆರಂಭವಾದ ಕಿತ್ತೂರು ಉತ್ಸವದ ಮೊದಲ ದಿನವೇ ಧಾರಾಕಾರ ಮಳೆ ಸುರಿಯಿತು. ಉತ್ಸವಕ್ಕೆ ಸೇರಿದ್ದ ಅಪಾರ ಜನ ಚದುರಿಹೋದರು. ಮಳೆಯಲ್ಲೇ ಕಲಾವಿದರು ಮೆರವಣಿಗೆ ಮುಂದುವರಿಸಿದರು.

ಮಧ್ಯಾಹ್ನ 3ರ ಬಳಿಕ ಬಿರುಸು ಪಡೆದ ಮಳೆ ಎರಡು ತಾಸು ಎಡೆಬಿಡದೇ ಸುರಿಯಿತು. ಉತ್ಸವದ ವೇದಿಕೆ ಹಾಕಿರುವ ಕೋಟೆ ಮೈದಾನದಲ್ಲಿ ಅಪಾರ ಪ್ರಮಾಣದ ನೀರು ನುಗ್ಗಿತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	20,797	40,000
ಹಾರಂಗಿ	2,859	2,858.25	800	1,500
ಕಬಿನಿ	2,284.00	2,283.96	4,835	3,454
ಹೇಮಾವತಿ	2,922	2,921.50	16,394	4,600
ಲಿಂಗನಮಕ್ಕಿ	1,819	1,815.35	4,643	4,508
ಸೂಪಾ (ಮೀ)	564	558.47	1,143.05	2,507.83
ಮಾಣಿ	595	593.66	859	670
ತುಂಗಭದ್ರಾ	1,633	1,626.06	21,697	12,696
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.85	339	184
ಭದ್ರಾ *	186	184.3	5,806	5,204
ಆಲಮಟ್ಟಿ (ಮೀ)	519.6	519.6	1,288	1,288
ನಾರಾಯಣಪುರ (ಮೀ)	492.25	491.66	1,500	8,646

* ನೆಲಮಟ್ಟದಿಂದ

ಮಹಾರಥೋತ್ಸವ

ಪ್ರಜಾವಾಣಿ ಚಿತ್ರ

ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವ ಅಂಗವಾಗಿ ಬುಧವಾರ ಮಹಾ ರಥೋತ್ಸವ ನಡೆಯಿತು.

ಕೇಂದ್ರದಿಂದ ಸೇಡಿನ ರಾಜಕಾರಣ: ಸಚಿವ ಪಾಟೀಲ

ಕಲಬುರಗಿ: 'ಕೇಂದ್ರ ಸರ್ಕಾರವು ಸೇಡಿನ ರಾಜಕಾರಣ ಮಾಡುತ್ತಿದೆ' ಎಂದು ಸಚಿವ ಡಾ.ಶರಣಪ್ರಕಾಶ ಪಾಟೀಲ ಟೀಕಿಸಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕಲಬುರಗಿ ಸಂಸದರ ನವೀಕೃತ ಕಚೇರಿ ಉದ್ಘಾಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಹಿಂದೆಯೂ ವಿಮಾನ ಸಂಚಾರ ಸ್ಥಗಿತಗೊಂಡಾಗ ಮರು ಕಾರ್ಯಾಚರಣೆಗೆ ಆಗ್ರಹಿಸಿದಾಗ ವಿಮಾನಗಳ ಸೇವೆ ಶುರುವಾಗಿತ್ತು. ಇದೀಗ ಪುನಃ ದಿಢೀರ್ ವಿಮಾನ ಸಂಚಾರ ಸ್ಥಗಿತಗೊಳಿಸಲಾಗಿದೆ. ಇದಲ್ಲದೆ ತೆರಿಗೆ ಹಂಚಿಕೆಯಲ್ಲಿಯೂ ರಾಜ್ಯಕ್ಕೆ ಅನ್ಯಾಯ ಮುಂದುವರಿದಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಸದ ರಾಧಾಕೃಷ್ಣ ದೊಡ್ಡಮನಿ ಮಾತನಾಡಿ, 'ವಿಮಾನಗಳ ಸಂಚಾರ ಏಕಾಏಕಿ ಸ್ಥಗಿತದಿಂದ ಪ್ರಯಾಣಿಕರಿಗೆ ತೊಂದರೆಯಾಗಿದೆ. ಈ ಕುರಿತು ಕೇಂದ್ರಕ್ಕೆ ಪತ್ರ ಬರೆದು ಗಮನ ಸೆಳೆಯಲಾಗಿದೆ. ಅ.30ರಂದು ಬೆಂಗಳೂರಿನಲ್ಲಿ ನಾಗರಿಕ ವಿಮಾನಯಾನ ಸಚಿವರು ಸಭೆ ಕರೆದಿದ್ದಾರೆ. ಅಲ್ಲಿಯೂ ಈ ಬಗೆಗೆ ಗಮನ ಸೆಳೆಯಲಾಗುವುದು' ಎಂದರು.

ಪೊಲೀಸ್ ವಾಹನಕ್ಕೆ ಡಿಕ್ಕಿ ಹೊಡೆಸಿದ್ದ ಆರೋಪಿ; ಮತ್ತೊಬ್ಬ ಪರಾರಿ

ಜಾನುವಾರು ಕಳ್ಳಸಾಗಣೆ: ಆರೋಪಿಗೆ ಗುಂಡು

ಪ್ರಜಾವಾಣಿ ವಾರ್ತೆ

ಮಂಗಳೂರು: ಜಾನುವಾರು ಕಳ್ಳಸಾಗಣೆ ಮಾಡುತ್ತಿದ್ದ ಮಿನಿ ಲಾರಿಯನ್ನು ಬೆನ್ನಟ್ಟಿದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಗ್ರಾಮಾಂತರ ಠಾಣೆಯ ಪೊಲೀಸರು, ತಮ್ಮ ವಾಹನಕ್ಕೆ ಲಾರಿಯನ್ನು ಡಿಕ್ಕಿ ಹೊಡೆಸಿದ ಆರೋಪಿ ಕಾಲಿಗೆ ಈಶ್ವರಮಂಗಲ ಎಂಬಲ್ಲಿ ಬುಧವಾರ ಬೆಳಿಗ್ಗೆ ಗುಂಡು ಹಾರಿಸಿದ್ದಾರೆ. ವಾಹನದಲ್ಲಿದ್ದ ಜಾನುವಾರುಗಳನ್ನು ವಶಪಡಿಸಿಕೊಂಡಿದ್ದಾರೆ.

'ಕಾಸರಗೋಡು ಜಿಲ್ಲೆಯ ಅಬ್ದುಲ್ಲಾ (40) ಬಂಧಿತ ಆರೋಪಿ. ವಾಹನ ನಿಲ್ಲಿಸಲು ಪೊಲೀಸರು ಸೂಚಿಸಿದರೂ ಮುಂದಕ್ಕೆ ಸಾಗಿದ್ದ. ಸುಮಾರು 10 ಕಿ.ಮೀ ದೂರದವರೆಗೆ ಲಾರಿಯನ್ನು ಪೊಲೀಸರು ಬೆನ್ನಟ್ಟಿದ್ದರು. ಈ ವೇಳೆಗೆ ಆರೋಪಿಯು ತಾನು ಚಲಾಯಿಸುತ್ತಿದ್ದ ವಾಹನವನ್ನು ಪೊಲೀಸ್ ವಾಹನಕ್ಕೆ ಡಿಕ್ಕಿ ಹೊಡೆಸಿದ್ದ. ಆಗ ಆ ವಾಹನದತ್ತ ಪಿಎಸ್‌ಐ ಗುಂಡು ಹಾರಿಸಿದ್ದರು. ವಾಹನ ನಿಲ್ಲಿಸಿದ ಆರೋಪಿಯು ಚಾಕು ತಂದು ಪೊಲೀಸರ ಮೇಲೆ ದಾಳಿ ನಡೆಸಲು ಯತ್ನಿಸಿದ್ದ. ಆಗ ಪಿಎಸ್‌ಐ ಮತ್ತೊಂದು ಗುಂಡು ಹಾರಿಸಿದ್ದು, ಅದು ಆರೋಪಿಯ ಕಾಲಿಗೆ ತಗುಲಿದೆ. ಗಾಯಗೊಂಡ ಆರೋಪಿಯನ್ನು ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿದೆ. ವಾಹನದಲ್ಲಿದ್ದ ಇನ್ನೊಬ್ಬ ಆರೋಪಿ ಪರಾರಿಯಾಗಿದ್ದಾನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಮಾಹಿತಿ ನೀಡಿದ್ದಾರೆ.

ಜಾನುವಾರು ಕಳ್ಳಸಾಗಣೆ ಮಾಡುತ್ತಿದ್ದ ವಾಹನವನ್ನು ಪೊಲೀಸರು ಪುತ್ತೂರು ತಾಲ್ಲೂಕಿನ ಈಶ್ವರಮಂಗಲದಲ್ಲಿ ಬುಧವಾರ ವಶಕ್ಕೆ ಪಡೆದರು

'ವಾಹನದಲ್ಲಿ ಏಳು ಎಮ್ಮೆ, ಎರಡು ಕೋಣ, ಎರಡು ಹಸು, ಒಂದು ಕುರಿ ಸೇರಿದಂತೆ 12 ಜಾನುವಾರುಗಳಿದ್ದವು, ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಅದನ್ನು ಹಾಸನ ಕಡೆಯಿಂದ ತರಲಾಗಿತ್ತು' ಎಂದು ಅವರು ತಿಳಿಸಿದ್ದಾರೆ.

'ಜಾನುವಾರು ಹತ್ಯೆ ತಡೆ ಕಾಯ್ದೆಯಡಿ ಬೆಳ್ಳಾರೆ ಠಾಣೆಯಲ್ಲಿ ಜುಲೈನಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧಿತನಾಗಿದ್ದ ಈ ಆರೋಪಿ ಜಾಮೀನಿನ ಮೇಲೆ ಬಿಡುಗಡೆಗೊಂಡ ಬಳಿಕ ಮತ್ತೆ ಅದೇ ಕೃತ್ಯದಲ್ಲಿ ತೊಡಗಿದ್ದ' ಎಂದು ತಿಳಿಸಿದ್ದಾರೆ.

ಹಗ್ಗ ಕತ್ತರಿಸಿದ್ದ ಪುತ್ತಿಲ: ಜಾನುವಾರು ಕಳ್ಳಸಾಗಣೆ ವಾಹನವನ್ನು ಪೊಲೀಸರು ವಶಪಡಿಸಿಕೊಂಡ ಸ್ಥಳಕ್ಕೆ ಬಿಜೆಪಿ ಮುಖಂಡ ಅರುಣ್ ಕುಮಾರ್ ಪುತ್ತಿಲ ಭೇಟಿ ನೀಡಿ ಪೊಲೀಸರಿಗೆ ಅಭಿನಂದನೆ ಸಲ್ಲಿಸಿದ್ದರು. ಲಾರಿಗೆ ಕಟ್ಟಿದ್ದ ಹಗ್ಗವನ್ನು ಪುತ್ತಿಲ ಕತ್ತಿಯಿಂದ ಕಡಿದು, ಗೋವುಗಳನ್ನು ಬಿಡುಗಡೆ ಮಾಡುವ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಇದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, 'ವಾಹನದಲ್ಲಿದ್ದ ಒಂದು ಜಾನುವಾರು ಸತ್ತಿತ್ತು. ವಾಹನದಲ್ಲಿದ್ದ ಜಾನುವಾರುಗಳನ್ನು ಇಳಿಸಲು ಸ್ಥಳಕ್ಕೆ ಬಂದಿದ್ದ ಅರುಣ್ ಪುತ್ತಿಲ ಅನುಮತಿ ಕೋರಿದ್ದರು. ಜಾನುವಾರುಗಳ ಸಾವು ತಪ್ಪಿಸಲು ಪೊಲೀಸರು ಅದಕ್ಕೆ ಒಪ್ಪಿದ್ದರು. ಲಾರಿಗೆ ಕಟ್ಟಿದ್ದ ಹಗ್ಗಗಳನ್ನು ಪುತ್ತಿಲ ಆ ಬಳಿಕ ಕತ್ತರಿಸಿದ್ದರು. ಪೊಲೀಸರು ಇಂತಹ ಸಂದರ್ಭಗಳಲ್ಲಿ ಕೆಲವೊಮ್ಮೆ ಸ್ಥಳೀಯರ ಮತ್ತು ಇತರರ ಸಹಾಯವನ್ನು ಪಡೆಯುತ್ತಾರೆ. ಜಾನುವಾರುಗಳ ರಕ್ಷಣೆಗಾಗಿ ಸ್ಥಳೀಯ ಮುಸ್ಲಿಂ ಕುಟುಂಬದವರೇ ಹಗ್ಗ ಕತ್ತರಿಸಲು ಕತ್ತಿಯನ್ನು ನೀಡಿದ್ದರು' ಎಂದು ಸ್ಪಷ್ಟಪಡಿಸಿದ್ದಾರೆ.

'ಈ ಸಂಬಂಧ ತಪ್ಪು ಪ್ರಚಾರ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಎಸ್‌ಪಿ ಹೇಳಿದ್ದಾರೆ.

ಹಾಸನಾಂಬ ದೇವಾಲಯದ ಗರ್ಭಗುಡಿಯ ಬಾಗಿಲನ್ನು ಗುರುವಾರ ಸಚಿವ ಕೃಷ್ಣಬೈರೇಗೌಡ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಮುಚ್ಚಲಾಯಿತು

ಈ ಬಾರಿ 26 ಲಕ್ಷಕ್ಕೂ ಹೆಚ್ಚು ಭಕ್ತರಿಂದ ದರ್ಶನ

ಹಾಸನಾಂಬ ದರ್ಶನೋತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಶಕ್ತಿದೇವತೆ, ಹಾಸನಾಂಬ ದರ್ಶನೋತ್ಸವಕ್ಕೆ ಗುರುವಾರ ತೆರೆ ಬಿದ್ದಿತು. ಮಧ್ಯಾಹ್ನ 1.07ಕ್ಕೆ ಸಕಲ ವಿಧಿವಿಧಾನಗಳೊಂದಿಗೆ ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲು ಬಂದ್ ಮಾಡಲಾಯಿತು.

ಸಂಪ್ರದಾಯದಂತೆ ಪೂಜೆ, ನೈವೇದ್ಯ ಸಲ್ಲಿಸಿ ನಂದಾದೀಪವನ್ನು ಹಚ್ಚಿಟ್ಟ ಅರ್ಚಕರು, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳ ಸಮ್ಮುಖದಲ್ಲಿ ಗರ್ಭಗುಡಿಯ ಬಾಗಿಲಿಗೆ ಬೀಗ ಹಾಕಿ ಕೀಲಿಯನ್ನು ದೇವಾಲಯದ ಆಡಳಿತಾಧಿಕಾರಿಗೆ ಹಸ್ತಾಂತರಿಸಿದರು.

ಈ ಬಾರಿ 26 ಲಕ್ಷಕ್ಕೂ ಹೆಚ್ಚು ಭಕ್ತರು ದರ್ಶನ ಪಡೆದಿದ್ದು, ಟಿಕೆಟ್, ಲಡ್ಡುಪ್ರಸಾದ ಮಾರಾಟದಿಂದ ₹ 21.82 ಕೋಟಿ ಆದಾಯ ಸಂಗ್ರಹವಾಗಿದೆ.

ಮುಂದಿನ ವರ್ಷ ಅ.29ರಿಂದ ನ.11ರವರೆಗೆ ಹಾಸನಾಂಬ ದೇಗುಲದ ಬಾಗಿಲು ತೆರೆಯಲಿದ್ದು, ಭಕ್ತರಿಗೆ ದರ್ಶನ ಲಭ್ಯವಾಗಲಿದೆ.

ಗರ್ಭಗುಡಿಯ ಬಾಗಿಲು ಮುಚ್ಚುವುದಕ್ಕೂ ಮುನ್ನ ಸಿದ್ದೇಶ್ವರ ಸ್ವಾಮಿ ರಥೋತ್ಸವ ಹಾಗೂ ಕೆಂಡೋತ್ಸವ ಸಂಭ್ರಮದಿಂದ ನೆರವೇರಿತು. ಜಿಲ್ಲಾಧಿಕಾರಿ ಲತಾಕುಮಾರಿ ಅವರು ಕೆಂಡ ಹಾಯ್ದು ಗಮನಸೆಳೆದರು.

ಬಳಿಕ ಮಾತನಾಡಿದ ಅವರು, 'ಕಳಸ ಹೊತ್ತ ಭಕ್ತರು ಕೆಂಡ ಹಾಯ್ದದ್ದು ನೋಡಿ ನನಗೂ ಇಂಗಿತ ಬಂತು. ಮೊದಲು ಭಯವಾಯಿತು, ನಂತರ ಭಕ್ತಿಯಿಂದ ಕೈ ಮುಗಿದು ಹೋದೆ. ಏನೂ ಆಗಲಿಲ್ಲ' ಎಂದು ಅನುಭವ ಹಂಚಿಕೊಂಡರು.

ಉಮಾಶ್ರೀಗೆ ಜಾಮೀನು

ಮಸ್ಕಿ (ರಾಯಚೂರು ಜಿಲ್ಲೆ): ವಿಧಾನಸಭಾ ಚುನಾವಣೆ ವೇಳೆ ಪ್ರಚೋದಕಾರಿ ಭಾಷಣ ಮಾಡಿದ ಪ್ರಕಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯ ನಟಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರಿಗೆ ಗುರುವಾರ ಷರತ್ತುಬದ್ಧ ಜಾಮೀನು ಮುಂಜೂರು ಮಾಡಿದೆ.

ಉಮಾಶ್ರೀ ಪರವಾಗಿ ವಕೀಲ ನಬೀ ಶೇಡಮಿ ರಸೂಲ್, ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಆರ್. ಹನುಮೇಶ ನಾಯಕ ವಾದ ಮಂಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರಾದ ರೂಪಾಶ್ರೀ ವಗ್ಗಾ ಅವರು ₹50 ಸಾವಿರ ಬಾಂಡ್, ಒಬ್ಬ ಜಾಮೀನುದಾರನ ಶ್ಯೂರಿಟಿ ನೀಡಬೇಕು ಎಂಬ ಷರತ್ತು ವಿಧಿಸಿ ಜಾಮೀನು ನೀಡಿ ಆದೇಶಿಸಿದ್ದಾರೆ. ರವಿ ಕುಮಾರ ಮಡಿವಾಳ ಜಾಮೀನು ನೀಡಿದರು. 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್. ಬಸನಗೌಡ ತುರ್ವಿಹಾಳ ಪರವಾಗಿ ಪ್ರಚಾರ ಸಭೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದರು ಎಂದು ಚುನಾವಣಾಧಿಕಾರಿ ದೂರು ನೀಡಿದ್ದರು.

ಕಾಜಲ್ ಕುಂದರ್

ವಿಭಿನ್ನ ಪಾತ್ರಗಳ ನಿರೀಕ್ಷೆಯಲ್ಲಿ ಕಾಜಲ್

ಮುಂಬೈ ಮೂಲದ ಕಾಜಲ್ ಕುಂದರ್ ನಾಯಕಿಯಾಗಿ ನಟಿಸಿರುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರ ಇಂದು (ಅ.24) ತೆರೆ ಕಾಣುತ್ತಿದೆ. ಚಿತ್ರದಲ್ಲಿ ತಮ್ಮ ಪಾತ್ರ ಹಾಗೂ ಈತನಕದ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ಚಿತ್ರದಲ್ಲಿ ನಿಮ್ಮ ಪಾತ್ರ...

'ಕವಿತಾ' ಎಂಬ ಪಾತ್ರ ನನ್ನದು. ಮಧ್ಯಮ ವರ್ಗದ ಕುಟುಂಬದ ಹುಡುಗಿ. ಮದುವೆಯಾಗಲು ಇಷ್ಟವಿಲ್ಲ ಎಂದು ಸಾಕಷ್ಟು ಸಮಯದಿಂದ ಮುಂದೂಡಿಕೊಂಡು ಬಂದಿರುತ್ತಾಳೆ. ಆದರೆ ನಾಯಕನನ್ನು ನೋಡಿ ತಕ್ಷಣ ಮದುವೆಗೆ ಒಪ್ಪಿಕೊಳ್ಳುವ ಪಾತ್ರ. ಎಲ್ಲರಿಗೂ ನನ್ನ ಈ ನಿರ್ಧಾರದಿಂದ ಶಾಕ್ ಅನ್ನಿಸುತ್ತದೆ. ಆದರೆ ಅದಕ್ಕೆ ಕಾರಣವೇನು? ನನ್ನ ಪಾತ್ರ ಪೋಷಣೆ ಹೇಗಿದೆ ಎಂಬುದನ್ನು ಸಿನಿಮಾದಲ್ಲಿ ನೋಡಬಹುದು. ಹೆಚ್ಚು ಮಾತಾಡುವುದಿಲ್ಲ, ಅಂತರ್ಮುಖಿ ಎನ್ನುವ ರೀತಿ ಪಾತ್ರ.

• ಒಟ್ಟಾರೆ ಕೌಟುಂಬಿಕ ಕಥೆಯ ಚಿತ್ರವೇ?

ಹೌದು, ಪೂರ್ತಿ ಕೌಟುಂಬಿಕ ಡ್ರಾಮಾ. ಈ ಕಥೆಯ ಉದ್ದೇಶ ತುಂಬ ಗಂಭೀರವಾದುದು. ತೊನ್ನಿನ ಸಮಸ್ಯೆಯುಳ್ಳವರ ಬಗ್ಗೆ ಮಾತನಾಡುತ್ತಿದ್ದೇವೆ. ಅದನ್ನು ಸಹಜವಾಗಿ ತೋರಿಸಿದ್ದೇವೆ. ಜೊತೆಗೆ ಪ್ರಾರಂಭದಲ್ಲಿ ಒಂದಷ್ಟು ಹಾಸ್ಯ ಕೂಡ ಇದೆ. ಇಡೀ ಕುಟುಂಬ ಒಟ್ಟಿಗೆ ಕುಳಿತು ನೋಡುವಂಥ ಚಿತ್ರ. ಹಾಸ್ಯ, ಎಮೋಷನ್ ಎಲ್ಲವೂ ಇದೆ.

• ಗ್ಲಾಮರಸ್ ಪಾತ್ರಗಳನ್ನು ಬಿಟ್ಟು ಈ ರೀತಿ ಪಾತ್ರ ಒಪ್ಪಿಕೊಂಡಿದ್ದೇಕೆ?

ನಾನು ಈ ಹಿಂದೆ ಮಾಡಿದ ಸಿನಿಮಾಗಳಲ್ಲಿ ಕೂಡ ಕಾಂಟೆಂಟ್ ತುಂಬ ಗಟ್ಟಿಯಾಗಿತ್ತು. ಇದರಲ್ಲಿ ಕೂಡ ಕಾಂಟೆಂಟ್ ಗಟ್ಟಿಯಾಗಿದೆ. ಈ ರೀತಿ ವಿಷಯವನ್ನು ಯಾರೂ ಈ ತನಕ ಹಿರಿತೆರೆಯಲ್ಲಿ ಹೇಳಿಲ್ಲ. ನನಗೆ ಭಿನ್ನವಾದ ಕಥೆಗಳ ಸಿನಿಮಾ ಮಾಡುವುದು ಆಸೆ. ಗ್ಲಾಮರ್‌ಗಿಂತ ಕಥೆ ಗಟ್ಟಿಯಾಗಿರಬೇಕು. ಪಾತ್ರ ಗುರುತಿಸುವಂತಿರಬೇಕು. ಇದು ಕಥೆಯಾಗಿ, ಪಾತ್ರವಾಗಿ ತುಂಬ ಭಿನ್ನ ಅನಿಸಿತು. ಈ ಹಿಂದೆ 'ಪೆಪೆ' ಚಿತ್ರದಲ್ಲಿ ನಟಿಸಿದ್ದೆ. ಅದರಲ್ಲಿ ತುಂಬ ಗಟ್ಟಿಯಾದ ಹೆಣ್ಣುಮಗಳು ಎಂಬ ಪಾತ್ರವಿತ್ತು. ಇಲ್ಲಿ ಅದಕ್ಕೆ ತದ್ವಿರುದ್ಧ. ತುಂಬ ಮೌನಿ. ಶಾಂತವಾಗಿರುತ್ತೇನೆ. ಹೀಗಾಗಿ ಈ ಪಾತ್ರ ಒಪ್ಪಿಕೊಂಡೆ.

• ನಿಮ್ಮ ಈತನಕದ ಸಿನಿಪಯಣ...

ತುಂಬ ಚೆನ್ನಾಗಿದೆ. ಇಲ್ಲಿತನಕ ಮಾಡಿರುವ ಎಲ್ಲ ಪಾತ್ರಗಳನ್ನು ಇಷ್ಟಪಟ್ಟು ಮಾಡಿರುವುದು. ಖಂಡಿತವಾಗಿ ಇನ್ನಷ್ಟು ಸ್ಕ್ರಿಪ್ಟ್‌ಗಳು ಸಿಗಬೇಕು, ಒಳ್ಳೊಳ್ಳೆ ನಿರ್ದೇಶಕರ ಜತೆ ಕೆಲಸ ಮಾಡಬೇಕೆಂಬ ಆಸೆಯಿದೆ. ಜಾಸ್ತಿ ಜನಕ್ಕೆ ನನ್ನ ಬಗ್ಗೆ ಗೊತ್ತಿಲ್ಲ ಎಂಬ ಭಾವನೆ ನನ್ನಲ್ಲಿ ಇದೆ. ನಾನು ಹೆಚ್ಚು ಹೊರಗೆ ಕಾಣಿಸಿಕೊಳ್ಳುವುದಿಲ್ಲ. ಈತನಕ ನನಗೆ ಸಿಕ್ಕಿರುವ ಸಿನಿಮಾಗಳೆಲ್ಲ ನನ್ನ ಹಿಂದಿನ ಸಿನಿಮಾಗಳಿಂದಲೇ ಸಿಕ್ಕಿರುವುದು. ನನ್ನ ಒಂದು ಸಿನಿಮಾದ ನಟನೆ ನೋಡಿಯೇ ಇನ್ನೊಂದು ಸಿನಿಮಾದ ಅವಕಾಶ ಸಿಕ್ಕಿದ್ದು. ಇನ್ನಷ್ಟು ಉತ್ತಮ ಪಾತ್ರಗಳನ್ನು ಮಾಡಬೇಕು.

• ನಿಮ್ಮ ಹಿನ್ನೆಲೆ ಏನು? ಚಿತ್ರರಂಗಕ್ಕೆ ಬಂದಿದ್ದು ಹೇಗೆ?

ನಾನು ಮುಂಬೈನವಳು. ಶಾಲಾ ದಿನಗಳಲ್ಲಿ ರಂಗ ಕಲಾವಿದೆಯಾಗಿದ್ದೆ. ವೃತ್ತಿಯಿಂದ ಡಾನ್ಸರ್. ಕಾಲೇಜು ಮುಗಿಯುವ ಮೊದಲೇ 'ಹರಹರ ಮಹಾದೇವ್' ಎಂಬ ಧಾರಾವಾಹಿ ಮೂಲಕ ಕಿರುತೆರೆಗೆ ಬಂದೆ. ಅಲ್ಲಿಂದ ನಂತರ ಸಣ್ಣ ಸಣ್ಣ ಪಾತ್ರಗಳ ಮೂಲಕ ಸಿನಿಪಯಣ ಪ್ರಾರಂಭವಾಯಿತು. 'ಮಾಯಾ ಕನ್ನಡಿ' ನಾಯಕಿಯಾಗಿ ನನ್ನ ಮೊದಲ ಸಿನಿಮಾ. ಅದಾದ ಬಳಿಕ 'ಬಾಂಡ್ ರವಿ', 'ಕೆಟಿಎಂ' ಚಿತ್ರಗಳಲ್ಲಿ ನಟಿಸಿದೆ. 'ಪೆಪೆ' ಸಿನಿಮಾಕ್ಕೆ ನಾಯಕಿಯಾದೆ.

• ಇಲ್ಲಿಗೆ ಬಂದ ನಂತರ ಇಷ್ಟು ಚೆನ್ನಾಗಿ ಕನ್ನಡ ಕಲಿತದ್ದಾ?

ಬೆಂಗಳೂರಿಗೆ ಬಂದು ಒಂದೂವರೆ ವರ್ಷವಾಯ್ತು. ಇಲ್ಲಿಗೆ ಬಂದ ನಂತರ ಅಕ್ಕಪಕ್ಕದವರ ಜತೆ ಮಾತನಾಡುತ್ತ, ಸೆಟ್‌ನಲ್ಲಿ ಮಾತನಾಡಿ ಕನ್ನಡ ಕಲಿತಿದ್ದು. ಮೊದಲೆಲ್ಲ ಕೈಸನ್ನೆ, ಬಾಯಿ ಸನ್ನೆ ಮೂಲಕ ಮಾತನಾಡುತ್ತಿದ್ದೆ. ಊಟ, ನೀರು ಬೇಕು ಎಂಬಿತ್ಯಾದಿ ಬೇಸಿಕ್ ಪದಗಳನ್ನು ಕೈ ಸನ್ನೆ ಮಾಡುತ್ತಿದೆ. ನಿರ್ದೇಶಕರು ಕೂಡ ಬರೆದು, ಅಥವಾ ಸರಳವಾದ ಇಂಗ್ಲಿಷ್‌ನಲ್ಲಿ ನನಗೆ ಸೂಚನೆ ನೀಡುತ್ತಿದ್ದರು. ಈಗ ಅರಾಮಾಗಿ ಮಾತನಾಡುವಷ್ಟು ಕನ್ನಡ ಬರುತ್ತದೆ. ತುಂಬ ಖುಷಿಯಾಗುತ್ತಿದೆ.

• ನಿಮ್ಮ ಮುಂದಿನ ಸಿನಿಮಾಗಳು...

ಸುದೀಪ್ ನಿರ್ಮಾಣದ 'ಮ್ಯಾಂಗೊ ಪಚ್ಚ' ಚಿತ್ರದಲ್ಲಿ ನಟಿಸುತ್ತಿದ್ದೇನೆ. ಅವರ ಅಳಿಯ ಸಂಚಿತ್ ನಾಯಕ. ಬೇರೆ ಯಾವುದು ಸ್ಕ್ರಿಪ್ಟ್ ಅಂತಿಮವಾಗಿಲ್ಲ. ಒಳ್ಳೆಯ ಸ್ಕ್ರಿಪ್ಟ್‌ಗಳನ್ನು ಎದುರು ನೋಡುತ್ತಿರುವೆ.

• ನಿಮ್ಮ ಮುಂದಿನ ಗುರಿಗಳು ಏನು?

ಇನ್ನೂ ಒಳ್ಳೊಳ್ಳೆ ನಿರ್ದೇಶಕರ ಜತೆ ಕೆಲಸ ಮಾಡಬೇಕು. ಭಿನ್ನವಾದ ಪಾತ್ರಗಳಲ್ಲಿ ನಟಿಸಬೇಕು. ಒಂದು ಸಿನಿಮಾದ ಪಾತ್ರ ಇನ್ನೊಂದಕ್ಕೆ ತಾಳೆಯಾಗಬಾರದು. ಆ ರೀತಿ ಸವಾಲಿನ ಪಾತ್ರಗಳನ್ನು ಮಾಡಬೇಕು.

ಮೂರೂವರೆ ವರ್ಷಗಳ ಶ್ರಮವಿದೆ

ಸ್ವತಃ ತೊನ್ನಿನ ಸಮಸ್ಯೆ ಹೊಂದಿರುವ ಮಹೇಶ್ ಗೌಡ ಈ ಚಿತ್ರವನ್ನು ನಿರ್ದೇಶಿಸಿ, ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. 'ಶೀರ್ಷಿಕೆಯೇ ಹೇಳುವಂತೆ ಬಿಳಿಚುಕ್ಕಿ ಅಂದರೆ ನಾನು. ತೊನ್ನಿನ ಸಮಸ್ಯೆ ಹೊಂದಿರುವ ನಾನು 'ಶಿವ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನನ್ನು ಚಿತ್ರದಲ್ಲಿ ಎಲ್ಲರೂ ಬಿಳಿಚುಕ್ಕಿ ಎಂದು ಕರೆಯುತ್ತಿರುತ್ತಾರೆ. ಹಳ್ಳಿಹಕ್ಕಿ ಎಂದರೆ ನಾಯಕಿ. ಸುಂದರವಾದ ಹುಡುಗಿಗೆ ಸಾಮಾನ್ಯವಾಗಿ ಹಳ್ಳಿಹಕ್ಕಿ ಎಂದು ಕರೆಯುತ್ತೇವೆ. ಹಲವಾರು ವಿಷಯಗಳನ್ನು ಅಡ್ರೆಸ್ ಮಾಡುವ ಸಿನಿಮಾವಿದು. ಬೇಕಂತಲೇ ಮಾಡಿದ ಕಥೆಯಲ್ಲ. ಕೆಲವು ಸನ್ನಿವೇಶಗಳಿಂದಾಗಿ ಈ ಕಥೆ ಮಾಡಬೇಕಾಯ್ತು. ಆಮೇಲೆ ಹಠಕ್ಕೆ ಬಿದ್ದು ಸಿನಿಮಾ ಮಾಡಿದೆವು. ಇದರ ಹಿಂದೆ ಮೂರೂವರೆ ವರ್ಷಗಳ ಶ್ರಮವಿದೆ' ಎನ್ನುತ್ತಾರೆ ಮಹೇಶ್ ಗೌಡ.

ಶಿವರಾಜ್‌ಕುಮಾರ್

ಗುಮ್ಮಡಿ ನರಸಯ್ಯನಾದ ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ನಟನೆಯ 'ಗುಮ್ಮಡಿ ನರಸಯ್ಯ' ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆಂಧ್ರಪ್ರದೇಶದ ಯೆಲ್ಲಾಂಡು ರಾಜಕಾರಣಿ ಗುಮ್ಮಡಿ ನರಸಯ್ಯ ಅವರ ಪಾತ್ರದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳುತ್ತಿರುವುದು ವಿಶೇಷ. ಪರಮೇಶ್ವರ್ ಹಿವ್ರಲೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈಗಾಗಲೇ ನಟರಾಗಿ ತೆಲುಗು ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಇವರ ಚೊಚ್ಚಲ ನಿರ್ದೇಶನದ ಚಿತ್ರವಿದು.

ಸೈಕಲ್ ತಳ್ಳುತ್ತಾ, ಹೆಗಲಿಗೆ ಕೆಂಪು ಶಾಲು ಹಾಕಿಕೊಂಡು, ವಿಧಾನಸೌಧದ ಮುಂದೆ ಶಿವಣ್ಣ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ಎನ್.ಸುರೇಶ್ ರೆಡ್ಡಿ ಬಂಡವಾಳ ಹೂಡುತ್ತಿದ್ದಾರೆ. ತೆಲುಗು, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ.

'ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ನ್ಯೂ ಡೆಮಾಕ್ರಸಿ' ಎಂಬ ಸ್ವತಂತ್ರ ಪಕ್ಷದ ಸದಸ್ಯರಾಗಿದ್ದ ಗುಮ್ಮಡಿ ನರಸಯ್ಯ 1983ರಿಂದ ಐದು ಸಲ ಯೆಲ್ಲಾಂಡು ಕ್ಷೇತ್ರದಿಂದ ವಿಧಾನಸಭೆಯ ಸದಸ್ಯರಾಗಿದ್ದರು. ಐದು ಬಾರಿ ಶಾಸಕರಾಗಿದ್ದರೂ ಸೈಕಲ್‌ನಲ್ಲಿಯೇ ಓಡಾಟ, ರಸ್ತೆ ಬದಿಯಲ್ಲಿ ಊಟ, ಹಳೆ ಮನೆಯಲ್ಲಿಯೇ ವಾಸ ಇವರ ವಿಶೇಷವಾಗಿತ್ತು. ಅಂಥ ಸಜ್ಜನ ರಾಜಕಾರಣಿ ಪಾತ್ರದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ' ಎಂದಿದೆ ಚಿತ್ರತಂಡ.

ನವೆಂಬರ್ 14ಕ್ಕೆ 'ಉಡಾಳ'

ಪೃಥ್ವಿ ಶಾಮನೂರು ನಾಯಕನಾಗಿ ನಟಿಸಿರುವ 'ಉಡಾಳ' ಚಿತ್ರ ನವೆಂಬರ್ 14ರಂದು ತೆರೆಗೆ ಬರಲಿದೆ. ಯೋಗರಾಜ್ ಭಟ್ಟರ ಗರಡಿಯಲ್ಲಿ ಪಳಗಿರುವ ಅಮೋಲ್ ಪಾಟೀಲ್ ನಿರ್ದೇಶನದ ಚಿತ್ರವಿದು. ಯೋಗರಾಜ್ ಸಿನಿಮಾಸ್ ಹಾಗೂ ರವಿ ಶಾಮನೂರು ಫಿಲ್ಮ್ಸ್ ನಿರ್ಮಾಣವಿದೆ.

ಲವ್, ಕಾಮಿಡಿ, ಸಸ್ಪೆನ್ಸ್ ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಚಿತ್ರವಿದು ಎಂದಿದೆ ಚಿತ್ರತಂಡ. ಯೋಗರಾಜ್ ಭಟ್ ಅವರು ಬರೆದಿರುವ ಐದು ಹಾಡುಗಳಿಗೆ ಚೇತನ್ ಡ್ಯಾವಿ ಸಂಗೀತ ನೀಡಿದ್ದು, ಜಸ್ಕರಣ್ ಸಿಂಗ್, ಮಾಳು ನಿಪ್ನಾಳು, ಬಾಳು ಬೆಳಗುಂದಿ, ಕರಿಬಸವ, ಸೃಷ್ಟಿ ಶಾ ಮನೂರ್ ಹಾಡಿದ್ದಾರೆ.

ಹೃತಿಕ ಶ್ರೀನಿವಾಸ್ ಚಿತ್ರದ ನಾಯಕಿ. ಬಲ ರಾಜವಾಡಿ, ಮಾಳು ನಿಪ್ನಾಳ್, ಹರೀಶ್ ಹಿರಿಯೂರು, ಬಿರಾದಾರ್, ಗೋವಿಂದೇಗೌಡ, ಸುಮಿತ್ ಸಂಕೋಜಿ, ವಾದಿರಾಜ ಬಬ್ಲಾದಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಶಿವಶಂಕರ್ ನೂರಂಬಡ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ. ವಿಜಯಪುರದಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣವಾಗಿದೆ.

'ಧೈರ್ಯಂ ಧರ್ಮಂ ದೇಶಂ' ಎಂದ ಹೊಸಬರು

ಗಗನ ಮಲ್ನಾಡ್

ಬಹುತೇಕ ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ 'ಧೈರ್ಯಂ ಧರ್ಮಂ ದೇಶಂ' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಕೆ.ಬಿ. ಮಂಜುನಾಥ್ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶಿಸಿದ್ದಾರೆ. ಜತೆಗೆ ಕೆಬಿಎಂ ಪ್ರೊಡಕ್ಷನ್ಸ್ ಅಡಿಯಲ್ಲಿ ಬಂಡವಾಳವನ್ನೂ ಹೂಡಿದ್ದಾರೆ.

'ನಾನು ಇಲ್ಲಿಯವರೆಗೆ ಎರಡು ಕಿರುಚಿತ್ರಗಳನ್ನು ನಿರ್ದೇಶನ ಮಾಡಿದ್ದೇನೆ. ಇದು ನನಗೆ ಮೊದಲ ಹಿರಿತೆರೆಯ ಅನುಭವ. ಸಾಮಾನ್ಯ ಪ್ರಜೆಯಾದವನು ಧೈರ್ಯ ಮಾಡಬೇಕು, ಅಧಿಕಾರಿಗಳು ಧರ್ಮವನ್ನು ಕಾಪಾಡಬೇಕು, ಯೋಧನಾದವನು ದೇಶವನ್ನು ಕಾಪಾಡಬೇಕು ಎಂಬುದು ಚಿತ್ರದ ಒಟ್ಟಾರೆ ಸಾರ. ಮಾನವೀಯತೆ, ಪ್ರೀತಿ, ಸಂಬಂಧಗಳ ಬೆಲೆಯನ್ನು ತೋರಿಸಿದ್ದೇವೆ. ನಾವು ಸಮಾಜವನ್ನು ಯಾವ ರೀತಿ ಕಾಣಬೇಕು, ಇಲ್ಲಿ ನಮ್ಮ ಜವಬ್ದಾರಿಗಳೇನು, ಒಂದು ಸಮಾಜ ನಿರ್ಮಾಣದಲ್ಲಿ ಧೈರ್ಯ, ಧರ್ಮ, ದೇಶಗಳ ಪಾತ್ರವೇನು ಎಂಬುದೇ ಚಿತ್ರಕಥೆ. ಗಟ್ಟಿಯಾದ ಸಂದೇಶದ ಜತೆ ಮನರಂಜನೀಯ ಅಂಶಗಳೂ ಇವೆ' ಎಂದರು ನಿರ್ದೇಶಕ.

ಅರುಣ್ ವೆಂಕಟರಾಜುಗೆ ಗಗನ ಮಲ್ನಾಡ್ ಜೋಡಿಯಾಗಿದ್ದಾರೆ. ರಘು ಶಿವಮೊಗ್ಗ, ಚಾರ್ಲ್ಸ್ ಟೋನಿ, ಸುರೇಶ್‌ಬಾಬು, ಡಿ.ವಿ.ನಾಗರಾಜು, ಸುರೇಶ್‌ಬಾಬು, ರೋಹಿಣಿ ಮುಂತಾದವರು ಅಭಿನಯಿಸಿದ್ದಾರೆ. ಐದು ಗೀತೆಗಳಿಗೆ ಸೂರಜ್ ಜೋಯಿಸ್ ಸಂಗೀತ ಸಂಯೋಜಿಸಿದ್ದಾರೆ. ಬಹದ್ದೂರ್ ಚೇತನ್‌ಕುಮಾರ್, ಗಜೇಂದ್ರ, ಸಂಜಯ್ ಮತ್ತು ಲಕ್ಷ್ಮಿ ದಿನೇಶ್ ಸಾಹಿತ್ಯವಿದೆ. ಎಸ್.ಕೆ.ಮಸ್ತಾನ್ ಷರೀಫ್ ಛಾಯಾಚಿತ್ರಗ್ರಹಣ, ಧನುಷ್.ಎಲ್.ಬೇಡಿ ಸಂಕಲನವಿದೆ. ಬೆಂಗಳೂರು, ಮಂಗಳೂರು, ಕೊಳ್ಳೇಗಾಲ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ನವೆಂಬರ್ ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ.

ಆರು ಚಿತ್ರಗಳು ಈ ವಾರ ತೆರೆಗೆ

'ಕಾಂತಾರ ಅಧ್ಯಾಯ–1' ಚಿತ್ರದ ಅಬ್ಬರದಿಂದ ಕಳೆದ ಕೆಲವು ವಾರಗಳಿಂದ ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾಗಳು ತೆರೆ ಕಂಡಿರಲಿಲ್ಲ. ಈ ವಾರದಿಂದ ಮತ್ತೆ ಚಿತ್ರ ಬಿಡುಗಡೆ ಚಟುವಟಿಕೆಗಳು ಗರಿಗೆದರಿದ್ದು, ಆರು ಸಿನಿಮಾಗಳು ತೆರೆಯಲ್ಲಿವೆ.

ಬಿಳಿಚುಕ್ಕಿ ಹಳ್ಳಿಹಕ್ಕಿ

ಮಹೇಶ್ ಗೌಡ ನಿರ್ಮಾಣ, ನಿರ್ದೇಶನ ಮಾಡಿ ನಟಿಸಿರುವ ಚಿತ್ರವಿದು. ತೊನ್ನಿನ ಸಮಸ್ಯೆ ಕುರಿತಾದ ಅಪರೂಪದ ಕಥಾವಸ್ತು ಹೊಂದಿರುವ ಚಿತ್ರವನ್ನು ಶ್ರೀಮುರಳಿ ಅರ್ಪಿಸುತ್ತಿದ್ದಾರೆ.

'ಭಾರತೀಯ ಚಿತ್ರರಂಗದಲ್ಲಿಯೇ ಮೊದಲ ಸಲ ತೊನ್ನು ಎಂಬ ಸಮಸ್ಯೆಯ ಸುತ್ತ ರೂಪುಗೊಂಡಿರುವ ಚಿತ್ರವಿದು. ಸಮಸ್ಯೆ ಎಂಬ ಗೋಳಿನ ಕಥೆ ಇದರಲ್ಲಿ ಇಲ್ಲ. ಬದಲಿಗೆ ಇದೊಂದು ರಾಂಕಾಮ್ ಜಾನರ್‌ನ ಚಿತ್ರ. ನಗಿಸುತ್ತಲೇ ಅಳು ಮೂಡಿಸುವ ಕಥೆ' ಎಂದಿದ್ದಾರೆ ಶ್ರೀಮುರಳಿ.

ವೀಣಾ ಸುಂದರ್, ರವಿ ಭಟ್, ಜಹಾಂಗೀರ್ ಮತ್ತು ಲಕ್ಷ್ಮಿ ಸಿದ್ದಯ್ಯ ಪ್ರಮುಖ ಪಾತ್ರಗಳಲ್ಲಿದ್ದಾರೆ. ಕಿರಣ್ ಸಿಎಚ್‌ಎಂ ಛಾಯಾಚಿತ್ರಗ್ರಹಣ, ಮೋನಿಷ್ ಸಂಕಲನ, ರಿಯೋ ಆಂಟನಿ ಸಂಗೀತ ಮತ್ತು ಹಿನ್ನೆಲೆ ಸಂಗೀತವಿದೆ.

ನ್ಯೂಟನ್ ಥರ್ಡ್ ಲಾ

ವಿದ್ಯಾಶ್ರೀ ಗೌಡ

ಹೊಸ ಪ್ರತಿಭೆಗಳೇ ಸೇರಿಕೊಂಡು ಸಿದ್ಧಪಡಿಸಿರುವ ಚಿತ್ರವಿದು. ಸುಧಾಕರ ರೆಡ್ಡಿ ನಿರ್ದೇಶನ ಮಾಡಿದ್ದಾರೆ. ಸನ್‌ಕ್ರಾಫ್ಟ್ ಸಂಸ್ಥೆ ನಿರ್ಮಾಣವಿದೆ.

'ನಾಲ್ಕು ಹುಡುಗರು, ಇಬ್ಬರು ಹುಡುಗಿಯರು ಪ್ರೀತಿಯನ್ನು ಹೇಳಿಕೊಳ್ಳಲು ಲಾಂಗ್ ವೀಕೆಂಡ್ ಹೋಗುತ್ತಾರೆ. ಅಲ್ಲಿ ಗೆಳೆಯರು ಕುಡಿದು ಗಲಾಟೆ ಮಾಡಿಕೊಂಡು ಪಾರ್ಟಿ ಹಾಳು ಮಾಡುತ್ತಾರೆ. ಮಾರನೇ ದಿನ ಅಹಿತಕರ ಘಟನೆ ನಡೆಯುತ್ತದೆ. ಅದು ಏನು? ಯಾಕೆ ಎಂಬುದನ್ನು ಸಸ್ಪೆನ್ಸ್, ಥ್ರಿಲ್ಲರ್ ರೂಪದಲ್ಲಿ ತೋರಿಸಲಾಗಿದೆ' ಎಂದಿದ್ದಾರೆ ನಿರ್ದೇಶಕ.

ತಾರಾಗಣದಲ್ಲಿ ವಿಶೂ, ವಿದ್ಯಾಶ್ರೀ ಗೌಡ, ವಿಜಯ್ ಚೆಂಡೂರ್, ಅಂಬರೀಷ ಸಾರಗಿ, ಶ್ರೀಧರ್ ಭಟ್, ಅಥರ್ವ, ರೋಹಿತ್ ಮುಂತಾದವರಿದ್ದಾರೆ. ಸಾಹಿತ್ಯ ಮತ್ತು ಸಂಗೀತ ಗಂಧರ್ವ ರಾಯರಾವುತ ಅವರದ್ದು. ಪ್ರವೀಣ್ ಕುಮಾರ್ ಛಾಯಾಚಿತ್ರಗ್ರಹಣ, ಶಿವರಾಜ್ ಮೇಹು ಸಂಕಲನವಿದೆ. ಬೆಂಗಳೂರು, ಕನಕಪುರ, ಮಡಿಕೇರಿ, ಹೊನ್ನಾವರ, ಕುಮಟಾ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ.

ಯಾರಿಗೂ ಹೇಳ್ಬೇಡಿ

ಚೈತ್ರಾ ಜೆ. ಆಚಾರ್

ನಟಿ ಚೈತ್ರಾ ಜೆ. ಆಚಾರ್ ಮುಖ್ಯಭೂಮಿಕೆಯಲ್ಲಿರುವ ಚಿತ್ರವಿದು. ಶಿವಗಣೇಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹರೀಶ್ ಅಮ್ಮಿನೇನಿ ಬಂಡವಾಳ ಹೂಡಿದ್ದಾರೆ.

ಚೇತನ್ ವಿಕ್ಕಿ ಚಿತ್ರದ ನಾಯಕ. ಅಪ್ಪಣ್ಣ, ಅಶ್ವಿನಿ ಪೊಲೆಪಲ್ಲಿ, ಶರತ್ ಲೋಹಿತಾಶ್ವ, ಚೈತ್ರಾ ರಾವ್ ಮುಂತಾದವರು ನಟಿಸಿದ್ದಾರೆ.

'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಅಪ್ಪಣ್ಣ ಸ್ನೇಹಿತನಾಗಿ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಅಶ್ವಿನಿ ಪೊಲೆಪಲ್ಲಿ ಉಪನಾಯಕಿ. ಶರತ್ ಲೋಹಿತಾಶ್ವ, ಚೈತ್ರಾರಾವ್, ಶಭರೇಶ್, ಕಾರ್ತಿಕ್ ಮುಂತಾದವರು ನಟಿಸಿದ್ದಾರೆ.

'ಇದೊಂದು ಸಂಪೂರ್ಣ ಹಾಸ್ಯಮಯ ಚಿತ್ರ. ನಾಯಕ ವಿಡಿಯೊ ಜಾಕಿ. ಮದುವೆ ಮುಂಚಿನ ಒಂದು ಸಂದರ್ಭದಲ್ಲಿ ಸುಳ್ಳು ಹೇಳಿ ಕಷ್ಟಕ್ಕೆ ಸಿಲುಕುತ್ತಾನೆ. ನಂತರ 'ಯಾರಿಗೂ ಹೇಳ್ಬೇಡಿ' ಎಂದು ಸುಳ್ಳಿನ ಸರಮಾಲೆಯನ್ನೇ ಕಟ್ಟುತ್ತಾನೆ. ಅದನ್ನು ಮುಚ್ಚಿಡಲು ಹೋದಾಗ ಏನೆಲ್ಲಾ ಅವಾಂತರಗಳು ಆಗುತ್ತವೆ ಎಂಬುದೇ ಚಿತ್ರ' ಎಂದಿದ್ದಾರೆ ನಿರ್ದೇಶಕ.

ಶಶಾಂಕ್ ಶೇಷಗಿರಿ ಸಂಗೀತ, ಡೇವಿಡ್ ಆನಂದರಾಜ್ ಛಾಯಾಚಿತ್ರಗ್ರಹಣ, ದೀಪಕ್.ಸಿ.ಎಸ್ ಸಂಕಲನವಿದೆ.

ಗ್ರೀನ್

ವಿಜಯ್ ನಿರ್ದೇಶನದ ಚಿತ್ರವಿದು. ಬಾಲಾಜಿ ಮನೋಹರ್, ಗೋಪಾಲಕೃಷ್ಣ ದೇಶಪಾಂಡೆ, ಆರ್. ಜೆ. ವಿಕ್ಕಿ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ. ರಾಜ್ ವಿಜಯ್ ಹಾಗೂ ಬಿ.ಎನ್. ಸ್ವಾಮಿ ಬಂಡವಾಳ ಹೂಡಿದ್ದಾರೆ.

'ಸೈಕಾಲಜಿಕಲ್ ಮೈಂಡ್ ಬೈಡಿಂಗ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಮನಸ್ಸನ್ನು ಬೆರಗುಗೊಳಿಸುವ ಥ್ರಿಲ್ಲರ್ ಚಿತ್ರವೂ ಹೌದು. ತನ್ನ ಇಡೀ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಹೋರಾಡುವ ನಾಯಕನ ಕಥೆಯೇ 'ಗ್ರೀನ್'. ಇದೊಂದು ಕಾಡಿನಲ್ಲಿ ನಡೆಯುವ ಕಥೆಯಾಗಿದ್ದು, ಊಟಿ ಬಳಿಯಲ್ಲಿ ಹೆಚ್ಚಿನ ಚಿತ್ರೀಕರಣ ಮಾಡಲಾಗಿದೆ. ಜಗತ್ತಿನ ಪ್ರಮುಖ ಚಲನಚಿತ್ರೋತ್ಸವಗಳಲ್ಲಿ ಚಿತ್ರ ಪ್ರದರ್ಶನವಾಗಿದ್ದು, ಸಾಕಷ್ಟು ಪ್ರಶಸ್ತಿಗಳನ್ನು ಪಡೆದುಕೊಂಡಿದೆ' ಎಂದು ನಿರ್ದೇಶಕರು ತಿಳಿಸಿದ್ದಾರೆ.

ಟಾರ್ಟರೀಸ್, ಆರಿದ್ರಾ ಸಿನಿಮಾಗಳು ಈ ವಾರ ತೆರೆಯಲ್ಲಿವೆ.

‘ಸದ್ಯಕ್ಕೆ ನಾನೇ ಅಧ್ಯಕ್ಷ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜೆಡಿಎಸ್–ಬಿಜೆಪಿ ಸಮನ್ವಯ ಸಮಿತಿ 10 ದಿನಗಳಲ್ಲಿ ನಿರ್ಧಾರ
- ಸಮಿತಿ ಪುನರ್‌ರಚನೆ ಚರ್ಚೆ: ಎಚ್‌ಡಿಕೆ

ಕುಮಾರಸ್ವಾಮಿ

ಬೆಂಗಳೂರು: ‘ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಹಾಗೂ ನಿಖಿಲ್ ಕುಮಾರಸ್ವಾಮಿಗೆ ಜವಾಬ್ದಾರಿ ನೀಡುವ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಸದ್ಯಕ್ಕೆ ನಾನೇ ಅಧ್ಯಕ್ಷ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಜೆಡಿಎಸ್ -ಬಿಜೆಪಿ ಸಮನ್ವಯ ಸಮಿತಿ ರಚನೆ ಬಗ್ಗೆ ವಾರ ಅಥವಾ 10 ದಿನಗಳಲ್ಲಿ ಅಂತಿಮ ತೀರ್ಮಾನ ಮಾಡುತ್ತೇವೆ. ಬೆಂಗಳೂರಿಗೆ ಒಂದು, ರಾಜ್ಯಕ್ಕೆ ಒಂದು ಸಮನ್ವಯ ಸಮಿತಿ ಆಗಬಹುದು. ಪ್ರಮುಖ ನಾಯಕರ ಸಮಿತಿ ಪುನರ್‌ರಚನೆ ಕುರಿತು ಚರ್ಚೆಗಳು ನಡೆದಿವೆ’ ಎಂದು ತಿಳಿಸಿದರು.

ಆರ್‌ಎಸ್‌ಎಸ್ ಬಗ್ಗೆ ತಾವು ಈ ಹಿಂದೆ ಆಡಿದ್ದ ಮಾತಿನ ಬಗ್ಗೆ ಪ್ರಿಯಾಂಕ್ ಖರ್ಗೆ ಅವರ ಪ್ರಶ್ನೆಯನ್ನು ಸುದ್ದಿಗಾರರು ಪ್ರಸ್ತಾಪಿಸಿದಾಗ ಕುಮಾರಸ್ವಾಮಿ ಅವರು, ‘ಆರ್‌ಎಸ್‌ಎಸ್ ಅನ್ನು ನಾನು ಹಿಂದೆ ಟೀಕೆ ಮಾಡಿದ್ದೇನೆ. ಇಲ್ಲ ಎಂದು ಎಲ್ಲೂ ಹೇಳಿಲ್ಲ. ಆ ಬಗ್ಗೆ ಚರ್ಚಿಸುವ ಬದಲು, ಕಲಬುರಗಿ ಜಿಲ್ಲೆಯಲ್ಲಿ ಮಳೆ ಹಾನಿಯಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಮಸ್ಯೆ ಆಲಿಸಿ. ಮೊದಲು ಅವರಿಗೆ ಪರಿಹಾರ ನೀಡಿ’ ಎಂದರು.

‘ಕೆಲವು ದಿನಗಳ ಹಿಂದೆ ರೈತರು ಬೆಳೆ ನಷ್ಟದ ಪರಿಹಾರ ಕೇಳಲು ಹೋದಾಗ ಅವರ ತಂದೆ, ತಮ್ಮ ಹೊಲದಲ್ಲಿ 40 ಎಕರೆ ಬೆಳೆ ನಷ್ಟ ಆಗಿದೆ. ತಾವು ಯಾರ ಬಳಿ ಹೋಗಲಿ ಎಂದು ಪ್ರಶ್ನಿಸಿದ್ದರು. ನನ್ನ ರಾಜಕೀಯ ಹೇಗಿರಬೇಕು ಎಂದು ಅಂತಹವರಿಂದ ಕಲಿಯಬೇಕಾ’ ಎಂದು ಪ್ರಶ್ನಿಸಿದರು.

‘ಅಧಿಕಾರಕ್ಕಾಗಿ ಜೆಡಿಎಸ್ ಕೇಸರೀಕರಣವಾಗಿದೆ ಎಂದೂ ಅವರು ಹೇಳಿದ್ದಾರೆ. ಕರ್ನಾಟಕದಲ್ಲಿ ಅಧಿಕಾರಕ್ಕಾಗಿ ನಮ್ಮ ಮನೆ ಬಾಗಿಲಿಗೆ ಬಂದವರು ಕಾಂಗ್ರೆಸ್‌ನವರು. ಅದಕ್ಕೂ ಮುನ್ನ ನಾವು ಬಿಜೆಪಿಯೊಂದಿಗೆ ಸೇರಿ ಅಧಿಕಾರ ಮಾಡಿದ್ದೆವು ಎನ್ನುವುದು ಅವರಿಗೆ ಗೊತ್ತಿರಲಿಲ್ಲವೇ. ಕಾಂಗ್ರೆಸ್‌ನವರು ಅಧಿಕಾರ ಹಿಡಿಯಲು ಬೇಕಾದಾಗ ನಮ್ಮ ಹತ್ತಿರ ಬರುತ್ತಾರೆ’ ಎಂದರು.

‘ದೇಶದಲ್ಲಿ ಕಾಂಗ್ರೆಸ್ ಪಕ್ಷವೇ 50 ವರ್ಷಕ್ಕೂ ಅಧಿಕ ಕಾಲ ಆಡಳಿತ ನಡೆಸಿದೆ. ಹಿಂದೆ ಕರ್ನಾಟಕದಲ್ಲೂ ಕಾಂಗ್ರೆಸ್‌ನ 28 ಲೋಕಸಭಾ ಸದಸ್ಯರನ್ನು ಗೆಲ್ಲಿಸಿ ಕಳುಹಿಸಲಾಗಿತ್ತು. ಆಗ ಕೇಂದ್ರ, ರಾಜ್ಯದಲ್ಲೂ ಕಾಂಗ್ರೆಸ್ ಸರ್ಕಾರವೇ ಇತ್ತು. ಆಗಿನ ಲೋಕಸಭಾ ಸದಸ್ಯರು ಕರ್ನಾಟಕಕ್ಕೆ ಏನು ಕೊಡಿಸಿದ್ದರು ಎನ್ನುವುದನ್ನೂ ಸಿದ್ದರಾಮಯ್ಯ ಮಾತನಾಡಲಿ’ ಎಂದು ಹೇಳಿದರು.

ವಾಯು ಮಾಲಿನ್ಯ ಶೇ 29 ಇಳಿಕೆ

ದೀಪಾವಳಿ: ಬೀದರ್, ಬೆಳಗಾವಿಯಲ್ಲಿ ಹೆಚ್ಚು ದಾವಣಗೆರೆ, ಮೈಸೂರಿನಲ್ಲಿ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ದೀಪಾವಳಿಯ ಮೂರು ದಿನಗಳಲ್ಲಿ ವಾಯು ಮಾಲಿನ್ಯ ಸರಾಸರಿ ಶೇ 29ರಷ್ಟು ಕಡಿಮೆಯಾಗಿದ್ದರೆ, ಸಾಮಾನ್ಯ ದಿನಗಳಿಗೆ ಹೋಲಿಸಿದರೆ ಶೇ 12ರಷ್ಟು ಇಳಿಕೆಯಾಗಿದೆ.

ದೀಪಾವಳಿಯ ಮೊದಲ ದಿನ ಶೇ 35ರಷ್ಟು, ಎರಡನೇ ದಿನ ಶೇ 27ರಷ್ಟು, ಮೂರನೇ ದಿನ ಶೇ 27ರಷ್ಟು ವಾಯು ಮಾಲಿನ್ಯ ಕಡಿಮೆಯಾಗಿದೆ. ಹಿಂದಿನ ದೀಪಾವಳಿ ಹಾಗೂ ಸಾಮಾನ್ಯ ದಿನಗಳಲ್ಲಿ ದಾಖಲಾಗುವ ವಾಯು ಮಾಲಿನ್ಯಕ್ಕಿಂತ ಕಡಿಮೆ ಪ್ರಮಾಣ (ವಾಯು ಗುಣಮಟ್ಟ ಇಂಡೆಕ್ಸ್– ಎಕ್ಯೂಐ) ಈ ವರ್ಷದ ದೀಪಾವಳಿ ವೇಳೆ ದಾಖಲಾಗಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಪನ ಕೇಂದ್ರಗಳಲ್ಲಿ ದೀಪಾವಳಿಯ ಹಿಂದಿನ ಸೋಮವಾರ ಅ.13ರಂದು ಸರಾಸರಿ 63 ಎಕ್ಯೂಐ ದಾಖಲಾಗಿತ್ತು. ದೀಪಾವಳಿಯ ಮೊದಲ ದಿನ 53 ಎಕ್ಯೂಐ, ಎರಡನೇ ದಿನ 55 ಎಕ್ಯೂಐ, ಮೂರನೇ ದಿನ 60 ಎಕ್ಯೂಐ ದಾಖಲಾಗಿ, ಸಾಮಾನ್ಯ ದಿನಕ್ಕಿಂತಲೂ ಕಡಿಮೆ ವಾಯು ಮಾಲಿನ್ಯ ದಾಖಲಾಗಿದೆ. ಕಳೆದ ವರ್ಷದ ದೀಪಾವಳಿಯ ಮೂರು ದಿನ ಎಕ್ಯೂಐ ಸರಾಸರಿ 73 ಆಗಿತ್ತು. ಈ ಬಾರಿ 56 ಎಕ್ಯೂಐ ದಾಖಲಾಗಿದೆ.

ಅತಿಹೆಚ್ಚು: ಬೀದರ್‌ನಲ್ಲಿ ಅತಿಹೆಚ್ಚು ವಾಯು ಮಾಲಿನ್ಯ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ 38ರಷ್ಟು ವೃದ್ಧಿಯಾಗಿದೆ. ಬೆಳಗಾವಿ, ಬಾಗಲಕೋಟೆ, ಕೊಡಗು, ಕಲಬುರಗಿ–1ರಲ್ಲಿ ವಾಯು ಮಾಲಿನ್ಯ ಹೆಚ್ಚಳವಾಗಿದೆ.

ಅತಿ ಕಡಿಮೆ: ದಾವಣಗೆರೆಯಲ್ಲಿ ಈ ಬಾರಿ ದೀಪಾವಳಿಯ ವಾಯು ಮಾಲಿನ್ಯ ದಾಖಲೆ ಪ್ರಮಾಣದಲ್ಲಿ (ಶೇ 123) ಕಡಿಮೆಯಾಗಿದೆ. ಮೈಸೂರು, ಉತ್ತರ ಕನ್ನಡದಲ್ಲೂ ವಾಯು ಮಾಲಿನ್ಯ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ ಶೇ 44 ರಷ್ಟು ಕಡಿಮೆಯಾಗಿದೆ.

ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ರಾಯಚೂರು, ಕೊಪ್ಪಳ, ಉಡುಪಿ, ತುಮಕೂರಿನಲ್ಲಿ ವಾಯು ಮಾಲಿನ್ಯ ದತ್ತಾಂಶ ನಿರ್ವಹಣೆ ಮಾಡಿಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ಶಬ್ದ ಮಾಲಿನ್ಯ ಎಲ್ಲೆಡೆ ಹೆಚ್ಚು

ದೀಪಾವಳಿ ಸಂದರ್ಭದಲ್ಲಿ ವಾಯು ಮಾಲಿನ್ಯದ ಪ್ರಮಾಣ ಕಡಿಮೆಯಾಗಿರುವ ನಗರ/ ಜಿಲ್ಲೆಗಳಲ್ಲೂ ಶಬ್ದ ಮಾಲಿನ್ಯ ಹೆಚ್ಚಾಗಿದೆ. ಕಳೆದ ದೀಪಾವಳಿಗೆ ಹೋಲಿಸಿದರೆ ಈ ವರ್ಷದ ದೀಪಾವಳಿಯ ಮೂರು ದಿನಗಳಲ್ಲಿ ಶಬ್ದ ಮಾಲಿನ್ಯ ಹೆಚ್ಚಾಗಿರುವುದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 29 ಮಾಪನ ಕೇಂದ್ರಗಳಲ್ಲಿ ದಾಖಲಾಗಿದೆ.

ಬೆಳಗಾವಿಯಲ್ಲಿ 76.18 ಡೆಸಿಬಲ್ (+28%), ಹಾಸನದಲ್ಲಿ 75.26 ಡೆಸಿಬಲ್ (+23%), ಚಿಕ್ಕಬಳ್ಳಾಪುರದಲ್ಲಿ 53.78 ಡೆಸಿಬಲ್ (+23%), ಚಿಕ್ಕಮಗಳೂರಿನಲ್ಲಿ 77.86 ಡೆಸಿಬಲ್ (+22%), ಚಿತ್ರದುರ್ಗದಲ್ಲಿ 67.26 ಡೆಸಿಬಲ್ (+21%), ಮಂಡ್ಯದಲ್ಲಿ 67.19 ಡೆಸಿಬಲ್ (+19%) ದಾಖಲಾಗಿದ್ದು, ಈ ನಗರ/ ಜಿಲ್ಲಾ ಕೇಂದ್ರಗಳು ಶಬ್ದ ಮಾಲಿನ್ಯದಲ್ಲಿ ಮೊದಲ ಐದು ಸ್ಥಾನದಲ್ಲಿದೆ.

ಎಲ್ಲೆಲ್ಲಿ ಎಷ್ಟು ವಾಯು ಮಾಲಿನ್ಯ (ಎಕ್ಯೂಐ)

ಜಿಲ್ಲೆ	2024ರ ದೀಪಾವಳಿ ಮೂರು ದಿನದ ಸರಾಸರಿ	2025ರ ದೀಪಾವಳಿ ಮೂರು ದಿನದ ಸರಾಸರಿ	ಹೆಚ್ಚಳ/ ಕಡಿಮೆ
ಬೀದರ್	75	122	↑ 38%
ಬೆಳಗಾವಿ	60	68	↑ 11%
ಬಾಗಲಕೋಟೆ	70	77	↑ 9%
ಕೊಡಗು	31	32	↑ 4%
ಕಲಬುರಗಿ–1	69	71	↑ 3%
ದಾವಣಗೆರೆ	98	44	↓ 123%
ಮೈಸೂರು	68	31	↓ 122%
ಉತ್ತರ ಕನ್ನಡ	74	34	↓ 116%
ಹಾವೇರಿ	110	59	↓ 86%
ದಕ್ಷಿಣ ಕನ್ನಡ	77	54	↓ 43%
ಹುಬ್ಬಳ್ಳಿ–1	71	50	↓ 42%
ರಾಮನಗರ	69	49	↓ 40%
ಚಿಕ್ಕಮಗಳೂರು	62	47	↓ 32%
ಹುಬ್ಬಳ್ಳಿ–2	72	60	↓ 20%
ಶಿವಮೊಗ್ಗ	65	57	↓ 13%
ಧಾರವಾಡ	82	74	↓ 11%
ಚಾಮರಾಜನಗರ	63	57	↓ 11%
ಯಾದಗಿರಿ	60	54	↓ 11%
ಕಲಬುರಗಿ–2	70	63.5	↓ 10%
ಗದಗ	54	50	↓ 8%
ವಿಜಯಪುರ	67	62	↓ 8%

‘ಪರವಾನಗಿ ಪಡೆದೇ ಕಾಳಿಂಗ ಸಂಶೋಧನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಳಿಂಗ ಸರ್ಪಗಳ ಅಧ್ಯಯನ ಮತ್ತು ಇತರ ಚಟುವಟಿಕೆಗಳಿಗೆ ಅರಣ್ಯ ಇಲಾಖೆಯ ಪರವಾನಗಿ ಪಡೆದು, ಕಾನೂನುಬದ್ಧವಾಗಿಯೇ ನಡೆಸಲಾಗುತ್ತಿದೆ’ ಎಂದು ಕಾಳಿಂಗ ಮನೆ ಟ್ರಸ್ಟಿಗಳಾದ ಶರ್ಮಿಳಾ ರಾಜಶೇಖರನ್ ಮತ್ತು ಶೌಕತ್ ಜಮಾಲ್ ಹೇಳಿದ್ದಾರೆ.

ಕಾಳಿಂಗ ಸರ್ಪದ ಅಧ್ಯಯನದ ಕುರಿತು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿಗಳಿಗೆ ಸ್ಪಷ್ಟನೆ ನೀಡಿರುವ ಅವರು, ‘ಕಾಳಿಂಗ ಫೌಂಡೇಶನ್ ಮತ್ತು ಆಗುಂಬೆ ಮಳೆಕಾಡು ಸಂಶೋಧನಾ ಕೇಂದ್ರಕ್ಕೂ (ಎಆರ್‌ಆರ್‌ಎಸ್) ಯಾವುದೇ ಸಂಬಂಧ ಇಲ್ಲ. ನಮ್ಮ ಸಂಸ್ಥೆ(ಕಾಳಿಂಗ ಫೌಂಡೇಶನ್) ಸಂಶೋಧನೆ, ಸಂರಕ್ಷಣೆ ಮತ್ತು ಪರಿಸರ ಶಿಕ್ಷಣಕ್ಕಾಗಿ ಮುಡಿಪಾಗಿದೆ’ ಎಂದು ತಿಳಿಸಿದ್ದಾರೆ.

‘ಕಾಳಿಂಗ ಸರ್ಪಗಳ ಸಂಶೋಧನೆಯನ್ನು ಕೇವಲ ವೈಜ್ಞಾನಿಕ ಸಂಶೋಧನೆಗೆ ಸೀಮಿತಗೊಳಿಸದೇ ಅದನ್ನು ಜನಸಾಮಾನ್ಯರ ಹಿತಕ್ಕಾಗಿಯೂ ಬಳಕೆ ಮಾಡಲಾಗುತ್ತಿದೆ’ ಎಂದು ಹೇಳಿದ್ದಾರೆ.

‘ಮಾನವ– ಹಾವಿನ ಸಂಘರ್ಷ ಸಂಪೂರ್ಣವಾಗಿ ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಬಿಕೆಗಳ ಮೇಲೆ ನಿಂತಿದೆ. ಈ ವಿಷಯವನ್ನು ಬಹು ಎಚ್ಚರಿಕೆಯಿಂದ ದಾಖಲೆ ಮಾಡುವ ಅಗತ್ಯವಿದೆ. ನಮ್ಮ ದತ್ತಾಂಶವು ಹಲವು ವರ್ಷಗಳಿಂದ ಸಂಗ್ರಹಿಸಿ, ಪರಿಶೀಲಿಸಿದ ಕ್ಷೇತ್ರ ಅಧ್ಯಯನಗಳಿಂದ ಬಂದಿದೆ. ಮಲೆನಾಡಿನಲ್ಲಿ ಮುಸ್ಲಿಂ ಮತ್ತು ಕ್ರೈಸ್ತ ಧರ್ಮೀಯರೂ ಇದ್ದಾರೆ. ಅವರು ಹಾವಿನೊಂದಿಗೆ ಯಾವುದೇ ರೀತಿಯ ಧಾರ್ಮಿಕ ನಂಬಿಕೆಯನ್ನಾಗಲಿ, ಪೂಜನೀಯ ಭಾವನೆಯನ್ನು ಹೊಂದಿಲ್ಲ. ತಮಗೆ ವಿಪತ್ತು ಬಂದಾಗ ಯಾವುದೇ ಹಾವನ್ನಾದರೂ ಕೊಲ್ಲಲು ಅವರು ಸಿದ್ಧರಾಗುತ್ತಾರೆ. ಅದೇ ರೀತಿ ನಾವು ಕಲೆಹಾಕುವ ದತ್ತಾಂಶವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ಪರಾಮರ್ಶಿಸುತ್ತಾರೆ’ ಎಂದು ಹೇಳಿದ್ದಾರೆ.

‘ಕಾಳಿಂಗಗಳಿಗೆ ಅಳವಡಿಸಿದ ಪಿಟ್‌ಟ್ಯಾಗ್ ಕುರಿತಾದ ಯಾವುದೇ ವೈಜ್ಞಾನಿಕ ಪ್ರಬಂಧವನ್ನು Hamadryad ಜರ್ನಲ್‌ನಲ್ಲಿ ನಾವು ಪ್ರಕಟ ಮಾಡಿಲ್ಲ. ರೇಡಿಯೊ ಟೆಲಿಮೆಟ್ರಿಗೆ ಸಂಬಂಧಿಸಿದ ಕೆಲ ವೈಜ್ಞಾನಿಕ ಪ್ರಬಂಧಗಳು ಪ್ರಕಟವಾಗಿವೆ. ಅಲ್ಲದೇ, ಪಿಐಟಿ ಕಾರ್ಯವಿಧಾನ ಬಳಸಿ ಮಾಡಿದ ಯೋಜನೆ ಸಂಪೂರ್ಣವಾಗಿ ಆಗುಂಬೆ ಮಳೆಕಾಡು ಸಂಶೋಧನಾ ಕೇಂದ್ರಕ್ಕೆ ಸಂಬಂಧಿಸಿದ್ದು, ಈ ಯೋಜನೆಗೂ ನಮ್ಮ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಭಾರತದಲ್ಲಿ ಪ್ರತಿ ವರ್ಷ ಅಂದಾಜು 58 ಸಾವಿರದಿಂದ 60 ಸಾವಿರ ಜನ ಹಾವು ಕಚ್ಚಿ ಸಾಯುತ್ತಾರೆ. ಈ ಸಂಖ್ಯೆ ಕರ್ನಾಟಕದಲ್ಲಿ 2,500 ರಿಂದ 3,000 ದಷ್ಟಿದೆ. ಸಂರಕ್ಷಕರು ಹಾವನ್ನು ಸಂರಕ್ಷಣೆ ಮಾಡದೇ ಇದ್ದರೆ ಸಾವಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಇದಕ್ಕೆ ಪ್ರತಿಯಾಗಿ ಜನರು ಸಹ ಹಾವಿನ ಭೀತಿಯಿಂದ ಇನ್ನೂ ಹೆಚ್ಚು ಹಾವುಗಳನ್ನು ಕೊಲ್ಲಬಹುದು’ ಎಂದು ಶರ್ಮಿಳಾ ಮತ್ತು ಶೌಕತ್ ಆತಂಕ ವ್ಯಕ್ತಪಡಿಸಿದ್ದಾರೆ.

‘ಸಿದ್ದರಾಮಯ್ಯ ಉತ್ತರಾಧಿಕಾರಿ ಯಾರು’

ಯತೀಂದ್ರ ಹೇಳಿಕೆ ಎಬ್ಬಿಸಿದ ಕೋಲಾಹಲ • ಕಾಂಗ್ರೆಸ್‌ನಲ್ಲಿ ಭಾರಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬೆಳಗಾವಿ: ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿರುವ ಹೊತ್ತಿನಲ್ಲಿ ‘ನಾಯಕತ್ವ ಬದಲಾವಣೆ’ಯ ಚರ್ಚೆಯ ಜತೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ‘ಉತ್ತರಾಧಿಕಾರಿ’ ಯಾರೆಂಬ ವಿಷಯವೂ ಭಾರಿ ಸದ್ದಿಗೆ ಕಾರಣವಾಗಿದೆ.

ಯತೀಂದ್ರ ಹೇಳಿದ್ದೇನು?: ‘ನಮ್ಮ ತಂದೆ ರಾಜಕೀಯದ ಕೊನೆಯ ಘಟ್ಟದಲ್ಲಿದ್ದಾರೆ. 2028ರ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ನಮ್ಮ ತಂದೆ ಹೇಳಿದ್ದಾರೆ. ಅವರ ಬಳಿಕವೂ ‘ಅಹಿಂದ’ ಬಲ ಹಾಗೂ ಸಾಮಾಜಿಕ ನ್ಯಾಯದ ಸಿದ್ಧಾಂತಗಳನ್ನು ಮುನ್ನಡೆಸುವ ಸಾಮರ್ಥ್ಯ ಕೆಲವು ನಾಯಕರಲ್ಲಿದೆ. ಅವರೆಲ್ಲರನ್ನೂ ಸತೀಶ ಮುನ್ನಡೆಸಬೇಕಿದೆ’ ಎಂದು ಸಿದ್ದರಾಮಯ್ಯ ಮಗ ಡಾ. ಯತೀಂದ್ರ ಅವರು ಬುಧವಾರ ಬೆಳಗಾವಿಯಲ್ಲಿ ಹೇಳಿದ್ದರು.

‘ನಾನು ಕೂಡ ಆಕಾಂಕ್ಷಿ’

‘2028ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾನು ಕೂಡ ಮುಖ್ಯಮಂತ್ರಿಯಾಗಲು ಬಯಸುವೆ. ಆದರೆ, ಅದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದು ಸತೀಶ ಜಾರಕಿಹೊಳಿ ಗುರುವಾರ ಪ್ರತಿಕ್ರಿಯಿಸಿದರು.

‘ಸಿದ್ದರಾಮಯ್ಯ ಅವರು 2028ಕ್ಕೆ ಅಧಿಕಾರ ಬಿಟ್ಟುಕೊಟ್ಟರೂ ಅಹಿಂದ ನಾಯಕರಾಗಿ ಮುಂದುವರಿಯುವರು. ನಾನು ಕೂಡ 30 ವರ್ಷಗಳಿಂದ ಅಹಿಂದ ಪರ ಹೋರಾಡುತ್ತಿದ್ದೇನೆ. ಅಹಿಂದ ಇಲ್ಲದೇ ಸರ್ಕಾರ ರಚಿಸಲು ಆಗದು. ನಾಯಕತ್ವಕ್ಕೆ ಇನ್ನೂ ಸಾಕಷ್ಟು ಸಮಯವಿದೆ. ಮುಂದೆ ನೋಡೋಣ’ ಎಂದೂ ಅವರು ಹೇಳಿದರು.

‘ಸಿ.ಎಂ ಸ್ಥಾನ ಉಲ್ಲೇಖಿಸಿ ಹೇಳಿದ್ದಲ್ಲ’

‘ಯತೀಂದ್ರ ಅವರು ಸೈದ್ಧಾಂತಿಕವಾಗಿ ಸತೀಶ ಜಾರಕಿಹೊಳಿ ಹೆಸರು ಹೇಳಿದ್ದಾರೆ, ತಪ್ಪೇನಿದೆ? ಹಿಂದೆ ಅವರು ಅಹಿಂದ ಚಳವಳಿಯಲ್ಲಿ ಇದ್ದರು. ಅವರಿಗೆ ಬದ್ಧತೆ ಇದೆ ಎಂದು ಹೆಸರು ಹೇಳಿರಬಹುದು. ಮುಖ್ಯಮಂತ್ರಿ ಸ್ಥಾನ ಉಲ್ಲೇಖಿಸಿ ಆ ಹೇಳಿಕೆ ನೀಡಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಮುಖ್ಯಮಂತ್ರಿ ಬದಲಾವಣೆ ಸಂದರ್ಭ ಬಂದಾಗ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯನ್ನು ಹೈಕಮಾಂಡ್‌ನವರು ಕರೆಯುತ್ತಾರೆ. ಅಲ್ಲಿ ಶಾಸಕರ ಅಭಿಪ್ರಾಯ ಪಡೆದ ವೀಕ್ಷಕರು ಹೈಕಮಾಂಡ್‌ಗೆ ವರದಿ ಕೊಡುತ್ತಾರೆ. ಆ ನಂತರ ಯಾರು, ಏನು ಎನ್ನುವುದು ಘೋಷಿಸಲಾಗುತ್ತದೆ. ಇದು ನಮ್ಮಲ್ಲಿರುವ ಪದ್ಧತಿ’ ಎಂದರು.

‘ನಮ್ಮಲ್ಲಿ ನಾಯಕತ್ವದ ಕೊರತೆ ಇಲ್ಲ’

‘ನಮ್ಮಲ್ಲಿ ನಾಯಕತ್ವದ ಕೊರತೆ ಇಲ್ಲ. ಮುಖ್ಯಮಂತ್ರಿ ಸ್ಥಾನಕ್ಕಾಗಿ ನಾವು ಯಾರೂ ಹಕ್ಕು ಪ್ರತಿಪಾದಿಸಬೇಕಾಗಿಲ್ಲ. ಹಾಗಂತ ಯಾರೂ ಸನ್ಯಾಸಿಗಳಲ್ಲ ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

‘ಯತೀಂದ್ರ ಯಾವ ಅರ್ಥದಲ್ಲಿ ಹೇಳಿದ್ದಾರೊ. ಸಿದ್ದರಾಮಯ್ಯ ಅವರದ್ದು ಕೊನೆಯ ಚುನಾವಣೆ ಆಗಿರಬಹುದು, ಮುಂದೆಯೂ ಅವರ ನಾಯಕತ್ವ ಅಗತ್ಯವಿದೆ. ಸಿದ್ದರಾಮಯ್ಯ ಅವರನ್ನು ಬಿಟ್ಟು ಮಾಡಲು ಆಗಲ್ಲ’ ಎಂದರು.

‘ಅವರು (ಸತೀಶ ಜಾರಕಿಹೊಳಿ) ಪ್ರಮುಖ ನಾಯಕರು. ಮುಖ್ಯಮಂತ್ರಿ ಆಗುವ ಎಲ್ಲ ಅರ್ಹತೆ ಅವರಿಗಿದೆ. 2028ಕ್ಕೆ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಆಗಿದ್ದರೆ ತಪ್ಪೇನಿದೆ? ಆ ಸ್ಥಾನಕ್ಕೆ ಎಲ್ಲರೂ ಸಮರ್ಥರಿದ್ದಾರೆ’ ಎಂದರು.

‘ನಾವು ಹೇಳಿಕೆ ಕೊಟ್ರೆ ನೋಟಿಸ್’

‘ಸಿ.ಎಂ ಬದಲಾವಣೆ ಕುರಿತು ನಾವೇನಾದರೂ ಹೇಳಿಕೆ ಕೊಟ್ಟರೆ ನೋಟಿಸ್ ಕೊಡುತ್ತಾರೆ. ಅಂದರೆ ನಾವು ಮಾಡಿದರೆ ಬಲಾತ್ಕಾರ, ಬೇರೆಯವರು ಮಾಡಿದರೆ ಚಮತ್ಕಾರ ಅನ್ನುವ ಪರಿಸ್ಥಿತಿಯಿದೆ’ ಎಂದು ರಾಮನಗರ ಶಾಸಕ ಎಚ್‌.ಎ.ಇಕ್ಬಾಲ್ ಹುಸೇನ್ ಹೇಳಿದರು.

‘ದೊಡ್ಡ ಮನೆತನದ ದೊಡ್ಡ ಸ್ಥಾನದಲ್ಲಿರುವ ಯತೀಂದ್ರ ಅವರು, ತಾವಾಗೇ ಕೆಳಗೆ ಬೀಳೋದು ನಮಗಿಷ್ಟವಿಲ್ಲ. ಈ ರೀತಿ ಹೇಳಿಕೆ ನೀಡದೆ ತಿದ್ದಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ’ ಎಂದೂ ಹೇಳಿದರು.

‘ಸಿ.ಎಂ ಧ್ವನಿಯಂತೆ ಬಿಂಬಿಸಬಾರದು’

‘ಯತೀಂದ್ರ ಅವರ ಮಾತುಗಳನ್ನು ಮುಖ್ಯಮಂತ್ರಿಯ ಧ್ವನಿ ಎಂಬಂತೆ ಬಿಂಬಿಸುವುದು ಸರಿಯಲ್ಲ. ಈಗಾಗಲೇ ಯತೀಂದ್ರ ಅವರೇ ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿದ್ದಾರೆ’ ಎಂದು ಅರಣ್ಯ ಸಚಿವಈಶ್ವರ ಖಂಡ್ರೆ ಹೇಳಿದರು.

‘ಯಾವುದೇ ಜಾತಿ, ಮತ, ಧರ್ಮದ ಆಧಾರದ ಮೇಲೆ ನಾಯಕತ್ವ ನಿರ್ಧಾರ ಆಗುವುದಿಲ್ಲ’ ಎಂದರು.

> ‘ಸತೀಶ ಜಾರಕಿಹೊಳಿ ಅವರಲ್ಲಿ ನಾಯಕತ್ವ ಇದೆ. ಅವರು ಮುಂದೆ ಮುಖ್ಯಮಂತ್ರಿ ಆಗುವರೆಂದು ನಾನೇ ಹೇಳಿದ್ದೇನೆ. ಮುಂದಿನ ಮುಖ್ಯಮಂತ್ರಿ ಬಗ್ಗೆ ಯತೀಂದ್ರ ಅಭಿಪ್ರಾಯ ವೈಯಕ್ತಿಕವಾದದ್ದು
> **ಆರ್‌.ಬಿ. ತಿಮ್ಮಾಪುರ** ಅಬಕಾರಿ ಸಚಿವ

> ‘ಕಾಂಗ್ರೆಸ್ ಪಕ್ಷದಲ್ಲಿ ಸೈದ್ಧಾಂತಿಕವಾಗಿ ಬದ್ಧರಾದವರು ಇದ್ದಾರೆ. ಸಂವಿಧಾನ ಪರವಾಗಿ, ಮೂಢನಂಬಿಕೆ ವಿರುದ್ಧ ಸತೀಶ ಜಾರಕಿಹೊಳಿ ಜನಜಾಗೃತಿ ಮೂಡಿಸುತ್ತಿದ್ದಾರೆ. ಹೀಗಾಗಿ ಯತೀಂದ್ರ ಹೇಳಿದ್ದರಲ್ಲಿ ತಪ್ಪೇನಿಲ್ಲ
> **ಪ್ರಿಯಾಂಕ್ ಖರ್ಗೆ** ಗ್ರಾಮೀಣಾಭಿವೃದ್ಧಿ ಸಚಿವ

ಆನೆ ಚಿಕಿತ್ಸೆಗೆ ನಿರ್ಲಕ್ಷ್ಯ: ಶಿಸ್ತುಕ್ರಮಕ್ಕೆ ಖಂಡ್ರೆ ಸೂಚನೆ

ಪ್ರಜಾವಾಣಿ ವಾರ್ತೆ

ಈಶ್ವರ ಬಿ. ಖಂಡ್ರೆ

ಬೆಂಗಳೂರು: ‘ಶಿವಮೊಗ್ಗದ ಸಕ್ಕರೆ ಬೈಲು ಆನೆ ಶಿಬಿರದ ಬಾಲಣ್ಣ ಎಂಬ ಆನೆಗೆ ಚುಚ್ಚುಮದ್ದು ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಪಶು ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಿ’ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಸೂಚಿಸಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿರುವ ಅವರು, ‘ಬಾಲಣ್ಣ ಆನೆಯನ್ನು ಶಿವಮೊಗ್ಗ ದಸರಾಗೆ ಕಳುಹಿಸಲಾಗಿತ್ತು. ಆ ವೇಳೆ ಗಾಯಗೊಂಡಿದ್ದ ಆನೆಗೆ ಚುಚ್ಚುಮದ್ದು ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಕಾರಣಕ್ಕೆ ಸೋಂಕು ತಗುಲಿದೆ. ಜತೆಗೆ ಶಿಬಿರದಲ್ಲಿರುವ ನಾಲ್ಕು ಆನೆಗಳು ಗಾಯಗಳಿಂದ ಬಳಲುತ್ತಿದ್ದು, ಚಿಕಿತ್ಸೆ ನೀಡಲು ವೈದ್ಯಾಧಿಕಾರಿ ಇಲ್ಲ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಬಗ್ಗೆ ವಿವರಣೆ ನೀಡಿ’ ಎಂದು ಸೂಚಿಸಿದ್ದಾರೆ.

‘ಆನೆ ಶಿಬಿರಗಳಲ್ಲಿ ವೈದ್ಯಾಧಿಕಾರಿಗಳು ಇರಲೇಬೇಕು. ಇಲ್ಲದೇ ಇದ್ದರೆ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದು ಈ ಹಿಂದೆಯೇ ಸೂಚಿಸಲಾಗಿತ್ತು. ಹೀಗಿದ್ದೂ ಶಿಬಿರಗಳಲ್ಲಿ ವೈದ್ಯಾಧಿಕಾರಿಗಳ ನೇಮಕ ಏಕೆ ನಡೆದಿಲ್ಲ’ ಎಂದು ಪ್ರಶ್ನಿಸಿದ್ದಾರೆ.

‘ಬಾಲಣ್ಣ ಆನೆಗೆ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯ ಏಕಾಯಿತು ಎಂಬುದನ್ನು ಪತ್ತೆ ಮಾಡಿ. ಅದಕ್ಕೆ ಕಾರಣರಾದವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಿ. ಈ ಬಗ್ಗೆ ಒಂದು ವಾರದ ಒಳಗೆ ವರದಿ ಸಲ್ಲಿಸಿ’ ಎಂದಿದ್ದಾರೆ.

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com
ಸಂಖ್ಯೆ:ಸಂಗಾಂಟ್ರಾಅಚಿ/ಇ–ಟೆಂಡರ್/ಸಿಂಕ್ರೊನೈಜಿಂಗ್/ಡಿಜಿ ಸೆಟ್/136/2025–26 ದಿನಾಂಕ:21.10.2025

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
“Providing and Installation of Synchronization Panel Board of 500 KVA and 250 KVA DG Set”
(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **24.10.2025**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ **03.11.2025**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
(2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.
ಸಹಿ/–
ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/3385/2025–26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮು.ಇಂ(ವಿ)/ಪ್ರ(ಕಾ)ವಲ/ಅಇಂ(ಕ)/ಸ.ಕಾ.ಇಂ–3/ಕ–306(1)/ದೊಬಪು/2025–26/6311–12 ದಿನಾಂಕ:17.10.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮು.ಇಂವಿ/ಪ್ರ(ಕಾ)ವ/ಬೆಂವ/ಟಿ.ಟಿ.ಕೆ–14 (Call-2) ರಲ್ಲಿ “ದೊಡ್ಡಬಳ್ಳಾಪುರ, ಕಾರ್ಯಾಚರಣೆ ವಿಭಾಗ, 66/11ಕೆ.ವಿ **ತೂಬುಗೆರೆ ಉಪಕೇಂದ್ರದಲ್ಲಿ** ಹಾಲಿಯಿರುವ ಕೊಯೋಟ್ ಕಂಡಕ್ಟರ್ ಬಸ್‌ಬಾರನ್ನು ಡ್ರೇಕ್ ಕಂಡಕ್ಟರ್‌ಗೆ ಬದಲಾಯಿಸುವ ಕಾಮಗಾರಿಯನ್ನು **ಪೂರ್ಣ ಗುತ್ತಿಗೆ ಆಧಾರದ ಮೇಲೆ (Total Turnkey Basis)”** ಎಲ್ಲಾ ಸರಿ ಹೊಂದುವ ಸಾಮಗ್ರಿಗಳ/ ಉಪಕರಣಗಳ ಸರಬರಾಜು, ನಿರ್ಮಾಣ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ) ಮತ್ತು ಕಾರ್ಯಾರಂಭ ಮಾಡುವ ಕಾಮಗಾರಿಗೆ ಬಿಡ್ಡನ್ನು ಆಹ್ವಾನಿಸಲಾಗಿದೆ.
ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು **ದಿನಾಂಕ: 30.10.2025ರಂದು** ಅಥವಾ ನಂತರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ಗೆ ಲಾಗ್ ಇನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.
ಸಹಿ/– ಮುಖ್ಯ ಇಂಜಿನಿಯರ್(ವಿ),
ಪ್ರಸರಣ(ಕಾರ್ಯಾಚರಣೆ)ವಲಯ, ಕ.ವಿ.ಪ್ರ.ನಿ.ನಿ.
ಆನಂದರಾವ್ ವೃತ್ತ, ಬೆಂಗಳೂರು–09.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/58/2265/2025–26 ದಿನಾಂಕ : 23.10.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಸಿಇಐನಿಂದ ಪಡೆದ ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿ ಹಾಗೂ ಕೆಪಿಡಬ್ಲ್ಯೂಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಭಾಗ–ಎ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಆದಿನಾರಾಯಣ ಹೊಸಹಳ್ಳಿ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 2x150 ಎಂ.ವಿ.ಎ, 2x31.5 ಎಂ.ವಿ.ಎ ಸಾಮರ್ಥ್ಯದ 220/66/11 ಕೆ.ವಿ ವಿದ್ಯುತ್ ಉಪ ಕೇಂದ್ರ ನಿರ್ಮಾಣ ಕಾಮಗಾರಿ. ಭಾಗ–ಬಿ : ದೊಡ್ಡಬಳ್ಳಾಪುರ 220/66ಕೆ.ವಿ (NRS) ಉಪಕೇಂದ್ರದಿಂದ ಆದಿನಾರಾಯಣ ಹೊಸಹಳ್ಳಿ ಕೈಗಾರಿಕಾ ಪ್ರದೇಶ 2ನೇ ಹಂತದ ಪ್ರವೇಶದ ಸಮೀಪ ಬರುವ 220ಕೆ.ವಿ ಕೇಬಲ್ ಟರ್ಮಿನೇಟಿಂಗ್ ಟವರ್ ವರೆಗೆ ಒಟ್ಟು 5.435 ಕಿ.ಮೀ ಉದ್ದದ 220ಕೆ.ವಿ ಡಿಸಿ 1200Sqmm XLPE Copper ಭೂಗತ ಕೇಬಲ್ ನಿರ್ಮಾಣ ಕಾಮಗಾರಿ. ಭಾಗ–ಸಿ : ಆದಿನಾರಾಯಣ ಹೊಸಹಳ್ಳಿ ಕೈಗಾರಿಕಾ ಪ್ರದೇಶ 2ನೇ ಹಂತದ ಪ್ರವೇಶದ ಸಮೀಪ ಬರುವ 220ಕೆ.ವಿ ಕೇಬಲ್ ಟರ್ಮಿನೇಟಿಂಗ್ ಟವರ್‌ನಿಂದ (ಪ್ರಸ್ತಾಪಿತ 220ಕೆ.ವಿ ಸಿಟಿಟಿ) ಹಾಗೂ ಆದಿನಾರಾಯಣ ಹೊಸಹಳ್ಳಿ ಪ್ರಸ್ತಾಪಿತ 400/220ಕೆ.ವಿ ಉಪಕೇಂದ್ರದಿಂದ ಪ್ರಸ್ತಾಪಿತ 220/66/11ಕೆ.ವಿ ಆದಿನಾರಾಯಣ ಹೊಸಹಳ್ಳಿ 2ನೇ ಹಂತದ ವಿದ್ಯುತ್ ಉಪ ಕೇಂದ್ರದ ವರೆಗೆ ಒಟ್ಟು 4.053 ಕಿ.ಮಿ ಉದ್ದದ 220ಕೆ.ವಿ ಪ್ರಸರಣಾ ಮಾರ್ಗವನ್ನು ಡಿಸಿ ಮತ್ತು ಎಂಸಿ ಮೊನೋ ಪೋಲ್ ಹಾಗೂ ಎಎಎಸಿ ಮೂಸ್ ಕಂಡಕ್ಟರ್ ಬಳಸಿ ನಿರ್ಮಾಣ ಕಾಮಗಾರಿ. ಭಾಗ–ಡಿ : ಹಾಲಿ ಇರುವ 220/66ಕೆ.ವಿ ಎನ್ ಆರ್ ಎಸ್ ದೊಡ್ಡಬಳ್ಳಾಪುರ ವಿದ್ಯುತ್ ಉಪಕೇಂದ್ರದಲ್ಲಿ 2 ಸಂಖ್ಯೆಯ 220ಕೆ.ವಿ ಹೊರಾಂಗಣ ಜಿ.ಐ.ಎಸ್ ಟರ್ಮಿನಲ್ ಬೇ ನಿರ್ಮಾಣ ಕಾಮಗಾರಿ ಭಾಗ–ಇ : ಪ್ರಸ್ತಾಪಿತ 400/220ಕೆ.ವಿ ಆದಿನಾರಾಯಣ ಹೊಸಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ 2 ಸಂಖ್ಯೆಯ 220ಕೆ.ವಿ ಒಳಾಂಗಣ ಜಿ.ಐ.ಎಸ್ ಟರ್ಮಿನಲ್ ಬೇ ನಿರ್ಮಾಣ ಕಾಮಗಾರಿ, ಭಾಗ–ಎಫ್ : ಹಾಲಿ ಇರುವ ಎನ್.ಆರ್.ಎಸ್ ದೊಡ್ಡಬಳ್ಳಾಪುರ–ವಿಜಯಪುರ 66ಕೆ.ವಿ ಪ್ರಸರಣ ಮಾರ್ಗವನ್ನು ಪ್ರಸ್ತಾಪಿತ 220/66/11ಕೆ.ವಿ ಆದಿನಾರಾಯಣ ಹೊಸಹಳ್ಳಿ 2ನೇ ಹಂತದ ಕೆ.ಐ.ಎ.ಡಿ.ಬಿ ವಿದ್ಯುತ್ ಉಪಕೇಂದ್ರಕ್ಕೆ ಲಿಲೋ ಲೈನ್ ನಿರ್ಮಾಣ ಕಾಮಗಾರಿಯನ್ನು ಸ್ವಯಂ ನಿರ್ವಹಣಾ ಯೋಜನೆ ಅಡಿಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ನಿರ್ವಹಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14.11.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1,
ಕೆಐಎಡಿಬಿ, ಬೆಂಗಳೂರು
DIPR/CP/3392/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಅರೆ ಭಕ್ತರಾದವರ ನೆರೆ ಬೇಡ, ಹೊರೆ ಬೇಡ.

–ಬಸವಣ್ಣ

ಸಂಪಾದಕೀಯ

ಬಿಹಾರ: ಹೊಂದಾಣಿಕೆ ಕೊರತೆ ಪ್ರತಿಪಕ್ಷಗಳ ವಿಶ್ವಾಸಾರ್ಹತೆಗೆ ಧಕ್ಕೆ

ನವೆಂಬರ್ 6 ಮತ್ತು 11ರಂದು ಬಿಹಾರದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ 'ಎನ್‌ಡಿಎ' ಮೈತ್ರಿಕೂಟದ ವಿರುದ್ಧ ಸ್ಪರ್ಧಿಸುತ್ತಿರುವ ಪ್ರತಿಪಕ್ಷಗಳ 'ಇಂಡಿಯಾ' ಮೈತ್ರಿಕೂಟ, ಆಂತರಿಕ ಸಂಘರ್ಷದಿಂದ ಬಳಲುತ್ತಿದೆ ಹಾಗೂ ಒಗ್ಗಟ್ಟನ್ನು ಪ್ರದರ್ಶಿಸಲು ಪ್ರಯಾಸಪಡುತ್ತಿದೆ. ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಕೊನೆಗೊಂಡಿದೆ ಹಾಗೂ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರನ್ನು ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲಾಗಿದೆ. ಆದರೆ, ಸೀಟು ಹೊಂದಾಣಿಕೆಗೆ ಸಂಬಂಧಿಸಿದ ಒಳಗುದಿ ಮುಂದುವರಿದೇ ಇರುವುದು ಮತದಾರರಿಗೆ ಮೈತ್ರಿಕೂಟ ನೀಡುತ್ತಿರುವ ಒಳ್ಳೆಯ ಸಂದೇಶವೇನಲ್ಲ. ಎನ್‌ಡಿಎ ವಿರುದ್ಧ ಪ್ರಬಲ ಸ್ಪರ್ಧೆ ಒಡ್ಡಲು ಒಮ್ಮತದ ಪ್ರಯತ್ನಗಳನ್ನು ನಡೆಸುವ ಬದಲು, ಕೆಲವು ಕ್ಷೇತ್ರಗಳಲ್ಲಿ ಮೈತ್ರಿ ಪಕ್ಷಗಳ ಅಭ್ಯರ್ಥಿಗಳೇ ಪರಸ್ಪರ ಎದುರಾಳಿಗಳಾಗಿದ್ದಾರೆ; ಒಂದು ಪಕ್ಷ ಮೈತ್ರಿಕೂಟದಿಂದ ಹೊರಬಂದಿದೆ. ಆರ್‌ಜೆಡಿ, ಕಾಂಗ್ರೆಸ್, ಸಿಪಿಐ, ಸಿಪಿಎಂ ಹಾಗೂ ವಿಕಾಸಶೀಲ ಇನ್ಸಾನ್ ಪಕ್ಷ (ವಿಐಪಿ) 'ಮಹಾಘಟಬಂಧನ'ದಲ್ಲಿ ಇರುವ ಪಕ್ಷಗಳಾಗಿವೆ. ಇದುವರೆಗೆ, ಮೈತ್ರಿಕೂಟದ ಭಾಗವಾಗಿದ್ದ 'ಜೆಎಂಎಂ', ಆರು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ತನ್ನ ಒತ್ತಾಯ ತಿರಸ್ಕೃತಗೊಂಡ ನಂತರ ಮೈತ್ರಿಕೂಟದಿಂದ ಹೊರಬಂದಿರುವುದಾಗಿ ಹೇಳಿದೆ. ಮಿತ್ರ ಪಕ್ಷಗಳಾದ ಕಾಂಗ್ರೆಸ್ ಮತ್ತು ಆರ್‌ಜೆಡಿ ಜೊತೆಗೂಡಿ ಜಾರ್ಖಂಡ್‌ನಲ್ಲಿ ಆಡಳಿತದಲ್ಲಿರುವ ಜೆಎಂಎಂ, ಅಲ್ಲಿಯೂ ಮೈತ್ರಿ ಮುಂದುವರಿಕೆಯ ಬಗ್ಗೆ ಪರಿಶೀಲನೆ ನಡೆಸಲಿದೆ ಎಂದು ಪಕ್ಷದ ಮುಖಂಡ ಹೇಮಂತ್ ಸೊರೇನ್ ಹೇಳಿದ್ದಾರೆ.

ಬಿಹಾರ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟದಲ್ಲಿನ ಸೀಟು ಹೊಂದಾಣಿಕೆಯ ಗೊಂದಲ 'ಮಹಾಘಟಬಂಧನ'ದ ವಿಶ್ವಾಸಾರ್ಹತೆಗೆ ಧಕ್ಕೆ ತರುವಂತಿದೆ.

ಸುದೀರ್ಘ ಮಾತುಕತೆಗಳ ನಂತರವೂ ಆರ್‌ಜೆಡಿ ಮತ್ತು ಕಾಂಗ್ರೆಸ್ ಮುಖಂಡರಿಗೆ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಸಂಪೂರ್ಣ ಸಹಮತಕ್ಕೆ ಬರುವುದು ಸಾಧ್ಯವಾಗಿಲ್ಲ. ಒಪ್ಪಂದಕ್ಕೆ ಬರಲು ಸಾಧ್ಯವಾಗದ ಕನಿಷ್ಠ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಉಭಯ ಪಕ್ಷಗಳ ಅಭ್ಯರ್ಥಿಗಳು ಮುಖಾಮುಖಿ ಆಗಿದ್ದಾರೆ. ಕೆಲವೆಡೆ ಕಾಂಗ್ರೆಸ್ ಮತ್ತು ಸಿಪಿಐ ಎದುರಾಳಿಗಳಾಗಿವೆ. ಆರ್‌ಜೆಡಿ ಮತ್ತು ವಿಐಪಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಗಳಾಗಿವೆ. 2020ರ ವಿಧಾನಸಭಾ ಚುನಾವಣೆಯಲ್ಲಿ 144 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಆರ್‌ಜೆಡಿ, ಈ ಬಾರಿ 143 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ ಹಾಗೂ ಎಪ್ಪತ್ತು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್, ಈ ಬಾರಿ ಒಂಬತ್ತು ಕ್ಷೇತ್ರಗಳನ್ನು ಬಿಟ್ಟುಕೊಟ್ಟು 61 ಕ್ಷೇತ್ರಗಳಲ್ಲಿ ಆಯ್ಕೆ ಬಯಸಿದೆ. ಎಲ್ಲ ಸಮುದಾಯಗಳನ್ನೂ ಒಳಗೊಂಡ ಒಕ್ಕೂಟದ ರೂಪದಲ್ಲಿ 'ಮಹಾಘಟಬಂಧನ'ವನ್ನು ಮೈತ್ರಿಕೂಟದ ಮುಖಂಡರು ಇದುವರೆಗೆ ಬಿಂಬಿಸಿದ್ದರು. ಇತ್ತೀಚೆಗಷ್ಟೇ ರೂಪುಗೊಂಡ, ಎರಡು ಸಣ್ಣ ಸಮುದಾಯಗಳನ್ನು ಪ್ರತಿನಿಧಿಸುವ ಇಂಡಿಯನ್ ಇನ್‌ಕ್ಲೂಸಿವ್ ಪಾರ್ಟಿ(ಐಐಪಿ)ಗೂ ಸೀಟು ಹೊಂದಾಣಿಕೆಯಲ್ಲಿ ಪಾಲು ದೊರೆಯುವುದಾಗಿ ಹೇಳಲಾಗಿತ್ತು. ಆದರೆ, ಪ್ರಮುಖ ನಾಯಕರ ನಡುವಿನ ಭಿನ್ನಮತವು ಮೈತ್ರಿಕೂಟದಲ್ಲಿ ಒಮ್ಮತ ಇಲ್ಲದಿರುವ ಸಂದೇಶವನ್ನು ನೀಡುವಂತಿದೆ.

ಮತದಾರರ ಮುಂದೆ ಹೋಗುವ ಯಾವುದೇ ಮೈತ್ರಿಕೂಟ ಒಗ್ಗಟ್ಟು ಪ್ರದರ್ಶಿಸುವುದು ಹಾಗೂ 'ಕನಿಷ್ಠ ಸಾಮಾನ್ಯ ಕಾರ್ಯಕ್ರಮ' ಹೊಂದಿರುವುದು ಅತ್ಯವಶ್ಯ. ಆದರೆ, ಮಹಾಘಟಬಂಧನದ ಪಕ್ಷಗಳು ಚುನಾವಣೆಯ ಒಟ್ಟಾರೆ ಫಲಿತಾಂಶದ ಬಗ್ಗೆ ತಂತ್ರಗಾರಿಕೆ ರೂಪಿಸುವುದರ ಬದಲು, ಚುನಾವಣಾ ನಂತರದ ತಮ್ಮ ವೈಯಕ್ತಿಕ ಸಾಧನೆಯ ಅಂಕಿಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿರುವಂತೆ ಕಾಣಿಸುತ್ತದೆ. ಈ ಒಡಕು ಮೈತ್ರಿಕೂಟಕ್ಕೆ ದುಬಾರಿಯಾಗಬಹುದು. ಪರಸ್ಪರ ಅನುಮಾನ, ಅವಾಸ್ತವಿಕ ಅಪೇಕ್ಷೆಗಳು, ಮಿತಿ ಮೀರಿದ ಆಸೆ ಹಾಗೂ ಸಾಮಾನ್ಯ ಹಿತಾಸಕ್ತಿಯೊಂದಿಗೆ ಮಾಡಿಕೊಳ್ಳುವ ರಾಜಿ, ಒಕ್ಕೂಟದ ವಿಶ್ವಾಸಾರ್ಹತೆಗೆ ಧಕ್ಕೆ ಉಂಟುಮಾಡಬಲ್ಲವು. ಪಕ್ಷಗಳಲ್ಲೂ ಆಂತರಿಕ ಸಂಘರ್ಷವಿದ್ದು, ಟಿಕೆಟ್ ಹಂಚಿಕೆ ಸಮಾಧಾನಕರ ರೀತಿಯಲ್ಲಿ ನಡೆದಂತಿಲ್ಲ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ನಡೆಸಿದ 'ಮತದಾರರ ಅಧಿಕಾರ ಯಾತ್ರೆ'ಗೆ ದೊರೆತ ಅಭೂತಪೂರ್ವ ಸ್ಪಂದನ ಮಹಾಘಟಬಂಧನದ ನಿರೀಕ್ಷೆಗಳನ್ನು ಹೆಚ್ಚಿಸಿತ್ತು. ಮಿತ್ರಪಕ್ಷಗಳ ಒಗ್ಗಟ್ಟು ಮತ್ತು ಸಾಮಾನ್ಯ ಗ್ರಹಿಕೆಗಳ ಪ್ರದರ್ಶನಕ್ಕೆ ಚುನಾವಣಾ ಸಂದರ್ಭ ಅತ್ಯುತ್ತಮ ಸಮಯವಾಗಿದೆ. ಆದರೆ, ದೇಶದ ಮೇಲೆ ಪರಿಣಾಮ ಬೀರಬಹುದಾದ ನಿರ್ಣಾಯಕ ಚುನಾವಣೆಯ ಸಂದರ್ಭದಲ್ಲಿ ಮೈತ್ರಿಕೂಟ ಅತ್ಯುತ್ತಮ ಆರಂಭ ಪಡೆಯುವಲ್ಲಿ ತಕ್ಕ ಪ್ರಯತ್ನ ನಡೆಸಿಲ್ಲ.

ಚಾಟಿ

ಗುಂಡಿಯಲ್ಲಿ ತೆರಿಗೆದಾರರು

ಬೆಂಗಳೂರಿನಲ್ಲಿ ಸಂಗ್ರಹವಾಗುವ ತೆರಿಗೆಯಲ್ಲಿ ಹೆಚ್ಚಿನ ಪಾಲು ಪಡೆಯುವ ಕೇಂದ್ರ ಸರ್ಕಾರಕ್ಕೆ ಬೆಂಗಳೂರಿನ ರಸ್ತೆ, ಮೂಲಸೌಕರ್ಯದ ಮೇಲೆ ಕಾನೂನಿನ ಪ್ರಕಾರ ಯಾವ ಜವಾಬ್ದಾರಿಯೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ತೆರಿಗೆ ಸಂಗ್ರಹ ಮಾಡಲು ರಾಜ್ಯ ಸರ್ಕಾರ, ಕಾರ್ಪೊರೇಷನ್‌ಗೆ ಪ್ರಾಪರ್ಟಿ ತೆರಿಗೆ ಹೆಚ್ಚಿಸಲು ಹೇಳುತ್ತದೆ. ಕೊನೆಗೆ, ಯಾವುದೋ ರಾಜ್ಯದ ಉದ್ಧಾರಕ್ಕೆ ನಾವು ಹೆಚ್ಚು ಹೆಚ್ಚು ತೆರಿಗೆ ಕಟ್ಟಿ ರಸ್ತೆಯ ಗುಂಡಿಯಲ್ಲಿ ಬಿದ್ದಿದ್ದೇವೆ.

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ

ಕಳೆದ ಎರಡೂವರೆ ವರ್ಷಗಳಲ್ಲಿ ಜನರ ತೆರಿಗೆ ಹಣವನ್ನು ಯಾವ ರೀತಿ ಖರ್ಚು ಮಾಡಲಾಗಿದೆ ಎಂಬ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮುಂಬರುವ ಅಧಿವೇಶನದಲ್ಲಿ ಶ್ವೇತಪತ್ರ ಹೊರಡಿಸಬೇಕಿದೆ. ಈ ಮಾಹಿತಿ ತಿಳಿದುಕೊಳ್ಳುವುದು ಕನ್ನಡಿಗರ ಹಕ್ಕು.

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 24-10-2000

• ಗ್ರಾಮೀಣ ಕೃಪಾಂಕ: ಮೂಡದ ಒಮ್ಮತ

ಬೆಂಗಳೂರು, ಅ. 23– ಒಟ್ಟು ಶೇ 50ರ ಮೀಸಲಾತಿಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಶೇ 10ರಷ್ಟು ಸ್ಥಾನಗಳನ್ನು ಮೀಸಲು ಇಡುವ ರಾಜ್ಯ ಸರ್ಕಾರದ ಉದ್ದೇಶಿತ ಮಸೂದೆ ಕುರಿತು ಇಂದು ಸಂಜೆ ಇಲ್ಲಿ ನಡೆದ ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಸರ್ವಸಮ್ಮತಿ ಮೂಡಲಿಲ್ಲ.

ಒಂದು ವಾರದೊಳಗಾಗಿ ಮತ್ತೊಂದು ಸಭೆ ನಡೆಸಿ ಇದೇ ಅಧಿವೇಶನದಲ್ಲಿಯೇ ಮಸೂದೆ ಮಂಡಿಸಲು ಸರ್ಕಾರ ಪ್ರಯತ್ನ ಮಾಡಲಿದೆ ಎಂದು ಕಾನೂನು ಸಚಿವ ಡಿ.ಬಿ. ಚಂದ್ರೇಗೌಡ ತಿಳಿಸಿದರು.

• ದುಬಾರಿ ನಿಲುಗಡೆ ಶುಲ್ಕ

ಬೆಂಗಳೂರು, ಅ. 23– ತೀವ್ರ ವಿರೋಧದ ನಡುವೆ ನಗರದ ಹದಿನಾರು ರಸ್ತೆಗಳಲ್ಲಿ ವಾಹನ ನಿಲುಗಡೆ ಶುಲ್ಕ ಪದ್ಧತಿಯನ್ನು ನವೆಂಬರ್ 1ರಿಂದ ಜಾರಿಗೊಳಿಸಲು ಬೆಂಗಳೂರು ಮಹಾನಗರ ಪಾಲಿಕೆ ನಿರ್ಧರಿಸಿದೆ.

75 ವರ್ಷಗಳ ಹಿಂದೆ

ಮಂಗಳವಾರ, 24-10-1950

• ಸುಸ್ಥಿರ ಆಮದು ನೀತಿ ಶೀಘ್ರ ಅನ್ವಯ ಅಗತ್ಯ

ನವದೆಹಲಿ, ಅ.23– ಸುಸ್ಥಾಯಿಯಾದ ಆಮದು ನೀತಿ ಅಂಗೀಕರಿಸಬೇಕಲ್ಲದೆ ಅದನ್ನು ಶೀಘ್ರವಾಗಿ, ದಕ್ಷತೆಯಿಂದ ಜಾರಿಗೆ ತರಬೇಕು ಎಂಬುದಾಗಿ ಆಮದು ಹತೋಟಿ ಪರಿಶೀಲನಾ ಸಮಿತಿ, ಭಾರತದ ಆಮದು ಹತೋಟಿಯನ್ನು ಕುರಿತು ಇದೇ ತಾನೆ ಭಾರತ ಸರ್ಕಾರಕ್ಕೆ ಒಪ್ಪಿಸಿರುವ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಆಮದು ಹತೋಟಿ ವ್ಯವಸ್ಥೆಯ ದಕ್ಷತೆಯನ್ನು ಹೆಚ್ಚಿಸುವ ಮಾರ್ಗಗಳನ್ನು ಶೋಧಿಸಿ ವರದಿ ಮಾಡುವ ಸಲುವಾಗಿ ಈ ಸಮಿತಿಯನ್ನು ಕಳೆದ ಜುಲೈ ತಿಂಗಳಲ್ಲಿ ನೇಮಿಸಿತ್ತು.

• ವಿಶ್ವಸಂಸ್ಥೆಗೆ ಪಕ್ಷಪಾತ ನೀತಿ ಸರ್ವಥಾ ಸಲ್ಲದು

ನವದೆಹಲಿ, ಅ.23– 'ವಿಶ್ವಸಂಸ್ಥೆಯ ಭವಿಷ್ಯದ ಸ್ಥಾನಮಾನಗಳು ಯುದ್ಧ ಅಥವಾ ಶಾಂತಿ ಮತ್ತು ವಿಶ್ವದ ಭವಿಷ್ಯದ ಸಮಸ್ಯೆಗಳನ್ನು ಅವಲಂಬಿಸಿದೆ' ಎಂದು ಭಾರತದ ಪ್ರಧಾನಿ ಪಂಡಿತ ನೆಹರೂ, ಇಂದು ವಿಶ್ವಸಂಸ್ಥೆ ದಿನಾಚರಣೆ ಸಂದರ್ಭದಲ್ಲಿ ಕೊಟ್ಟ ಸಂದೇಶದಲ್ಲಿ ಘೋಷಿಸಿದರು.

'ವಿಶ್ವವು ಯುದ್ಧದತ್ತ ಸಾಗದಂತೆ ನಾವು ಶಕ್ತಿಮೀರಿ ಶ್ರಮಿಸಬೇಕಾದ ಅಗತ್ಯ ಹೆಚ್ಚಾಗಿದೆ' ಎಂದರು.

ಕಣ್ಣಿಲ್ಲದ ತಕ್ಕಡಿಯಲ್ಲಿ ವಯಸ್ಸು!

ವಿಶ್ಲೇಷಣೆ

ಸಬಿತಾ ಬನ್ನಾಡಿ

ಗೆಳತಿಯೊಬ್ಬಳು ಆಳವಾಗಿ ಯೋಚಿಸುತ್ತಿದ್ದಳು. ನಲವತ್ತು ವರ್ಷಗಳ ಹಿಂದೆ, ಆಗ ಸುಮಾರು ಐವತ್ತೆಂಟು ವರ್ಷಗಳಾಗಿದ್ದ ತನ್ನ ಅಮ್ಮ ಒಂದು ದಿನ, ತಾನು ಉಡುವ ಕಾಟನ್ ಸೀರೆಯ ಸೆರಗಿಗೆ 'ಒಂದು ಪಿನ್ ಹಾಕ್ತೀಯಾ' ಅಂತ ಕೇಳಿದ್ದಳು. ತನ್ನ ಐದು ಮಕ್ಕಳಲ್ಲಿ ಕೊನೆಯ ಮಗಳು ಪಿಯುಸಿಯಲ್ಲಿದ್ದ ಆಕೆ, ಉಡುವ ಹತ್ತಿ ಸೀರೆಗೆ ಯಾವತ್ತೂ ಪಿನ್ ಹಾಕಿದವಳೇ ಅಲ್ಲ. ಈಗ ಇವಳಿಗೆ ಇದೆಂತ ಗಿರ ಹಿಡಿಯಿತು ಅಂತನ್ನಿಸಿ ಒಂದು ಸಣ್ಣ ಕೊಂಕು ನಗೆ ತನ್ನ ಮುಖದ ಮೇಲೆ ಹಾದುಹೋಗಿತ್ತು. ಏನನ್ನಿಸಿತೋ ಅಮ್ಮ 'ಬ್ಯಾಡ ಬಿಡು' ಅಂದಿದ್ದಳು. ಅದು ಅವಳೊಳಗೆ ಪಿನ್ನಿನಂತೆ ಚುಚ್ಚಿಕೊಂಡಿತ್ತು. ಇದೀಗ ತಾನೂ ಆ ವಯಸ್ಸನ್ನು ದಾಟುತ್ತಿರುವಾಗ ಆಂತರಿಕವಾಗಿ ಆಗುವ ಹೊಯ್ದಾಟವೊಂದು ಥಟ್ಟನೆ ಅವಳಿಗೆ ಗೊತ್ತಾಗುತ್ತಿದೆ.

ಹ್ಯಾಪಿ ಬರ್ತ್‌ಡೇ ಅಂತ್ಲೋ, ನಿವೃತ್ತಿ ಯಾವಾಗ ಅಂತ್ಲೋ ಸುತ್ತಲಿನೆಲ್ಲವೂ ವಯಸ್ಸನ್ನು ನೆನಪಿಸುತ್ತಿರುತ್ತವೆ. ಆದರೆ, ಮನಸ್ಸು ಚಿರ ಯೌವನಿಗರಂತೆ ಚಿಮ್ಮುತ್ತಿರುತ್ತದೆ. ಕೂದಲಿಗೆ ಕಪ್ಪು ಹಚ್ಚಿಕೊಂಡಷ್ಟು ಸುಲಭವಲ್ಲ, ಮನಸ್ಸನ್ನು ದೇಹಕ್ಕೆ ಒಗ್ಗಿಸುವುದು. ಹಣ್ಣಾಗಿದ್ದರೂ ಹೊಲಗೆಲಸಕ್ಕೆ ಹೋಗುವ ಚಿನ್ನಮ್ಮನ ಹತ್ತಿರ ನಿನ್ನ ವಯಸ್ಸೆಷ್ಟು ಅಂತ ಕೇಳಿದರೆ, 'ಯಾರಿಗ್ಗೊತ್ತು? ಆಗೋತನ್ಕ ಕೆಲ್ಸ ಮಾಡೋದು, ಅದೇನ್ ದೊಡ್ಡ ವಿಷ್ಯ?' ಅಂತಾಳೆ. ಹುಟ್ಟಿದ ದಿನಾಂಕವೇ ಗೊತ್ತಿಲ್ಲದ ಅವಳಿಗೆ ನಿವೃತ್ತಿಯ ದಿನಾಂಕವೂ ಗೊತ್ತಿಲ್ಲ. ಅದು ಅವಳ ಮನದೊಳಗೇನೂ ಅಲ್ಲೋಲಕಲ್ಲೋಲ ಮಾಡಿಲ್ಲ.

ಅಲ್ಲೋಲಕಲ್ಲೋಲ ಅಲ್ಲದಿದ್ದರೂ ಇಂದು ಇದು ಬೇರೆ ಬೇರೆ ರಾಜಕಾರಣದ ಭಾಗವೂ ಆಗಿಹೋಗಿರುವುದು ತಮಾಷೆಯ ವಿಷಯವಲ್ಲ. ಮೊದಲೆಲ್ಲ ರಾಜಕಾರಣಿಗಳು ತಮ್ಮ ವಯಸ್ಸು ಮರೆಮಾಚುತ್ತಿರಲಿಲ್ಲ. ಈಚೆಗೆ ನೇಪಾಳದಲ್ಲಿ 'ಜೆನ್‌–ಝೀ'ಗಳು ರಾಜಕಾರಣಿಗಳಿಗೂ ನಿವೃತ್ತಿ ಬೇಕು ಎಂದು ಡಿಮ್ಯಾಂಡ್ ಮಾಡಿದ್ರು. ಈ ಸೈಕಾಲಜಿ ನಮ್ಮ ಪ್ರಜೆಗಳಲ್ಲಿ ಇದೆ ಎಂದು ಮೊದಲೇ ಊಹಿಸಿದ್ದ ನಮ್ಮ ದೇಶದ ಕೆಲವು ನಾಯಕರು, ರಾಜಕಾರಣಿಗಳು 75ಕ್ಕೆ ನಿವೃತ್ತರಾಗಬೇಕೆಂಬುದು ನಮ್ಮ ನೀತಿ ಎಂದು ಪೋಸು ಕೊಟ್ಟರು. ನಾವೂ ಪುಳಕಗೊಂಡು ಎಂತಹ ಕ್ರಾಂತಿಕಾರಕ ಆಲೋಚನೆ, ಬೇರೆ ಯಾರಾದ್ರೂ ಇದನ್ನು ಮಾಡಲು ಸಾಧ್ಯವೇ ಎಂದು ಮೂಗಿನ ಮೇಲೆ ಬೆರಳಿಟ್ಟು ನೋಡುವಂತೆ ಕಾರ್ಯಾಚರಣೆ ನಡೆಯಿತು. ಆ ಪ್ರಕಾರ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಷಿ, ಬಿ.ಎಸ್. ಯಡಿಯೂರಪ್ಪ ಎಲ್ರಿಗೂ ವಯಸ್ಸಾಯ್ತು– ಏಣಿ ಹತ್ತಲು ಕೈ ಹಿಡಿದವರು ಎಂಬ ಎಮೋಷನ್ನು ಯಾರಿಗೂ ನೆನಪಾಗದಂತೆ– ಮೂಲೆಗುಂಪು ಮಾಡಿದ್ದಾಯ್ತು. ಮತ್ತೆ ಇವ್ರೂ ಇದನ್ನು ಅನುಸರಿಸ್ತಾರಾ ಅಂತ ಯಾರೋ ಮೆತ್ತಗೆ ಕೇಳಿದರೆ ಮತ್ತೆ? ಇವ್ರಂದ್ರೆ ಯಾರು? ದೇಶಕ್ಕಾಗಿ ಏನು ಬೇಕಾದ್ರೂ ಮಾಡ್ತಾರೆ, ನೀವೆಂತ ಮಾರ್ರೆ, ನಿಮ್ಗೆ ಬರೀ ಅನುಮಾನ ಅಂದವರಿಗೆಲ್ಲಾ ಸಮಯಕ್ಕೆ ಸರಿಯಾಗಿ ಮರೆವಿನ ಕಾಯಿಲೆ ವಕ್ಕರಿಸಿದೆ.

ಇದೀಗ ನಮ್ಮವರಿಗೆ ಎಪ್ಪತ್ತೈದು ಆಗಿಯೂ ಆಯ್ತು, ವಿಷ್ ಮಾಡಿಯೂ ಆಯ್ತು. ಹೀಗಿರುವಾಗ, ಇನ್ನೂ ನಡುವಯಸ್ಸು, ಉತ್ಸಾಹ, ದೈಹಿಕ ದೃಢತೆ ಇದೆ, ಸಾವಿರಾರು ಕಿಲೋಮೀಟರ್ ನಡೆಯಬಲ್ಲರು, ದೇಶಕ್ಕಾಗಿ ಕೆಲವು ಕನಸುಗಳಿವೆ ಅಂತೇನಾದ್ರೂ ನೀವೊಂದು ಪರ್ಯಾಯ ಹೇಳಿಬಿಟ್ರೆ ಅವರ ಕಿರಿವಯಸ್ಸು ಅರ್ಹತೆ ಅನ್ನಿಸಿಕೊಳ್ಳುವುದೇ ಇಲ್ಲ. ಮತ್ತೀಗ, ಶಯ್ಯೆ ಹಿಡಿದಿರುವ ಅತಿಹಿರಿಯರು, ಎಂದೆಂದೂ ನಿವೃತ್ತಿಯ ಮಾತಾಡದವರು ತಮ್ಮ ಅನುಕೂಲಕ್ಕೆ ಒದಗಿ ಬಂದರೆ ಅದೇ ಎಪ್ಪತ್ತೈದರ ಪರ ಮಾತಾಡುವವರು ಅವರನ್ನು ಭೀಷ್ಮಾಚಾರ್ಯರಿಗೆ ಹೋಲಿಸಿದರೂ ಆಶ್ಚರ್ಯ ಇಲ್ಲ. ಅಬ್ಬಾ! ವಯಸ್ಸೂ ಕಾರ್ಡ್ ಆಗಬಲ್ಲ, ಇದನ್ನೆಲ್ಲಾ ಸಲೀಸು ಮಾಡಿಕೊಂಡಿರುವ ಜನರಿಂದು ವ್ಯಾಪಕವಾಗಿರುವುದರ ಹಿಂದೆ ಮನಸ್ಸನ್ನು ರೂಪಿಸುವ ಕಾರ್ಖಾನೆಗಳ ಕೊಡುಗೆ ಬಹುದೊಡ್ಡದಿದೆ. ಮನಸ್ಸುಗಳನ್ನು ರೂಪಿಸುವುದು

> ಮನೋವ್ಯಾಪಾರದ ರೂಪದಲ್ಲಿ ವಯಸ್ಸು ಚಲಾವಣೆಯಲ್ಲಿದೆ. ಇಡೀ ಜಗತ್ತು ಯೌವನವನ್ನು ಮುದ್ದು ಮಾಡುತ್ತಿದೆ. ವ್ಯಾಪಾರ ಮತ್ತು ರಾಜಕಾರಣಕ್ಕೆ ವಯಸ್ಸು ಒಂದು ಲಾಭದಾಯಕ ಉತ್ಪನ್ನ. ಆದರೆ, ವಯಸ್ಸನ್ನು ಗೆಲ್ಲುವ ವ್ಯಸನದಲ್ಲಿ ಜಗತ್ತು ಮುದಿತನದೆಡೆಗೆ ದಾಪುಗಾಲಿಡುತ್ತಿದೆ!

ವ್ಯಾಪಾರ ತಂತ್ರಗಳಲ್ಲಿ ಅತಿ ಪ್ರಮುಖವಾದುದು. ತಕ್ಕಡಿಗೆ ಕಣ್ಣಿರುವುದಿಲ್ಲ.

ಯೌವನವೂ ಇಂದು ವ್ಯಾಪಾರದ ಪ್ರಮುಖ ಮಾರುಕಟ್ಟೆ. ಯೌವನದ ಗಡುವನ್ನು ಸಾರಾಸಗಟು ಹೆಚ್ಚಿಸಲಾಗುತ್ತಿದೆ. ಅದನ್ನು ಲೈಂಗಿಕತೆಗೆ ಸೀಮಿತಗೊಳಿಸಿ ಮಾರುಕಟ್ಟೆಯನ್ನು ವಿಸ್ತರಿಸುವ ಜಾಲ ಎಲ್ಲಿಂದೆಲ್ಲಿಗೆ ಹಬ್ಬಿಕೊಂಡಿದೆ ಎಂಬುದು ತಿಳಿದ ಸಂಗತಿ. ಆದರೆ, ವಯಸ್ಸಾಗುವುದೂ ಆಕರ್ಷಣೆಯ ವಿಷಯ ಆಗಬಹುದು ಎಂಬುದನ್ನೂ ಆಗುಮಾಡುವ, ಅದನ್ನು ಕ್ರೈಮ್ ಜೊತೆ ಬೆರೆಸುವ ವಿಕ್ಷಿಪ್ತತೆ ಗಾಬರಿ ಹುಟ್ಟಿಸುತ್ತದೆ. ಜನರ ಮನಸ್ಸನ್ನು ಎಲ್ಲವೂ ಸೇರಿ ಹೇಗೆಲ್ಲಾ ರೂಪಿಸುತ್ತವೆ ಮತ್ತು ಇದರಲ್ಲಿ ದೃಶ್ಯ ಮಾಧ್ಯಮಗಳ ಸಿಂಹಪಾಲಿರುವುದು, ಮತ್ತವು ನೈತಿಕತೆಯ ಎಲ್ಲ ಎಲ್ಲೆಗಳನ್ನೂ ಪುಡಿಗಟ್ಟಿ ಮುನ್ನುಗ್ಗುವುದನ್ನು 2014ರ ಅಮೆರಿಕನ್ ಸಿನಿಮಾ 'ನೈಟ್‌ಕ್ರಾವ್ಲರ್' ಹಿಡಿದಿಡುವ ರೀತಿ ದಂಗುಬಡಿಸುತ್ತದೆ.

ಲೂ ಬ್ಲೂಮ್ ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದವನು. ತಡರಾತ್ರಿ ನಡೆಯುವ ಅಪಘಾತ, ಕೊಲೆಗಳನ್ನು ಎಲ್ಲರಿಗಿಂತ ಮೊದಲು ಚಿತ್ರಿಸಿ ಬೆಳ್ಳಂಬೆಳಗ್ಗೆ ಪ್ರಸಾರ ಮಾಡಲು ಟಿ.ವಿ. ಕಂಪನಿಗಳಿಗೆ ಮಾರಾಟ ಮಾಡುವ ದಂಧೆ ನೋಡಿದ ಮೇಲೆ ಅದೇ ಲಾಭದಾಯಕ ಅನ್ಸುತ್ತೆ. ಅದರ ನಾಡಿ ಹಿಡಿದ ಆತ, ಕ್ರೌರ್ಯ ಎದ್ದುಕಾಣುವಂತೆ ಕ್ಲೋಸ್‌ಅಪ್ ಶಾಟ್‌ಗಳನ್ನು ಚಿತ್ರೀಕರಿಸಿ ಮೇಲಕ್ಕೇರುತ್ತಾನೆ. ತನಗಿಂತ ಎರಡು ಪಟ್ಟು ವಯಸ್ಸಾದ ನೀನಾಳ ಸೆಳೆತಕ್ಕೆ ಒಳಗಾಗ್ತಾನೆ. ಅದೇ ಕಾರಣಕ್ಕೆ ಆಕೆ ನಿರಾಕರಿಸಿದರೂ ಕಾಲಕ್ಕಾಗಿ ಕಾಯ್ತಾನೆ. ಕೊನೆಗೆ ತಾನು ಕಡಿಮೆ ಸಂಬಳಕ್ಕೆ ನೇಮಿಸಿಕೊಂಡಿದ್ದ ಬಡಪಾಯಿ ಹುಡುಗನು ಸ್ವತಃ ಕೊಲೆಗಡುಕರ ಗುಂಡಿಗೆ ಬಲಿಯಾಗುವಂತೆ ಮಾಡ್ತಾನೆ. ಜೀವ ಹೋಗುವ ಮೊದಲು, 'ನೀನೇ ಇದನ್ನು ಗೊತ್ತಿದ್ದೂ ಮಾಡಿದೆಯಲ್ಲವೇ?' ಎಂದವನು ಕೇಳುತ್ತಿದ್ದರೆ, ತಣ್ಣಗೆ ಸಮಜಾಯಿಷಿ ಕೊಟ್ಟುಕೊಳ್ತಾ, ಅವನ ಕಣ್ಣೆಂದ ಜೀವ ಹೋಗೋವರೆಗೂ ಚಿತ್ರೀಕರಿಸಿ ಫೂಟೇಜನ್ನು ಟಿ.ವಿ.ಗೆ ಮಾರಿಕೊಳ್ತಾನೆ. ಆ ಫೂಟೇಜ್ ನೋಡಿ ಅಮೇಜಿಂಗ್ ಎಂದು ಹೊಗಳುವ ನೀನಾ ತನ್ನ ವಯಸ್ಸು ಮರೆತು ಅವನಿಗೆ ವಶವಾಗುವ ಸೂಚನೆ ಕೊಡ್ತಾಳೆ.

ಗಾಂಧಿ ಹೇಳುವ ಸಪ್ತ ಮಹಾಪಾತಕಗಳಲ್ಲಿ 'ನೀತಿಯಿಲ್ಲದ ವ್ಯಾಪಾರ'ವೂ ಒಂದು. ಇವತ್ತು ನಾವು ಬಳಸುವ ಎಷ್ಟೋ ಬ್ಯೂಟಿ ಪ್ರಾಡೆಕ್ಟ್‌ಗಳು ತಯಾರಾಗುವ ಮೂಲ ಅಮಾನುಷವಾಗಿರುತ್ತದೆ. ಆ್ಯಂಟಿ ಏಜಿಂಗ್‌ನ ಭ್ರಮೆಗೆ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ಶೆಫಾಲಿ ಜರಿವಾಲಾ ಎಂಬ ನಟಿ ಡಾಕ್ಟರ್ ಸಲಹೆ ಕೇಳ್ಕೊಂಡೇ, ಪ್ರತಿ ದಿನ ವಯೋವಿರುದ್ಧ ಇಂಜೆಕ್ಷನ್ ತಗೊಳ್ತಿದ್ದು.

ಅದೇ ಹೊತ್ತಿಗೆ ಸತ್ಯನಾರಾಯಣ ವ್ರತಕ್ಕಾಗಿ ಉಪವಾಸವನ್ನೂ ಮಾಡುತ್ತಿದ್ದಳಂತೆ. ಮುಖದ ಮೇಲಿನ ಬಂಗು ಹೋಗೋಕೆ ಮತ್ತೇನೋ ಔಷಧ ತೆಗೆದುಕೊಳ್ಳುತ್ತಿದ್ದಳಂತೆ. ಅವಳು ಉಪವಾಸದ ಸಮಯದಲ್ಲಿ ಇದನ್ನೆಲ್ಲ ತೆಗೆದುಕೊಳ್ಳಬಾರದಿತ್ತು. ಒಂದೆಡೆ ಧಾರ್ಮಿಕ ರೀತಿ ರಿವಾಜಿನ ಅಳುಕು, ಇನ್ನೊಂದೆಡೆ ಔಷಧ ತಪ್ಪಿಸಬಾರದು ಅನ್ನೋ ನಿಯತ್ತು. ಎರಡೂ ತಾಳಮೇಳವಿಲ್ಲದೆ ಹೃದಯಾಘಾತಕ್ಕೆ ಒಳಗಾಗಿ ನಲವತ್ತೆರಡಕ್ಕೆ ಅಸುನೀಗಿದಳು (ಧಾರ್ಮಿಕ ಆಚರಣೆಗಳು ಹೀಗೇ ಇರಬೇಕು ಎಂಬುದಕ್ಕೂ ಈ ದೃಶ್ಯಮಾಧ್ಯಮಗಳ ಪೌರೋಹಿತ್ಯ ಮಿತಿ ಮೀರುತ್ತಿದೆ).

ನಟಿ ಶ್ರೀದೇವಿಯೂ ವಯೋವಿರುದ್ಧದ ಚಿಕಿತ್ಸೆಯ ಕಾರಣದಿಂದಲೇ ಅಷ್ಟು ಬೇಗ ಸತ್ತಿರಬಹುದು ಎಂಬ ಮಾತಿದೆ. ಹುಡುಗರ ವಿಷಯದಲ್ಲೂ ಇದು ನಡೆಯುತ್ತಿದೆ. ಜಿಮ್ ಬಾಡಿಯ ಅನಿವಾರ್ಯತೆ ಸೃಷ್ಟಿಸಿ ಆಗಿರುವ ದುರಂತಗಳು ಒಂದೆರಡಲ್ಲ. ನಡುವಯಸ್ಸಿನವರ ಈ ಎಲ್ಲ ನಡೆಗಳು ಯೌವನದ ಮರುವ್ಯಾಖ್ಯಾನಕ್ಕೆ ಒಡ್ಡಿಕೊಂಡವರ ಮತ್ತು ನೋಡಬಯಸುವವರ ತುಡಿತದಿಂದ ಆಗಿರುತ್ತದೆ. ಈ ಮನೋವ್ಯಾಪಾರವು ಸಾಮಾಜಿಕ ವ್ಯಾಪಾರವಾಗಿ ಕರಗಿಹೋಗಿಯಾಗಿದೆ.

ಇನ್ನೊಂದು ರಗಳೆ ಇದೆ. ನಿರ್ಲಕ್ಷ್ಯಕ್ಕೆ ಒಳಗಾದ ಹಿರಿಯರ ಗೋಳಿನ ಕತೆಯನ್ನು ಮೀಟಿ ಮೀಟಿ ಹಣ ಉದುರಿಸಿಕೊಳ್ಳಲಾಗುತ್ತದೆ. ಹಿರಿಯರನ್ನು ನೋಡಿಕೊಳ್ಳುವುದು ಬದುಕಿನೊಂದು ಭಾಗ. ತಕ್ಕಡಿಯ ಸರಕಲ್ಲ. ಹಿರಿಯರನ್ನು ನೋಡಿಕೊಳ್ಳುವುದೇ ತಾವು ಅವರಿಗೆ ಕೊಡುತ್ತಿರುವ ದೊಡ್ಡ ಸವಲತ್ತು ಎಂಬ ಬೀಗುವಿಕೆಯ ಭಾವ ಮನೆ ಮಂದಿಯಲ್ಲಿ ಹೆಚ್ಚಾದಷ್ಟೂ, ವಯಸ್ಸಾದವರಿಗೆ ತಾವು ಹಂಗಿಗೆ ಬಿದ್ದ ದುಃಖ ಹೆಚ್ಚುತ್ತದೆ.

ಇವೆಲ್ಲವೂ ಸೇರಿ ನಮ್ಮನ್ನು ಇದ್ದಂಗೆ ಇರಲು ಬಿಡುತ್ತಿಲ್ಲ. ನಾವು ಆಧುನಿಕ ಯಯಾತಿಯರಾಗಬೇಕಿಲ್ಲ. ಅಕಾಲ ಮುಪ್ಪಿನ ಅವನಂತೆ ಸಕಾಲ ಮುಪ್ಪಿನವರು ಒದ್ದಾಡುವ ಅಗತ್ಯವಿಲ್ಲ. ಆ ಸಹಜ ಬೆಳವಣಿಗೆಯ ಜೊತೆಗೆ ಮಾತಾಡಬೇಕಾದವರು ಸ್ವತಃ ಅವರೇ ಹೊರತು ಅದರಾಚೆಯವರಲ್ಲ. ಆಚೆಯವರು ಚೂರು ಕಿವಿಯಾದರೆ ಸಾಕು. ನಿಜ ಹೇಳಬೇಕೆಂದರೆ, ಇಂದು ಉಲ್ಟಾ ಯಯಾತಿಯರು ಹೆಚ್ಚುತ್ತಿದ್ದಾರೆ. ಅವರ ಬಗೆಗೆ ನಾವು ಹೆಚ್ಚು ಯೋಚಿಸುತ್ತಿಲ್ಲ. ಆಸ್ಪತ್ರೆಗಳಲ್ಲಿ ಹಿರಿಯರನ್ನು ಕರೆತರುವ ಯುವಕರಷ್ಟೇ ಪ್ರಮಾಣದಲ್ಲಿ, ಯುವಕರನ್ನು ಕರೆತರುವ ಹಿರಿಯರು ಹೆಚ್ಚುತ್ತಿದ್ದಾರೆ. ಮಾನಸಿಕವಾಗಿ, ದೈಹಿಕವಾಗಿ ಕ್ಷಮತೆ ಕಳೆದುಕೊಂಡ ಇವರು ಯುವ ದೇಹದಲ್ಲಿ ಮುದಿತನವನ್ನು ಹೊಂದಿ ಮಂಕಾಗಿದ್ದಾರೆ. ಎಲ್ಲವನ್ನೂ ವ್ಯಾಪಾರ ಮಾಡುವ ಭರದಲ್ಲಿ ಇಡೀ ಜಗತ್ತು ಮುದಿತನದೆಡೆಗೆ ಧಾವಿಸುತ್ತಿರುವುದನ್ನು ತಡೆಯುವುದು ಹೇಗೆ?

ಮತ್ತೀಗ ಪ್ರಾಜ್ಞ ಹಿರಿಯರೆಡೆಗೆ ಕಣ್ಣು ಹಾಯಿಸಬೇಕು. ವಯಸ್ಸಾದವರೆಲ್ಲ ಹಿರಿಯರಾಗುವುದಿಲ್ಲ. ದುಶ್ಯಾಸನ ಎಳೆದು ತಂದಾಗ, ತುಂಬಿದ ಸಭೆಯಲ್ಲಿ ಎಲ್ಲರೂ ತಲೆತಗ್ಗಿಸಿ ಕುಳಿತಿದ್ದಾಗ, ಹಿರಿಯರಿಲ್ಲದ ಸಭೆ ಸಭೆಯಲ್ಲ ನೆರವಿ ಎಂದು ಕುಮಾರವ್ಯಾಸ ಭಾರತದ ದ್ರೌಪದಿ ಕಟು ಮಾತುಗಳನ್ನಾಡುತ್ತಾಳೆ. ಯಾರು ಅನ್ಯಾಯ, ಅಪಮಾನ, ಅಸತ್ಯ, ಅಸಭ್ಯತೆಗಳನ್ನು ವಿರೋಧಿಸುವ ಹಿರಿತನ ತೋರಲಾರರೋ ಅವರು ಹಿರಿಯರಲ್ಲ, ಕೆಲಸವಿಲ್ಲದ ಕ್ಷುದ್ರ ಜಂಗುಳಿ ಎಂಬ ಅವಳ ಮಾತು ನಮಗೆ ತೋರುತ್ತಿರುವ ದಾರಿದೀಪವೂ ಆಗಿದೆ. ವಯಸ್ಸೆಂಬ ಪ್ರಕ್ರಿಯೆ ಮನೋವ್ಯಾಪಾರದ ದಾಳವಾದ ವ್ಯಾಪಾರವಾಗದೇ ಅದೊಂದು ಮಾಗುವಿಕೆ ಎಂಬ ಸಹಜತೆ ಬೆಳೆದಾಗ ಕಿರಿಬೆರಳು ನಡುಬೆರಳು ಹಿರಿಬೆರಳುಗಳು ಬೆಸೆದು ಪೂರ್ಣತೆಯೆಡೆಗೊಂದು ಪಯಣ ಶುರುವಾಗುತ್ತದೆ.



ವಾಚಕರ ವಾಣಿ

'ಸ್ವಚ್ಛ ಭಾರತ' ಅನುಷ್ಠಾನದ ಈ ಪರಿ

ಬಹಿರ್ದೆಸೆಗೆ ಹೋಗಿ ಕೆರೆಯಲ್ಲಿ ನೀರು ಮುಟ್ಟುವ ಸಂದರ್ಭದಲ್ಲಿ ಜಾರಿಬಿದ್ದ ಮಕ್ಕಳನ್ನು ರಕ್ಷಿಸಲು ಹೋದ ಹಿರಿಯರು ಹಾಗೂ ಆ ಇಬ್ಬರೂ ಮಕ್ಕಳು ಮೃತರಾಗಿರುವ ಘಟನೆ ತುಮಕೂರು ಜಿಲ್ಲೆಯಲ್ಲಿ ವರದಿಯಾಗಿದೆ. ದೇಶದ ಎಲ್ಲ ಕುಟುಂಬಗಳೂ ಶೌಚಾಲಯ ಬಳಸಬೇಕೆಂಬ ಯೋಜನೆ ಹಲವು ವರ್ಷಗಳಿಂದ ಜಾರಿಯಲ್ಲಿದೆ. ಕೇಂದ್ರ ಸರ್ಕಾರ 'ಸ್ವಚ್ಛ ಭಾರತ' ಅಭಿಯಾನದ ಹೆಸರಿನಲ್ಲಿ ದೇಶವು ಬಯಲು ಶೌಚಮುಕ್ತವಾಗಿದೆಯೆಂದು ಘೋಷಿಸಲು ಹೊರಟಿದೆ. ಜತೆಗೆ, ಸ್ವಚ್ಛ ಭಾರತ ಯೋಜನೆಗೆ ವಿವಿಧ ಮೂಲಗಳಿಂದ ಸಾಕಷ್ಟು ಹಣ ಸಂಗ್ರಹಿಸುತ್ತಿದೆ. ಹೀಗಿದ್ದಾಗ್ಯೂ, ನೀರು ಮುಟ್ಟಲು ಹೋಗಿ ಪ್ರಾಣ ಕಳೆದುಕೊಂಡವರ ಪ್ರಕರಣ ನೋಡಿದರೆ ಬಯಲು ಶೌಚಮುಕ್ತ ಯೋಜನೆಯ ನೈಜಸ್ಥಿತಿ ಅರ್ಥವಾಗುತ್ತದೆ.

ಈ. ಬಸವರಾಜು, ಬೆಂಗಳೂರು

'ಎ' ಖಾತೆ ಬಿಸಿತುಪ್ಪ: ಸರ್ಕಾರ ಸ್ಪಂದಿಸಲಿ

'ಬಿ' ಖಾತೆ ಆಸ್ತಿಯನ್ನು 'ಎ' ಖಾತೆಯಾಗಿ ಪರಿವರ್ತನೆ ಮಾಡಿಕೊಡುವುದಾಗಿ ರಾಜ್ಯ ಸರ್ಕಾರ ನಿರ್ಧರಿಸಿರುವುದು ಸರಿಯಷ್ಟೇ. ಇದು ಹಲವು ವರ್ಷಗಳಿಂದ 'ಬಿ' ಖಾತೆ ಆಸ್ತಿ ಹೊಂದಿದವರ ಕನಸು ಕೂಡ ಆಗಿತ್ತು. ಸದ್ಯ 'ಬಿ' ಖಾತೆದಾರರಿಗೆ ಖುಷಿಯ ವಿಚಾರವಾದರೂ ಬಿಸಿತುಪ್ಪದಂತಾಗಿದೆ. 'ಎ' ಖಾತೆ ಪರಿವರ್ತನೆಗೆ ಲಕ್ಷಗಟ್ಟಲೆ ಹಣ ಕಟ್ಟಬೇಕೆಂದು ತಿಳಿದು ಗಾಬರಿಯಾಗುತ್ತಿದೆ. ಅದೂ ನೂರು ದಿನದೊಳಗೆ ಹೊಂದಿಸುವುದು ಹೇಗೆ ಎಂಬ ಚಿಂತೆಯಾಗಿದೆ. ಸರ್ಕಾರ ಈ ಬಗ್ಗೆ ಗಮನಹರಿಸಿ 'ಬಿ' ಖಾತೆದಾರರ ಕಷ್ಟಕ್ಕೆ ನೆರವಾಗಬೇಕಿದೆ.

ನಂದಕುಮಾರ್, ಬೆಂಗಳೂರು

ಮೃತ ಮಹಿಳೆಯರ ಶೀಲ ಶಂಕಿಸಬೇಡಿ

'ಶೀಲ ಶಂಕಿಸಿ ಪತ್ನಿಯ ಕೊಲೆ', 'ಪತ್ನಿಯ ಶೀಲ ಶಂಕಿಸಿ ಕೊಲೆ ಮಾಡಿದ ಪತಿ ಬಂಧನ', 'ಪತ್ನಿಯ ಶೀಲವನ್ನು ಶಂಕಿಸಿ ಹತ್ಯೆಗೈದ ಪತಿ' –ಇಂತಹ ಶೀರ್ಷಿಕೆಯಡಿ ಕೊಲೆ ಸುದ್ದಿಗಳು ವರದಿಯಾಗುತ್ತಿರುತ್ತವೆ. ಇದು ಕೊಲೆ ಅಷ್ಟೇ. ಪತ್ನಿಯ ಶೀಲ ಶಂಕಿಸಿ ಕೊಲೆ ಮಾಡಿದ್ದಾನೆ ಎಂಬುದು ಕೊಲೆಗಾರನ ಸಮಜಾಯಿಷಿ ಅಷ್ಟೇ. ಕೊಲೆಗಾರನ ಮಾತನ್ನು ನಂಬಿ ಮೃತ ಮಹಿಳೆಯ ಶೀಲ ಶಂಕಿಸಿ ಸಾರ್ವಜನಿಕವಾಗಿ ಅವಮಾನಿಸುವುದು ಅಮಾನವೀಯವಲ್ಲವೆ?

ಪಿ.ಜೆ. ರಾಘವೇಂದ್ರ, ಮೈಸೂರು

ಆರ್ಥಿಕ ಅಸಮಾನತೆ ಸಂಘರ್ಷಕ್ಕೆ ಮೂಲ

ಕೇಂದ್ರ ಸರ್ಕಾರವು ನಕ್ಸಲರ ಹತ್ಯೆಯನ್ನು ಸಾಧನೆ ಎಂಬಂತೆ ಬಿಂಬಿಸಿಕೊಳ್ಳುತ್ತಿದೆ. ಭೂಮಾಲೀಕರ ಅಟ್ಟಹಾಸ ಮತ್ತು ಅಧಿಕಾರಿಗಳ ಭ್ರಷ್ಟಾಚಾರ ವಿರೋಧಿಸಿಯೇ ದೇಶದಲ್ಲಿ ನಕ್ಸಲರು ಹುಟ್ಟಿಕೊಂಡಿದ್ದು ಎನ್ನುವುದು ಸರ್ವವಿದಿತ. ನಕ್ಸಲರು ಆಯ್ದುಕೊಂಡ ಮಾರ್ಗ ಹಿಂಸೆಯಿಂದ ಕೂಡಿತ್ತು. ಆರಂಭದಲ್ಲಿ ಭ್ರಷ್ಟಾಚಾರ ಎಸಗುವವರನ್ನೂ ಹತ್ಯೆ ಮಾಡುತ್ತಿದ್ದರು. ಕೊನೆಯಲ್ಲಿ ತಮ್ಮ ಅಸ್ತಿತ್ವಕ್ಕಾಗಿ ನಿರಪರಾಧಿಗಳನ್ನು ಗುರಿಯಾಗಿಸಿಕೊಂಡಿರಬಹುದು. ಸರ್ಕಾರ ಸ್ವಯಂಪ್ರೇರಿತವಾಗಿ ಭ್ರಷ್ಟಾಚಾರವನ್ನು ಕೊನೆಗೊಳಿಸಿದ್ದರೆ, ನಕ್ಸಲ್ ಸಿದ್ಧಾಂತ ತನಗೆ ತಾನೇ ಕೊನೆಗೊಳ್ಳುತ್ತಿತ್ತು. ಸರ್ಕಾರ, ಆರ್ಥಿಕ ವ್ಯವಸ್ಥೆಯನ್ನು ಬಂಡವಾಳಶಾಹಿಗಳಿಗೆ ಮಾರಾಟ ಮಾಡಿದರೆ ನಾಗರಿಕ ವ್ಯವಸ್ಥೆಯು ಅದನ್ನು ವಿರೋಧಿಸಲು ಮತ್ತೊಂದು ಸಂಘಟನೆಯನ್ನು ಕಟ್ಟುತ್ತದೆ. ಆರ್ಥಿಕ ಅಸಮಾನತೆ ಮುಂದುವರಿದರೆ ಸಂಘರ್ಷವೂ ಒಂದಲ್ಲಾ ಒಂದು ರೂಪದಲ್ಲಿ ಉಳಿಯಲಿದೆ.

ಪ್ರಶಾಂತ್ ಕೆ.ಸಿ., ಚಾಮರಾಜನಗರ

ವೈಖರಿ

ಅನ್ನ ಬೆಂದಿದೆಯೊ ಇಲ್ಲವೊ
ತಿಳಿಯಲು ಒಂದೇ ಒಂದು
ಅಗುಳು ಅನ್ನ ಸಾಕು,
ಸರ್ಕಾರದ ಆಡಳಿತ ವೈಖರಿ
ಅರಿಯಲು ಇನ್ನೆಷ್ಟು ರಸ್ತೆ
ಗುಂಡಿಗಳು ಬೀಳಬೇಕು!

ಮಲ್ಲಿಕಾರ್ಜುನ, ಸುರಧೇನುಪುರ

ಅಧರ್ಮದ ಹಾದಿಯಲ್ಲಿ ಗುರುಧರ್ಮ

ನಾಯಕನಹಟ್ಟಿಯ ಶ್ರೀಗುರು ತಿಪ್ಪೇರುದ್ರಸ್ವಾಮಿ ದೇವಾಲಯದ ವೀರಶೈವ ಆಗಮ, ವೇದ ಮತ್ತು ಸಂಸ್ಕೃತ ಪಾಠಶಾಲೆಯ ಶಿಕ್ಷಕ ವೀರೇಶ ಹಿರೇಮಠ, ವಿದ್ಯಾರ್ಥಿಯನ್ನು ಅಮಾನುಷವಾಗಿ ಥಳಿಸಿರುವುದು ಅಮಾನವೀಯ. ನಾವೂ ವಿದ್ಯಾರ್ಥಿಗಳಾಗಿದ್ದಾಗ ನಮ್ಮನ್ನೂ ಶಿಕ್ಷಕರು ಸರಿಯಾಗಿಯೇ ಥಳಿಸುತ್ತಿದ್ದರು. ಆದರೆ, ವೀರೇಶರಂತೆ ಎಂದೂ ದಂಡಿಸಿರಲಿಲ್ಲ. ಸತ್ಯ, ಅಹಿಂಸೆ, ದಯಾ, ಕ್ಷಮೆ ಆದರ್ಶ ಗುರುವಿನ ಗುಣಗಳು. ಗುರುಕುಲದ 'ಸಂಸ್ಕಾರ'ವಿಲ್ಲದ, 'ಸಂಸ್ಕೃತ' ಬೋಧಿಸುವ ಗುರುವಿನ ಕ್ರೌರ್ಯದ ನಡೆಯೂ ಗುರುಧರ್ಮವು ಅಧರ್ಮದತ್ತ ಸಾಗುತ್ತಿರುವುದಕ್ಕೆ ನಿದರ್ಶನದಂತಿದೆ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಐಐಎಸ್‌ಸಿ: 'ರಾಜರ್ಷಿ' ಪ್ರತಿಮೆ ಸ್ಥಾಪಿಸಿ

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ದೇಶದ ಪ್ರತಿಷ್ಠಿತ ಜ್ಞಾನಕೇಂದ್ರಗಳಲ್ಲಿ ಒಂದಾಗಿದೆ. 1911ರಲ್ಲಿ ಶಿಲಾನ್ಯಾಸಗೊಂಡ ಈ ಸಂಸ್ಥೆಗೆ ಸುಮಾರು 371 ಎಕರೆ ಪ್ರದೇಶವನ್ನು 1907ರಲ್ಲಿ ಜೆಮ್ ಶೆಡ್‌ಜಿ ಟಾಟಾ ಅವರಿಗೆ ದಾನವಾಗಿ ನೀಡಿದ್ದು, ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂಬುದು ಇತಿಹಾಸ. ವಿಜ್ಞಾನ, ಶಿಕ್ಷಣ, ಮಹಿಳಾ ಸಬಲೀಕರಣ, ವಿದ್ಯುತ್ ಉತ್ಪಾದನೆ, ಕೈಗಾರಿಕಾ ಅಭಿವೃದ್ಧಿ ಸೇರಿ 30ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಒಡೆಯರ್ ಅವರ ದೂರದೃಷ್ಟಿಯ ಕಾರ್ಯಗಳು ಕರ್ನಾಟಕವನ್ನು ದೇಶದ ಪ್ರಗತಿಪರ ರಾಜ್ಯವನ್ನಾಗಿ ರೂಪಿಸಿವೆ. ಅವರ ಆ ದೂರದೃಷ್ಟಿಯಿಂದ ಪ್ರಸ್ತುತ ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನದ ನೆಲೆಬೀಡಾಗಿದೆ. ಹಾಗಾಗಿ, ಐಐಎಸ್‌ಸಿ 'ಮುಖ್ಯದ್ವಾರ'ದಲ್ಲಿ ನಾಲ್ವಡಿ ಅವರ ಭವ್ಯ ಪ್ರತಿಮೆ ಸ್ಥಾಪಿಸುವುದು ಸಮಂಜಸ.

ರಾ. ಪ್ರಕಾಶ್ ಅರಸ್, ಡಾ. ಜೆ. ಶಾಂತಿ ಪ್ರಸಾದ್, ಎ. ಅಶೋಕ್ ಅರಸ್, ಲೋಕನಾಥ್ ಎ., ಗಣೇಶ್ ಕಾಳೇಕರ್, ಎನ್.ಜಿ. ಉಮೇಶ್, ಮಂಜುನಾಥ್ ಬೋನ್ಸ್ಲೆ, ಬೆಂಗಳೂರು

ಚುರುಮುರಿ



'ಕೇಸರಿ' ಬಾತ್!

• ಬಿ.ಎನ್. ಮಲ್ಲೇಶ್

'ಏನ್ರಲೆ, ದೀಪಾವಳಿ ಜೋರಾತ? ಪಟಾಕೀನೂ ಹೊಡೆದ್ರಾ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಹೊಡೆದ್ವಿ ಕಣಲೆ, ಅದೆಂಥದೋ ಹಸಿರು ಪಟಾಕಿಯಂತೆ, ಒಂದೂ ಢಂ ಅನ್ಲಿಲ್ಲ, ಬರೀ ಟುಸುಮುರಗಿ...' ಎಂದ ಕೊಟ್ರೇಶಿ.

'ನಿನ್ ಹಸಿರು ಪಟಾಕಿ ಹಂಗಿರ್ಲಿ, ನಮ್ ರಾಜಕೀಯದೋರ ಕೆಸರು ಪಟಾಕಿ ನೋಡು, ಭರ್ಜರಿ ಸೌಂಡು... ಅಲ್ಲಿ ಟ್ರಂಪ್ ಟ್ಯಾಕ್ಸ್ ಪಟಾಕಿ, ಇಲ್ಲಿ ಆರೆಸ್ಸೆಸ್ ದೊಣ್ಣೆ ಪಟಾಕಿ!' ಗುಡ್ಡೆ ನಕ್ಕ.

'ಈ ರಾಜಕೀಯದೋರು ಮಾತಿನ ಕೆಸರೆರಚಾಟದ ಜತಿಗೆ ಒಳಗೇ ಎಲ್ಲೆಲ್ಲಿ ಪಟಾಕಿ ಹಚ್ಚಬೇಕೋ ಹಚ್ಚಿರ್ತಾರೆ, ಗೊತ್ತೇ ಆಗಲ್ಲ...' ತೆಪರೇಸಿಗೂ ನಗು.

'ಹೌದಾ? ಮತ್ತೆ ಒಂದೂ ಢಂ ಅಂದಿಲ್ಲ?'

'ಅವು ಟೈಂ ಬಾಂಬ್ ತರ, ಯಾವ ಟೈಮಲ್ಲಿ ಎಲ್ಲಿ ಢಂ ಅಂತಾವೋ ದೇವರಿಗೇ ಗೊತ್ತು...'

'ದೇವರು ಅಂದ ಕೂಡ್ಲೆ ನೆನಪಾತು ನೋಡು, ನಮ್ ದೇವರುಗಳಿಗೆ ಈ ರಾಜಕಾರಣಿಗಳ ಬೇಡಿಕೆ ಕೇಳಿ ಕೇಳಿ ತಲೆ ಕೆಟ್ಟು ಹೋಗೇತಂತೆ. ಸಿ.ಎಂ ಕುರ್ಚಿ ಉಳಿಸಿ ಅಂತ ಒಬ್ರು, ಕೊಡ್ಸಿ ಅಂತ ಇನ್ನೊಬ್ರು... ಯಾರ ಮಾತಂತ ಕೇಳೋದು?'

'ಇದರ ಜತಿಗೆ ಈಗ ನಮ್ ಯತೀಂದ್ರಣ್ಣನೂ ಸಿ.ಎಂ ಉತ್ತರಾಧಿಕಾರದ ಹೊಸ ಪಟಾಕಿ ಹಚ್ಚಿಬಿಟ್ಟಿದಾರೆ?'

'ಅದು ಪಟಾಕಿ ಅಲ್ಲ, ಬಾಂಬು... ಯಾರ ಬುಡಕ್ಕೆ ಇಡಬೇಕೋ ಇಟ್ಟಿದಾರೆ, ಢಂ ಅನ್ನೋದೊಂದು ಬಾಕಿ...' ಎಂದು ಮಂಜಮ್ಮ ನಕ್ಕಳು.

'ಅಹಹ, ನಗು ನೋಡು, ಕೈ ಪಕ್ಷದೋರು ಕಿತ್ತಾಡಿದ್ರೆ ನಿಂಗೆ ಖುಷಿ ಅಲ್ವಾ? ಹೋಗ್ಲಿ, ನಿಂಗೆ ಜಹಾಂಗೀರ್ ಮಾಡಾಕೆ ಬರುತ್ತಾ?' ಗುಡ್ಡೆ ಕೇಳಿದ.

'ಬರುತ್ತೆ, ಆದ್ರೆ ಮಾಡಲ್ಲ...'

'ಮೊನ್ನೆ ನಮ್ ರಾಗಾ ಸಾಹೇಬ್ರು ಡೆಲ್ಲೀಲಿ ಜಹಾಂಗೀರು, ಲಾಡು ಎಷ್ಟ್ ಚೆನ್ನಾಗಿ ಮಾಡಿದ್ರು ಗೊತ್ತಾ?'

'ಅದ್ಕೇ ಮಾಡಲ್ಲ, ಅದಿರ್ಲಿ, ನಿಮ್ ರಾಗಾ ಸಾಹೇಬ್ರಿಗೆ ಕೇಸರಿಬಾತ್ ಮಾಡಾಕೆ ಬರುತ್ತಾ?'

'ಬರುತ್ತೆ, ಆದ್ರೆ ಮಾಡಲ್ಲ... ಅದು ಕಮಲ ಪಕ್ಷದ್ದು. ನಮ್ಮದೇನಿದ್ರೂ 'ಕೈ'ಸರಿ ಬಾತ್! ನಾವೇಳಿದ್ದೇ ಸರಿ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಹೆಚ್ಚುತ್ತಲೇ ಇದೆ 'ಅಪ್ರಾಮಾಣಿಕತೆಯ ಸೂಚ್ಯಂಕ'

ಸರ್ಕಾರಿ ಯೋಜನೆಗಳಲ್ಲಿನ ಲೋಪದೋಷಗಳು ಆಡಳಿತದ ವೈಫಲ್ಯವನ್ನು ಸೂಚಿಸುವಂತೆಯೇ, ಸಮಾಜದಲ್ಲಿನ ಅಪ್ರಾಮಾಣಿಕತೆಯ ಸಂಕೇತವೂ ಆಗಿವೆ.

• ಹರೀಶ್ ಕುಮಾರ್ ಕುಡ್ತಡ್ಕ

ಅಂತ್ಯೋದಯ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಫಲಾನುಭವಿಗಳಿಗೆ ಇನ್ನು ಮುಂದೆ 5 ಕೆ.ಜಿ. ಅಕ್ಕಿ ಜೊತೆಗೆ, 'ಇಂದಿರಾ ಆಹಾರ ಕಿಟ್' ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದರಿಂದ 10 ಕೆ.ಜಿ. ಬದಲು ಐದು ಕೆ.ಜಿ. ಅಕ್ಕಿ ಮಾತ್ರ ದೊರಕಲಿದ್ದು, ಅದರೊಂದಿಗೆ ತೊಗರಿ ಬೇಳೆ, ಅಡುಗೆ ಎಣ್ಣೆ, ಸಕ್ಕರೆ ಮತ್ತು ಉಪ್ಪು ಒಳಗೊಂಡ ಕಿಟ್ ಸಿಗಲಿದೆ. ಸರ್ಕಾರ ಯಾಕೆ ಈ ಬದಲಾವಣೆಗೆ ಮುಂದಾಯಿತು?

ಪ್ರಸ್ತುತ ಕೆಲವು ಕುಟುಂಬಗಳು 40ರಿಂದ 50 ಕೆ.ಜಿ. ಅಕ್ಕಿ ಪಡೆಯುತ್ತಿವೆ. ಈ ಪಡಿತರ ಕುಟುಂಬದ ಅಗತ್ಯಕ್ಕಿಂತಲೂ ಹೆಚ್ಚಾಗಿದ್ದು, ಮಿಗುವ ಅಕ್ಕಿಯು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಅಕ್ಕಿ ಹೆಚ್ಚಾಗುವುದರಿಂದ ಸೌಲಭ್ಯ ದುರುಪಯೋಗವಾಗಿರುವುದು ನಿಜ. ಇದಕ್ಕಿಂತ ಮುಖ್ಯವಾಗಿ, ರಾಜ್ಯದಲ್ಲಿ ನಕಲಿ ಬಿಪಿಎಲ್ ಕಾರ್ಡ್‌ಗಳೂ ದೊಡ್ಡ ಸಂಖ್ಯೆಯಲ್ಲಿವೆ. ಇವುಗಳಿಂದ ಸರ್ಕಾರದ ಖಜಾನೆಗೆ ಅಧಿಕ ಹೊರೆ ಬಿದ್ದಿದೆ. 'ಇಂದಿರಾ ಕಿಟ್' ಪರಿಚಯಿಸುತ್ತಿರುವುದು ಹೊರೆ ಇಳಿಸಿಕೊಳ್ಳುವ ಪ್ರಯತ್ನ.

ಕೇಂದ್ರ ಸರ್ಕಾರದ ನೀತಿ ಆಯೋಗದ ಪ್ರಕಾರ, ರಾಜ್ಯದಲ್ಲಿ ಬಡತನ ಪ್ರಮಾಣ ಇಳಿಕೆಯಾಗಿದ್ದು, ಜನಸಂಖ್ಯೆಯ ಶೇ 5.67ರಷ್ಟು ನಾಗರಿಕರು ಮಾತ್ರ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಲು ಅರ್ಹರು. ಆದರೆ, ರಾಜ್ಯದಲ್ಲಿ 1.47 ಕೋಟಿ ಬಿಪಿಎಲ್ ಕುಟುಂಬಗಳಿದ್ದು, ಆ ಕುಟುಂಬಗಳು 4.67 ಕೋಟಿ ಜನಸಂಖ್ಯೆಯನ್ನು ಒಳಗೊಂಡಿವೆ. ಅಂದರೆ, ಒಟ್ಟು ಜನಸಂಖ್ಯೆಯ ಶೇ 80ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದಾಗುತ್ತದೆ.

ಬಿಪಿಎಲ್ ಕಾರ್ಡೆನ್ನುವುದು ಉಚಿತ ಅಕ್ಕಿಗೆ ಸೀಮಿತವಾದುದಲ್ಲ. ಒಂದು ರೀತಿಯಲ್ಲಿ ಈ ಕಾರ್ಡ್, ಸರ್ಕಾರದ ವಿವಿಧ ಯೋಜನೆಯಡಿ ಸವಲತ್ತುಗಳನ್ನು ಪಡೆಯಲು ಪರವಾನಗಿ ಇದ್ದಂತೆ. ಈ ಕಾರ್ಡುದಾರರು ಉಚಿತ ವೈದ್ಯಕೀಯ ಸೌಲಭ್ಯ, ಕುಟುಂಬದ ಮಕ್ಕಳಿಗೆ ವಿದ್ಯಾರ್ಥಿ ವೇತನ ಸಹಿತ ಅನೇಕ ಯೋಜನೆಗಳ ಸೌಲಭ್ಯ ಪಡೆಯಬಹುದು. ಹಾಗಾಗಿ, ದೊಡ್ಡ ಸಂಖ್ಯೆಯಲ್ಲಿರುವ ಬೋಗಸ್ ಕಾರ್ಡ್‌ಗಳಿಂದ ಸರ್ಕಾರಕ್ಕೆ ದೊಡ್ಡ ಪ್ರಮಾಣದ ನಷ್ಟ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಯಾವುದೋ ಒಂದು ಸೌಲಭ್ಯವನ್ನು ಒಂದು ಬಾರಿ ನೀಡಿ, ಇನ್ನೊಂದು ಹಂತದಲ್ಲಿ ರದ್ದುಗೊಳಿಸುವುದು ಸರ್ಕಾರಕ್ಕೆ ಸವಾಲಿನ ಸಂಗತಿ. ಬಿಪಿಎಲ್ ಕಾರ್ಡ್‌ಗಳಿಗೆ ಸಂಬಂಧಿಸಿದಂತೆ ಪ್ರಾರಂಭದಲ್ಲಿಯೇ ಎಚ್ಚರವಹಿಸಿದ್ದರೆ ಈ ಸಮಸ್ಯೆ ಉಂಟಾಗುತ್ತಿರಲಿಲ್ಲ. ಅರ್ಹರ ಜೊತೆಗೆ ಅನರ್ಹರಿಗೂ ಕಾರ್ಡ್ ನೀಡಿರುವುದು ಸರ್ಕಾರದ ಆಡಳಿತಾತ್ಮಕ ವೈಫಲ್ಯ. ಆದರೆ, ಈ ಲೋಪದಲ್ಲಿ ನಾಗರಿಕರ ಪಾತ್ರವೂ ಇದೆಯಲ್ಲವೇ? ಬೋಗಸ್ ಬಿಪಿಎಲ್ ಕಾರ್ಡ್‌ಗಳು ಒಂದು ರೀತಿಯಲ್ಲಿ ಸಮಾಜದಲ್ಲಿನ 'ಅಪ್ರಾಮಾಣಿಕತೆಯ ಸೂಚ್ಯಂಕ' ಎಂದರೆ ತಪ್ಪಾಗಲಾರದು.

ಸಮಾಜದಲ್ಲಿನ ಅಪ್ರಾಮಾಣಿಕತೆ ಹಲವು ರೂಪಗಳದು. ಸರ್ಕಾರಿ ಹುದ್ದೆಗಳನ್ನು ಪಡೆಯಬೇಕೆಂದು ಉದ್ಯೋಗಾಕಾಂಕ್ಷಿಗಳು ಕನಸು ಕಾಣುವುದು ಸಹಜ. ಉದ್ಯೋಗಾವಕಾಶಗಳು ಕಡಿಮೆಯಾಗಿರುವ ಇಂದಿನ ದಿನಗಳಲ್ಲಿ ಸ್ಪರ್ಧೆಯೂ ತೀವ್ರವಾಗಿದೆ. ಇಂಥ ಸಂದರ್ಭದಲ್ಲಿ ಕೆಲವರು ಅಡ್ಡಹಾದಿ ತುಳಿದು ಉದ್ಯೋಗ ಗಿಟ್ಟಿಸಿಕೊಳ್ಳುವ ಮೂಲಕ, ಯೋಗ್ಯರ ಅನ್ನದ ಬಟ್ಟಲಿಗೆ ಕಲ್ಲು ಹಾಕುತ್ತಾರೆ. ಮೀಸಲಾತಿ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗದ ಜಾತಿಗಳ ನಕಲಿ ಪ್ರಮಾಣಪತ್ರ ಸಲ್ಲಿಸುವವರು, ನಕಲಿ ಅಂಕಪಟ್ಟಿ, ಪ್ರಮಾಣಪತ್ರ ಸಲ್ಲಿಸುವವರು ನಮ್ಮ ಸುತ್ತಮುತ್ತಲೇ ಇರುತ್ತಾರೆ. ಕೆಲವರು ನೌಕರಿಗೆ ಸೇರಿ ಎಷ್ಟೋ ಕಾಲದ ನಂತರ ಸಿಕ್ಕಿಬೀಳುತ್ತಾರೆ. ಹಲವರು ಯಶಸ್ವಿಯಾಗಿ ಪೂರ್ತಿ ಸೇವೆ ಮುಗಿಸಿ ನಿವೃತ್ತರಾಗುತ್ತಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷೆಗಿಂತ ಮುಂಚಿತವಾಗಿ ಕಳ್ಳದಾರಿಯಲ್ಲಿ ಪಡೆಯುವುದು, ಪರೀಕ್ಷೆಯಲ್ಲಿ ನಕಲು ಹೊಡೆದು ಹುದ್ದೆ ಗಿಟ್ಟಿಸುವುದು ಕೂಡ ಅಪ್ರಾಮಾಣಿಕತೆಯ ಮಾದರಿಗಳೇ ಆಗಿವೆ. ನಮಗೆ ಅರ್ಹತೆ ಇಲ್ಲದ್ದಕ್ಕೆ ಹಂಬಲಿಸುವುದು, ಯೋಗ್ಯರ ಅವಕಾಶ ಕಸಿದುಕೊಳ್ಳುವುದು ಆತ್ಮವಂಚನೆಯ ನಡೆ ಮಾತ್ರವಲ್ಲ, ಅಪರಾಧವೂ ಹೌದು. ಕೆಲವರು ತಿಳಿದೂ ತಿಳಿದು ಅನ್ಯಾಯದ ದಾರಿಯಲ್ಲಿ ನಡೆಯುವುದು ಆತಂಕದ ವಿಚಾರ.

ಸವಲತ್ತುಗಳನ್ನು ನೀಡುವಾಗ ಸರ್ಕಾರ ಎಚ್ಚರಿಕೆ ವಹಿಸಬೇಕು; ಷರತ್ತುಗಳ ಪಾಲನೆಯಾಗಿದೆಯೇ ಎನ್ನುವುದನ್ನು ಖಾತರಿಪಡಿಸಿಕೊಳ್ಳಬೇಕು. ಇದರ ಜೊತೆಗೆ ಜನರೂ ವಂಚನೆಯ ಹಾದಿ ತುಳಿಯದಿರುವುದು ಅಗತ್ಯ. ಸುಳ್ಳು ಮಾಹಿತಿಗಳನ್ನು ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವುದು ಜವಾಬ್ದಾರಿಯುತ ನಾಗರಿಕರ ಲಕ್ಷಣವಲ್ಲ. ಯೋಗ್ಯರಿಗೆ ದೊರೆಯಬೇಕಾದ ಸವಲತ್ತು ಅಥವಾ ಅವಕಾಶವನ್ನು ದುರಾಸೆಯಿಂದ ಕಿತ್ತುಕೊಳ್ಳುವುದು ಅನ್ಯಾಯ. ನೈತಿಕ ಪ್ರಶ್ನೆಗಳು ನಮ್ಮನ್ನು ಬಾಧಿಸದೇ ಹೋದರೆ, ಅಂತಿಮವಾಗಿ ನಮ್ಮ ನಾಡು–ದೇಶ ಸೋಲುವುದು ನಿಶ್ಚಿತ.

ಅರಿವಿಲ್ಲದೆ ಅಥವಾ ಮಾಹಿತಿಯ ಕೊರತೆಯಿಂದ ಆಗುವ ತಪ್ಪುಗಳನ್ನು ಕ್ಷಮಿಸಬಹುದು. ಉದ್ದೇಶಪೂರ್ವಕವಾಗಿ ಮಾಡುವ ವಂಚನೆ, ತಪ್ಪುಗಳಿಗೆ ಕ್ಷಮೆ ಇದೆಯೇ? ಎಲ್ಲವನ್ನೂ ಸರ್ಕಾರವೇ ಮಾಡಬೇಕು, ತಪ್ಪುಗಳನ್ನೂ ಸರ್ಕಾರವೇ ಕಂಡುಹಿಡಿಯಬೇಕು ಎಂದರೆ, ಪ್ರಜೆಗಳಾಗಿರುವ ನಮ್ಮ ಜವಾಬ್ದಾರಿ ಏನು?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮರಣದಂಡನೆ: ಯಾವುದು ‘ಮಾನವೀಯ’ ವಿಧಾನ?

ಭಾರತದಲ್ಲಿ ಮರಣದಂಡನೆ ವಿಧಿಸಲಾಗಿರುವ ಅಪರಾಧಿಗಳಿಗೆ ಯಾವ ವಿಧಾನದ ಮೂಲಕ ಪ್ರಾಣಹರಣ ಮಾಡಬೇಕು ಎನ್ನುವುದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದ್ದು, ಚರ್ಚೆಗೆ ಗ್ರಾಸವಾಗಿದೆ. ಗಲ್ಲಿಗೇರಿಸುವುದರ ಬದಲು ವಿಷದ ಇಂಜೆಕ್ಷನ್ ನೀಡುವ ಮೂಲಕ ಅಪರಾಧಿ ಸಾಯುವಂತೆ ಮಾಡಬೇಕು ಎನ್ನುವ ವಾದ ಕೇಳಿಬಂದಿದೆ. ಆದರೆ, ಕೇಂದ್ರ ಸರ್ಕಾರವು ಈ ವಿಚಾರದಲ್ಲಿ ಯಾವ ಬದಲಾವಣೆಗೂ ಸಿದ್ಧವಿರುವಂತೆ ಕಾಣುತ್ತಿಲ್ಲ

• ಬಿ.ವಿ.ಶ್ರೀನಾಥ್

ಮರಣದಂಡನೆಯನ್ನು ಅನೇಕ ದೇಶಗಳಲ್ಲಿ ರದ್ದುಪಡಿಸಲಾಗಿದೆ. ಭಾರತದಲ್ಲಿ ವಿರಳ ಪ್ರಕರಣಗಳಲ್ಲಿ ಮಾತ್ರವೇ ಮರಣದಂಡನೆ ವಿಧಿಸಲಾಗುತ್ತಿದೆ. ಈ ಶಿಕ್ಷೆ ವಿಧಿಸಲ್ಪಟ್ಟವರ ಪ್ರಾಣಹರಣವನ್ನು ಯಾವ ವಿಧಾನದ ಮೂಲಕ ಮಾಡಬೇಕು ಎನ್ನುವುದು ದೇಶದಲ್ಲಿ ಬಹಳ ಹಿಂದಿನಿಂದಲೂ ಚರ್ಚೆಯಾಗುತ್ತಲೇ ಇದೆ.

ಅಪರಾಧಿಗಳಿಗೆ ನೇಣು ಹಾಕುವುದು ಅತ್ಯಂತ ಕ್ರೂರ ಹಾಗೂ ಅನಾಗರಿಕ ಪದ್ಧತಿ. ಇದು ಹಳೆಯ ಹಾಗೂ ಅತ್ಯಂತ ಯಾತನಾದಾಯಕ ಪದ್ಧತಿಯಾಗಿದೆ ಎನ್ನುವ ಆಕ್ಷೇಪಣೆಗಳು ಹಿಂದೆಯೇ ಕೇಳಿಬಂದಿವೆ. ಗಲ್ಲಿಗೇರಿಸುವಾಗ ಕುತ್ತಿಗೆಯ ಮೂಳೆ ಮುರಿಯುವುದು, ಕಣ್ಣುಗುಡ್ಡೆ ಹೊರಬರುವುದು, ನಾಲಗೆ ಹೊರಚಾಚಿಕೊಂಡಿರುವುದು, ದೇಹದ ಭಾಗಗಳು ನೋಡಲಾರದಂತೆ ವಿರೂಪಗೊಳ್ಳುವುದು ಸಾಮಾನ್ಯವಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಅಪರಾಧಿಗಳು ಸಾಯಲು ದೀರ್ಘ ಸಮಯ ತೆಗೆದುಕೊಳ್ಳುತ್ತಾರೆ. ಈ ವಿಧಾನದಲ್ಲಿ ಅಪರಾಧಿಯ ಪ್ರಾಣ ಹೋಗಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಹಾಗಾಗಿ ಕ್ಷಿಪ್ರವಾದ, ಕಡಿಮೆ ಯಾತನೆಯ ಮಾರ್ಗಗಳನ್ನು ಹುಡುಕಬೇಕು. ವಿಷದ ಚುಚ್ಚುಮದ್ದನ್ನು ನೀಡುವುದು, ಗುಂಡು ಹಾರಿಸಿ ಸಾಯಿಸುವುದು, ವಿದ್ಯುತ್ ಸ್ಪರ್ಶದ ಮೂಲಕ ಸಾವು, ಸಾರಜನಕದಿಂದ ಉಸಿರುಗಟ್ಟಿಸಿ ಸಾಯುವಂತೆ ಮಾಡುವುದು... ಹೀಗೆ ಮರಣದಂಡನೆ ಜಾರಿಗೆ ಹಲವು ಪರ್ಯಾಯ ಮಾರ್ಗಗಳಿದ್ದು, ಅವುಗಳನ್ನು ಪರಿಗಣಿಸಬೇಕು ಎನ್ನುವ ಒತ್ತಾಯ ಕೇಳಿಬಂದಿದೆ.

ಗಲ್ಲು ಶಿಕ್ಷೆಯು ಸಾಂವಿಧಾನಿಕ: ಮರಣದಂಡನೆಯ ವಿಧಾನವು ನಾಲ್ಕು ಮುಖ್ಯ ಅಂಶಗಳನ್ನು ಒಳಗೊಳ್ಳಬೇಕು ಎಂದು 1983ರ ದೀನಾ ಮತ್ತು ಭಾರತ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಸಾವಿನ ವಿಧಾನವು ಸರಳವಾಗಿರಬೇಕು ಮತ್ತು ಕ್ಷಿಪ್ರವಾಗಿ ಸಾವು ತರುವಂತಿರಬೇಕು, ಅಪರಾಧಿಯು ಬೇಗ ಪ್ರಜ್ಞಾಶೂನ್ಯನಾಗಿ ಸಾವಿಗೀಡಾಗಬೇಕು, ಘನತೆಯಿಂದ ಸಾಯಬೇಕು, ದೇಹ/ಅಂಗ ವಿರೂಪಗೊಳ್ಳುವಂತೆ ಇರಬಾರದು ಎಂದು ಉನ್ನತ ನ್ಯಾಯಾಲಯ ಸೂಚಿಸಿತ್ತು. ಹೀಗಿದ್ದರೂ, ಸುಪ್ರೀಂ ಕೋರ್ಟ್ ಇದೇ ಪ್ರಕರಣದಲ್ಲಿ ಗಲ್ಲು ಶಿಕ್ಷೆಯ ವಿಧಾನದ ಸಾಂವಿಧಾನಿಕತೆಯನ್ನು ಎತ್ತಿಹಿಡಿದಿತ್ತು, ದೇಶದಲ್ಲಿ ಗಲ್ಲು ಶಿಕ್ಷೆಯೊಂದೇ ಮರಣದಂಡನೆಯ ಜಾರಿ ವಿಧಾನ ಎಂದು ಸ್ಪಷ್ಟಪಡಿಸಿತ್ತು. ವಿಷದ ಇಂಜೆಕ್ಷನ್ ಮೂಲಕ ಪ್ರಾಣಹರಣ ಮಾಡುವ ವಿಧಾನವು ಎಲ್ಲ ಸಂದರ್ಭಗಳಲ್ಲಿಯೂ ಕ್ಷಿಪ್ರವಾಗಿ ಸಾವು ತರುತ್ತದೆ ಎನ್ನುವುದಕ್ಕೆ ಆಧಾರವಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು.

ಆದರೆ, ಗಲ್ಲಿಗೇರಿಸುವ ವಿಧಾನವನ್ನು ಪುನರ್ ಪರಿಶೀಲಿಸಬೇಕು ಎಂದು ಭಾರತದ ಕಾನೂನು ಆಯೋಗವು 2003ರಲ್ಲಿ ಸೂಚಿಸಿತು. ಇದು ಹೆಚ್ಚು ಮಾನವೀಯವಾಗಿದ್ದು, ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಈ ವಿಧಾನವನ್ನು ಬಳಸಲಾಗುತ್ತಿದೆ ಎನ್ನುವುದು ಆಯೋಗದ ಅಭಿಪ್ರಾಯವಾಗಿತ್ತು.

ಗಲ್ಲು ಏಕೆ ಬೇಡ?: 2017ರಲ್ಲಿ ಹಿರಿಯ ವಕೀಲ ರಿಷಿ ಮಲ್ಹೋತ್ರಾ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿ, ನೇಣಿಗೆ ಬದಲು ಮರಣದಂಡನೆಗೆ ಪರ್ಯಾಯ ಮಾರ್ಗ ಅನುಸರಿಸಲು ಆದೇಶಿಸಬೇಕು ಎಂದು ಕೋರಿದರು. ಗಲ್ಲಿಗೇರಿಸಿದರೆ, ಅವರ ದೇಹವು ನೇಣು ಹಗ್ಗದಲ್ಲಿಯೇ 40 ನಿಮಿಷಗಳವರೆಗೆ ಇರುತ್ತದೆ; ಅದು ಕ್ರೂರ ಮತ್ತು ಬರ್ಬರ. ಅದರ ಬದಲು ಮಾನವೀಯವಾದ, ಘನತೆಯಿಂದ ಕೂಡಿದ ವಿಷದ ಚುಚ್ಚುಮದ್ದಿನ ಮಾರ್ಗ ಅನುಸರಿಸುವುದು ಉತ್ತಮ. ಸಂವಿಧಾನದ 21ನೇ ವಿಧಿಯು ಜೀವಿಸುವ ಹಕ್ಕು ಮತ್ತು ಘನತೆಯ ಹಕ್ಕುಗಳನ್ನು ಒಳಗೊಂಡಿರುವಂತೆಯೇ ಘನತೆಯಿಂದ ಸಾಯುವ ಹಕ್ಕನ್ನೂ ನೀಡಿದೆ; ಅಮೆರಿಕದ ಹೆಚ್ಚಿನ ರಾಜ್ಯಗಳಲ್ಲಿ ವಿಷದ ಇಂಜೆಕ್ಷನ್ ನೀಡುವ ಪದ್ಧತಿ ಇದೆ ಎನ್ನುವುದು ಅವರ ವಾದ.

ನೇಣಿಗೇರಿಸುವುದಕ್ಕಿಂತ ಇತರ ಮಾರ್ಗಗಳು ಕಡಿಮೆ ಯಾತನಾದಾಯಕ ಎನ್ನುವುದನ್ನು ನಿರಾಕರಿಸಿದ್ದ ಕೇಂದ್ರ ಸರ್ಕಾರವು, ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ 2018ರಲ್ಲಿ ತನ್ನ ನಿಲುವು ಸ್ಪಷ್ಟಪಡಿಸಿತ್ತು. ಇದರ ಬಗ್ಗೆ ತಜ್ಞರ ಸಮಿತಿ ರಚನೆಗೆ ಕ್ರಮ ಕೈಗೊಳ್ಳಬೇಕು ಎಂದು 2023ರಲ್ಲಿ ತಿಳಿಸಿದ್ದ ನ್ಯಾಯಾಲಯವು, ಈ ಕುರಿತು ಸಮಗ್ರ ಮಾಹಿತಿ ಒದಗಿಸುವಂತೆ ಕೇಂದ್ರವನ್ನು ಕೇಳಿತ್ತು. ಆದರೆ, ಅಪರಾಧಿಗಳಿಗೆ ಶಿಕ್ಷೆ ನೀಡುವ ವಿಧಾನದ ಬಗ್ಗೆ ನ್ಯಾಯಾಂಗವು ಶಾಸಕಾಂಗಕ್ಕೆ ನಿರ್ದೇಶಿಸಲಾಗದು ಎಂದು ಅಭಿಪ್ರಾಯಪಟ್ಟಿತ್ತು.

ಬದಲಾಗದ ಕೇಂದ್ರದ ಧೋರಣೆ: ತಾನು ಯಾವ ವಿಧಾನದ ಮೂಲಕ ಸಾಯಬೇಕು ಎನ್ನುವ ಆಯ್ಕೆಯನ್ನು ಮರಣದಂಡನೆ ವಿಧಿಸಲ್ಪಟ್ಟಿರುವ ಅಪರಾಧಿಗೇ ನೀಡಬೇಕು ಎನ್ನುವುದು ಮಲ್ಹೋತ್ರಾ ಅವರ ವಾದ. ಆದರೆ, ಅದು ಕಾರ್ಯಸಾಧುವಲ್ಲ ಎಂದು ಕೇಂದ್ರವು ಪ್ರತಿಕ್ರಿಯಿಸಿದೆ.

ಪ್ರಸ್ತುತ ಈ ಕುರಿತ ವಾದ–ಪ್ರತಿವಾದ ನಡೆಯುತ್ತಿದ್ದು, ನ್ಯಾಯಾಲಯ ವಿಚಾರಣೆ ಮುಂದುವರಿಸುತ್ತಿದೆ. ಕಾಲ ಬದಲಾಗಿದೆ; ಅದಕ್ಕೆ ತಕ್ಕಂತೆ ಕೇಂದ್ರ ಸರ್ಕಾರದ ಮನೋಭಾವವು ವಿಕಾಸಗೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಸೂಚ್ಯವಾಗಿ ಹೇಳಿದೆ. ಇನ್ನೊಂದೆಡೆ, ಮರಣದಂಡನೆಯೇ ಅಮಾನವೀಯ ಶಿಕ್ಷಾ ಪದ್ಧತಿಯಾಗಿದ್ದು, ಅದನ್ನು ರದ್ದುಪಡಿಸಬೇಕು ಎನ್ನುವ ಬೇಡಿಕೆ ಇದೆ.

ಆಧಾರ: ಪಿಟಿಐ, ಎಎಫ್‌ಪಿ, ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ಎಥಿಕ್ಸ್, ಅಮ್ನೆಸ್ಟಿ ಇಂಟರ್‌ನ್ಯಾಷನಲ್, ದೆಹಲಿಯ ನ್ಯಾಷನಲ್ ಲಾ ಕಾಲೇಜ್ ಯೂನಿವರ್ಸಿಟಿ ವರದಿ

ಮರಣದಂಡನೆಗೆ ಗುರಿಯಾಗಿರುವವರು

120 ಭಾರತದಲ್ಲಿ ಮರಣದಂಡನೆ ವಿಧಿಸಲ್ಪಟ್ಟವರ ಸಂಖ್ಯೆ (2023)	**139** ಭಾರತದಲ್ಲಿ ಮರಣದಂಡನೆ ವಿಧಿಸಲ್ಪಟ್ಟವರ ಸಂಖ್ಯೆ (2024)	**564** ಮರಣದಂಡನೆ ಜಾರಿಗಾಗಿ ಎದುರುನೋಡುತ್ತಾ ಭಾರತದ ಜೈಲುಗಳಲ್ಲಿ ಇರುವವರ ಸಂಖ್ಯೆ
28,085 ಜಗತ್ತಿನಲ್ಲಿ ಮರಣದಂಡನೆ ವಿಧಿಸಲ್ಪಟ್ಟವರ ಸಂಖ್ಯೆ (2024ರ ಅಂತ್ಯಕ್ಕೆ)	**2,087** 2024ರಲ್ಲಿ 46 ದೇಶಗಳಲ್ಲಿ ಮರಣದಂಡನೆ ವಿಧಿಸಲ್ಪಟ್ಟವರ ಸಂಖ್ಯೆ	**1,518** 2024ರಲ್ಲಿ ಮರಣದಂಡನೆ ಶಿಕ್ಷೆ ಜಾರಿಯಿಂದ ಸಾವಿಗೀಡಾದವರ ಸಂಖ್ಯೆ

32% 2023ಕ್ಕಿಂತ 2024ರಲ್ಲಿ ಜಗತ್ತಿನಲ್ಲಿ ಮರಣದಂಡನೆಯಿಂದ ಸಾವಿಗೀಡಾದವರ ಪ್ರಮಾಣ ಹೆಚ್ಚಳ

ಭಾರತದಲ್ಲಿ ಹೆಚ್ಚು

ಜಗತ್ತಿನಲ್ಲಿ ಅತಿ ಹೆಚ್ಚು ಮರಣದಂಡನೆ ವಿಧಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಅದರಲ್ಲೂ ಕೆಳಹಂತದ ನ್ಯಾಯಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಮರಣದಂಡನೆ ವಿಧಿಸುತ್ತಿವೆ. ಮರಣದಂಡನೆ ವಿಧಿಸಲ್ಪಟ್ಟ ಪ್ರತಿ ನಾಲ್ವರಲ್ಲಿ ಒಬ್ಬರು ಉತ್ತರ ಪ್ರದೇಶಕ್ಕೆ (130) ಸೇರಿದವರು. ನಂತರದ ಸ್ಥಾನಗಳಲ್ಲಿ ಗುಜರಾತ್ (71), ಮಹಾರಾಷ್ಟ್ರ (42), ಹರಿಯಾಣ (38), ಪಶ್ಚಿಮ ಬಂಗಾಳ (37), ಕೇರಳ (35), ಮಧ್ಯಪ್ರದೇಶ ಇವೆ. ಕರ್ನಾಟಕದಲ್ಲಿ 22 ಮಂದಿಗೆ ಈ ಶಿಕ್ಷೆ ವಿಧಿಸಲಾಗಿದ್ದು, ಜೈಲುವಾಸ ಅನುಭವಿಸುತ್ತಿದ್ದಾರೆ. ಪ್ರಸ್ತುತ ಭಾರತದ ವಿವಿಧ ಜೈಲುಗಳಲ್ಲಿ ಮರಣದಂಡನೆ ವಿಧಿಸಲ್ಪಟ್ಟ 564 ಮಂದಿ (2024ರ ಕೊನೆಗೆ) ಇದ್ದು, ಶಿಕ್ಷೆ ಜಾರಿಯನ್ನು ಎದುರು ನೋಡುತ್ತಿದ್ದಾರೆ. ಇದು ಎರಡು ದಶಕಗಳಲ್ಲಿಯೇ ಅತಿ ದೊಡ್ಡ ಸಂಖ್ಯೆಯಾಗಿದೆ.

2024ರಲ್ಲಿ ಮರಣದಂಡನೆಗೆ ಬಳಸಿದ ವಿಧಾನಗಳು

ಶಿರಚ್ಛೇದ ಸೌದಿ ಅರೇಬಿಯಾ

ನೇಣು ಈಜಿಪ್ಟ್, ಇರಾನ್, ಇರಾಕ್, ಕುವೈತ್, ಸಿಂಗಪುರ, ಸಿರಿಯಾ

ವಿಷದ ಇಂಜೆಕ್ಷನ್ ಚೀನಾ, ಅಮೆರಿಕ, ವಿಯೆಟ್ನಾಂ

ಗುಂಡು ಹಾರಿಸಿ ಸಾವು ಅಫ್ಗಾನಿಸ್ತಾನ, ಚೀನಾ, ಉತ್ತರ ಕೊರಿಯಾ, ಓಮನ್, ಸೊಮಾಲಿಯಾ, ಯೆಮನ್

ಸಾರಜನಕದಿಂದ (ನೈಟ್ರೊಜನ್) ಉಸಿರುಕಟ್ಟಿಸುವುದು ಅಮೆರಿಕ

ಮರಣದಂಡನೆ ಹೆಚ್ಚಳ

ಜಗತ್ತಿನ ಶೇ 70ರಷ್ಟು ರಾಷ್ಟ್ರಗಳಲ್ಲಿ ಮರಣದಂಡನೆಯನ್ನು ರದ್ದುಪಡಿಸಲಾಗಿದೆ. ಆದರೂ, ಸುಮಾರು 50 ದೇಶಗಳಲ್ಲಿ ಈ ಶಿಕ್ಷೆ ಕಾನೂನುಬದ್ಧವಾಗಿದೆ. ಇದರಲ್ಲಿ ಭಾರತ, ಅಮೆರಿಕ, ಚೀನಾ, ಅಫ್ಗಾನಿಸ್ತಾನ, ಬಾಂಗ್ಲಾದೇಶ, ಪಾಕಿಸ್ತಾನ, ಜಪಾನ್, ಇರಾನ್, ಇರಾಕ್, ಸೌದಿ ಅರೇಬಿಯಾ, ಥಾಯ್ಲೆಂಡ್ ಮುಂತಾದ ದೇಶಗಳಿವೆ. 2024ರಲ್ಲಿ ಚೀನಾ, ಇರಾನ್, ಸೌದಿ ಅರೇಬಿಯಾ, ಇರಾಕ್, ಯೆಮನ್‌ನಲ್ಲಿ ಹೆಚ್ಚು ಮಂದಿಗೆ ಮರಣದಂಡನೆ ವಿಧಿಸಲಾಗಿದೆ.

ಚೀನಾದಲ್ಲಿ ಅತಿ ಹೆಚ್ಚು ಮಂದಿಗೆ ಸಾವಿನ ಶಿಕ್ಷೆ ನೀಡಲಾಗಿದೆ.ಹೆಚ್ಚು ರಾಷ್ಟ್ರಗಳಲ್ಲಿ ಮರಣದಂಡನೆ ರದ್ದುಪಡಿಸಲಾಗುತ್ತಿದೆಯಾದರೂ ಈ ಶಿಕ್ಷೆಗೆ ಗುರಿಯಾಗುತ್ತಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸೌದಿ ಅರೇಬಿಯಾದಲ್ಲಿ ಶಿಕ್ಷೆಯ ಪ್ರಮಾಣವು ಹೆಚ್ಚಾಗುತ್ತಿದ್ದು, 2025ರಲ್ಲಿ ಜಾಗತಿಕ ಮಟ್ಟದಲ್ಲಿ ಈ ಸಂಖ್ಯೆ ಇನ್ನೂ ಏರಿಕೆ ಕಾಣಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಅಮೆರಿಕದಲ್ಲಿ ಪ್ರಸಕ್ತ ವರ್ಷ 39 ಮಂದಿಯನ್ನು ಮರಣದಂಡನೆಗೆ ಈಡು ಮಾಡಲಾಗಿದೆ. ಅವುಗಳಲ್ಲಿ 33 ಮಂದಿಗೆ ವಿಷದ ಇಂಜೆಕ್ಷನ್ ನೀಡಿ, ಇಬ್ಬರಿಗೆ ಗುಂಡು ಹೊಡೆದು, ನಾಲ್ವರ ಮಾಸ್ಕ್‌ಗಳ ಒಳಗೆ ಸಾರಜನಕ ಪೂರೈಸಿ ಉಸಿರುಗಟ್ಟಿಸಿ ಸಾಯಿಸಲಾಗಿದೆ. ಸಾರಜನಕದಿಂದ ಉಸಿರುಗಟ್ಟಿಸುವ ವಿಧಾನವು ಕ್ರೂರ ಮತ್ತು ಅಮಾನವೀಯ ಎಂದು ವಿಶ್ವಸಂಸ್ಥೆ ಆಕ್ಷೇಪಿಸಿದೆ. ಅಮೆರಿಕದ 50 ರಾಜ್ಯಗಳ ಪೈಕಿ 23ರಲ್ಲಿ ಮರಣದಂಡನೆಯನ್ನು ರದ್ದುಪಡಿಸಲಾಗಿದೆ.

ವೈದ್ಯರ ವಿರೋಧ

ಗಲ್ಲು ಶಿಕ್ಷೆಯ ವಿಧಾನದಲ್ಲಿ, ಅಪರಾಧಿ ಸತ್ತಿದ್ದಾನೆಯೇ ಇಲ್ಲವೇ ಎನ್ನುವುದನ್ನು ದೃಢೀಕರಿಸುವುದಕ್ಕಷ್ಟೇ ವೈದ್ಯರ ಪಾತ್ರವು ಸೀಮಿತವಾಗಿರುತ್ತದೆ. ಆದರೆ, ವಿಷದ ಇಂಜೆಕ್ಷನ್ ಚುಚ್ಚುವ ವಿಧಾನದಲ್ಲಿ ವೈದ್ಯರೇ ಮರಣದಂಡನೆ ಜಾರಿ ಮಾಡುವವರೂ ಆಗಿರುತ್ತಾರೆ. ಹಲವು ದೇಶಗಳಲ್ಲಿ ವೈದ್ಯರು ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ವೈದ್ಯರ ಕಾರ್ಯವು ಜೀವ ಉಳಿಸುವುದೇ ವಿನಾ ಜೀವ ತೆಗೆಯುವುದಲ್ಲ ಎನ್ನುವುದು ಅವರ ವಾದ. ಮರಣದಂಡನೆ ಜಾರಿಯಲ್ಲಿ ವೈದ್ಯರ ಪಾತ್ರ ಪ್ರಮುಖವಾಗಿರುವ ಯಾವುದೇ ವಿಧಾನವನ್ನು ತಾನು ವಿರೋಧಿಸುವುದಾಗಿ ಬ್ರಿಟಿಷ್ ಮೆಡಿಕಲ್ ಕೌನ್ಸಿಲ್ ಹೇಳಿತ್ತು. ವಿಶ್ವ ವೈದ್ಯಕೀಯ ಸಂಘವೂ ಇದರ ವಿರುದ್ಧ ನಿಲುವು ತಳೆದಿದೆ. ಅಮೆರಿಕದಲ್ಲಿಯೂ ಇದಕ್ಕೆ ವಿರೋಧ ವ್ಯಕ್ತವಾಗಿದೆ. ಅಮೆರಿಕದಲ್ಲಿ ವೈದ್ಯರು ಜೈಲು ಅಧಿಕಾರಿಗಳಿಗೇ ಚುಚ್ಚುಮದ್ದು ನೀಡುವ ತರಬೇತಿ ನೀಡುವ ಪದ್ಧತಿ ಅನುಸರಿಸಲಾಯಿತು. ಆದರೆ, ವೈದ್ಯರ ಅನುಪಸ್ಥಿತಿಯಲ್ಲಿ ಈ ವಿಧಾನವು ದೀರ್ಘವೂ ತ್ರಾಸದಾಯಕವೂ ಆಗಿದೆ ಎನ್ನುವ ವರದಿಗಳಿವೆ.

ರಾಷ್ಟ್ರೀಯ

ಹೊಸ ಸಿಜೆಐ ಪ್ರಕ್ರಿಯೆಗೆ ಚಾಲನೆ

ನವದೆಹಲಿ (ಪಿಟಿಐ): ಇದೇ ನವೆಂಬರ್ 23ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಅವಧಿ ಮುಕ್ತಾಯಗೊಳ್ಳುತ್ತಿದ್ದು, ಮುಂದಿನ ಸಿಜೆಐ ಆಯ್ಕೆ ಪ್ರಕ್ರಿಯೆಗೆ ಸರ್ಕಾರ ಗುರುವಾರದಿಂದ ಚಾಲನೆ ನೀಡಿದೆ.

ತಮ್ಮ ಉತ್ತರಾಧಿಕಾರಿ ಯಾರಾಗಬೇಕು ಎಂಬುದರ ಕುರಿತು ಹಾಲಿ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಜ್ಞಾಪನಾಪತ್ರ, ದಾಖಲಾತಿಗಳನ್ನು ಕಾನೂನು ಸಚಿವಾಲಯಕ್ಕೆ ಕಳುಹಿಸಬೇಕು.

ಸುಪ್ರೀಂ ಕೋರ್ಟ್‌ನಲ್ಲಿರುವ ಅತ್ಯಂತ ಹಿರಿಯ ನ್ಯಾಯಮೂರ್ತಿಯನ್ನು ಮುಂದಿನ ಸಿಜೆಐ ಆಗಿ ನೇಮಿಸಲು ಹಾಲಿ ಸಿಜೆಐ ಸಾಮಾನ್ಯವಾಗಿ ಶಿಫಾರಸು ಮಾಡುತ್ತಾರೆ. ತನ್ನ ಉತ್ತರಾಧಿಕಾರಿಯ ಕುರಿತಂತೆ ಮುಖ್ಯ ನ್ಯಾಯಮೂರ್ತಿಗಳು ಸೂಕ್ತ ಸಮಯದಲ್ಲಿ ಶಿಫಾರಸು ಕೋರಲಿದ್ದಾರೆ ಎಂದು ಕಾನೂನು ಸಚಿವಾಯವು ತಿಳಿಸಿದೆ. ಹಾಲಿ ಸಿಜೆಐ ನಿವೃತ್ತಿಯಾಗುವ ತಿಂಗಳು ಮುನ್ನ ಈ ಪತ್ರವನ್ನು ಕಳುಹಿಸುವ ಪದ್ಧತಿಯಿದೆ. ಗವಾಯಿ ನಂತರ ಸೂರ್ಯಕಾಂತ್ ಅವರೇ ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿಗಳಾಗಿದ್ದು, ದೇಶದ ನ್ಯಾಯಾಂಗ ವ್ಯವಸ್ಥೆಯ ಅತ್ಯುನ್ನತ ಹುದ್ದೆ ಅಲಂಕರಿಸುವ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ.

ಸೂರ್ಯಕಾಂತ್ ಅವರು ನವೆಂಬರ್ 24ರಂದು ಮುಂದಿನ ಸಿಜೆಐ ಆಗಿ ನೇಮಕಗೊಂಡರೆ, ಮುಂದಿನ 15 ತಿಂಗಳು ಅಥವಾ 2027ರ ಫೆಬ್ರುವರಿ 9ರ ತನಕ ಈ ಜವಾಬ್ದಾರಿ ನಿರ್ವಹಿಸಲಿದ್ದಾರೆ.

‘2029ರ ವರೆಗೂ ನಾನೇ ಸಿಎಂ’

ಪ್ರಜಾವಾಣಿ ವಾರ್ತೆ

ದೇವೇಂದ್ರ ಫಡಣವೀಸ್

ಮುಂಬೈ: ‘2029ರವರೆಗೂ ಮಹಾರಾಷ್ಟ್ರದಲ್ಲಿ ನಾನೇ ಮುಖ್ಯಮಂತ್ರಿ ಆಗಿರಲಿದ್ದೇನೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಈ ಹೇಳಿಕೆ ಮೂಲಕ ಆಡಳಿತಾರೂಢ ‘ಮಹಾಯುತಿ’ಯಲ್ಲಿ ಮೈತ್ರಿ ಪಕ್ಷಗಳಾಗಿರುವ, ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಹಾಗೂ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಗೆ ಅಧಿಕಾರ ಹಸ್ತಾಂತರ ಸಾಧ್ಯವಿಲ್ಲ ಎಂಬ ಸಂದೇಶವನ್ನು ಫಡಣವೀಸ್ ನೀಡಿದ್ದಾರೆ ಎನ್ನಲಾಗುತ್ತಿದೆ.

ರಾಷ್ಟ್ರ ರಾಜಕಾರಣಕ್ಕೆ ಫಡಣವೀಸ್ ಪದಾರ್ಪಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಅವರು, ‘ಪಕ್ಷದ ಬಗ್ಗೆ ನಾನು ತಿಳಿದಿರುವಂತೆ ಆ ವಿಚಾರ ಇನ್ನೂ ದೂರದಲ್ಲಿದೆ. ಸದ್ಯಕ್ಕೆ 2029ರವರೆಗೂ ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯಲಿದ್ದೇನೆ’ ಎಂದಿದ್ದಾರೆ.

ಫಡಣವೀಸ್ ಹೇಳಿಕೆ ಬಗ್ಗೆ ಪ್ರತಿಪಕ್ಷಗಳ ಒಕ್ಕೂಟವಾಗಿರುವ ಮಹಾ ವಿಕಾಸ ಅಘಾಡಿ ನಾಯಕರು ಕೂಡ ಟೀಕೆಗಳನ್ನು ಮಾಡಿದ್ದಾರೆ.

‘ಏಕನಾಥ ಶಿಂದೆ ಸಾಹೇಬರೊಂದಿಗೆ ನೇರವಾಗಿ ಮಾತನಾಡಲು ಸಾಧ್ಯವಾಗದೇ ಪರೋಕ್ಷವಾಗಿ ಅವರಿಗೆ ವಿಚಾರ ಮುಟ್ಟಿಸಲು ಫಡಣವೀಸ್ ಈ ಹೇಳಿಕೆ ನೀಡಿದ್ದಾರೆ. ಅಲ್ಲದೇ, ರಾಜಸ್ಥಾನ, ಮಧ್ಯಪ್ರದೇಶ, ಉತ್ತರಾಖಂಡದಲ್ಲಿ ಆದಂತೆ ಕೇಂದ್ರದ ಒತ್ತಡಕ್ಕೆ ಮಣಿದು ತಾನು ತನ್ನ ಸ್ಥಾನ ಬಿಟ್ಟು ಕೊಡುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೂ ಈ ಹೇಳಿಕೆ ಮೂಲಕವೇ ಸಂದೇಶ ನೀಡಿದ್ದಾರೆ’ ಎಂದು ಕಾಂಗ್ರೆಸ್‌ನ ಹಿರಿಯ ವಕ್ತಾರ ಸಚಿನ್ ಸಾವಂತ್ ಹೇಳಿದ್ದಾರೆ.

ಫಡಣವೀಸ್ ಅವರು ತಮ್ಮ ಇಬ್ಬರು ಉಪಮುಖ್ಯಮಂತ್ರಿಗಳಿಗೆ ಸಂದೇಶ ನೀಡಲು ಈ ಹೇಳಿಕೆ ನೀಡಿದ್ದಾರೆಯೇ ಎನ್ನುವುದನ್ನು ತಿಳಿಯಬೇಕಿದೆ ಎಂದು ಎನ್‌ಸಿಪಿ (ಎಸ್‌ಪಿ) ವಕ್ತಾರ ಕ್ಲೈಡ್ ಕ್ಯಾಸ್ಟ್ರೋ ಕೂಡ ಪ್ರತಿಕ್ರಿಯಿಸಿದ್ದಾರೆ.

ಎಐ, ಡೀಪ್‌ಫೇಕ್‌ಗೆ ನಿಯಮ ಬಿಗಿ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ದುರ್ಬಳಕೆ ತಡೆಯಲು ಮತ್ತು ‘ಡೀಪ್‌ಫೇಕ್’ಗಳನ್ನು ನಿಯಂತ್ರಿಸಲು ಸರ್ಕಾರ ಮಾಹಿತಿ ತಂತ್ರಜ್ಞಾನ (ಐಟಿ) ನಿಯಮದಲ್ಲಿ ಬದಲಾವಣೆ ತರುವುದಾಗಿ ಹೇಳಿದೆ.

‘ಎಐ’ ಬಳಸಿಕೊಂಡು ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಮಾಹಿತಿ ಹರಡುವುದು ಹೆಚ್ಚುತ್ತಿದ್ದು, ಜನರನ್ನು ದಾರಿ ತಪ್ಪಿಸಲು, ಚುನಾವಣಾ ಅಕ್ರಮಗಳಿಗೆ, ಹಣಕಾಸು ವಂಚನೆಗಳಿಗೆ ಎಐ ದುರ್ಬಳಕೆ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಐಟಿ ನಿಯಮಗಳನ್ನು ಬಿಗಿಗೊಳಿಸುತ್ತಿರುವುದಾಗಿ ಸಚಿವಾಲಯ ಹೇಳಿದೆ.

ಪ್ರಸ್ತಾವಿತ ಐಟಿ ನಿಯಮದಲ್ಲಿ ಯೂಟ್ಯೂಬ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಎಐ ಆಧಾರಿತ ಕಂಟೆಂಟ್‌ಗಳನ್ನು ಗುರುತಿಸಲು ಲೇಬಲಿಂಗ್ ಕಡ್ಡಾಯಗೊಳಿಸಲಾಗಿದೆ. ಕಂಟೆಂಟ್ ತೆಗೆದು ಹಾಕುವ ಅಧಿಕಾರವು ಉನ್ನತ ಅಧಿಕಾರಿಗಳಿಗೆ ಮಾತ್ರ ಇರುತ್ತದೆ.

ಈ ನಿಯಮವು ಜಾಲತಾಣದಲ್ಲಿ ಡೀಪ್‌ಫೇಕ್ ವಿಡಿಯೊ, ತಿದ್ದುಪಡಿ ಮಾಡಿದ ಚಿತ್ರ, ಧ್ವನಿಯನ್ನು ಪತ್ತೆಹಚ್ಚಲೂ ನೆರವಾಗಲಿದೆ. ಕರಡು ಪ್ರಸ್ತಾವಕ್ಕೆ ಆಕ್ಷೇಪಗಳಿದ್ದಲ್ಲಿ ನವೆಂಬರ್ 6ರೊಳಗೆ ದಾಖಲಿಸುವಂತೆ ಸಚಿವಾಲಯವು ಸಾಮಾಜಿಕ ಜಾಲತಾಣ, ಎಐ ಕಂಟೆಂಟ್ ಸೃಷ್ಟಿಸುವ ಸಂಸ್ಥೆಗಳಿಗೆ ಸೂಚಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಪಾಕಿಸ್ತಾನದ ವಿರುದ್ಧ ಹೋರಾಡುವುದಕ್ಕಾಗಿ ಅಫ್ಗಾನಿಸ್ತಾನದ ತಾಲಿಬಾನ್ ಆಡಳಿತಕ್ಕೆ ಭಾರತ ಹಣಕಾಸಿನ ನೆರವು ನೀಡಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಆರ್‌ಎಸ್‌ಎಸ್‌ನ ಶತಮಾನೋತ್ಸವ ಆಚರಣೆಯಲ್ಲಿ ಹೇಳಿದ್ದಾರೆ. ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನವನ್ನು ನಾಶ ಮಾಡಿ ಅಖಂಡ ಭಾರತ ನಿರ್ಮಾಣ ಮಾಡುವ ಹಿಂದುತ್ವದ ದುರಾಲೋಚನೆಯನ್ನು ಇದು ಬಯಲಿಗೆಳೆದಿದೆ’ ಎಂದು ಪ್ರತಿಪಾದಿಸುತ್ತಾ, ರಾಜನಾಥ ಸಿಂಗ್ ಮಾತನಾಡಿದ್ದಾರೆ ಎನ್ನಲಾದ ಭಾಷಣದ ವಿಡಿಯೊ ತುಣುಕನ್ನು ಮನ್ಸೂರ್ ಅಹಮದ್ ಧಿಲ್ಲೋನ್ ಎಂಬವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಹಲವರು ಇದೇ ಪ್ರತಿಪಾದನೆಯೊಂದಿಗೆ ವಿಡಿಯೊ ತುಣುಕನ್ನು ಹಂಚಿರುವುದು ಕಂಡು ಬಂತು. ಜತೆಗೆ ರಾಜನಾಥ ಸಿಂಗ್ ಅವರ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಇದೇ 18ರಂದು ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ತುಣುಕಿಗೂ ಈ ವಿಡಿಯೊಕ್ಕೂ ಹೋಲಿಕೆ ಇರುವುದು ಕಂಡು ಬಂತು. ಲಖನೌದಲ್ಲಿ ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ವಿಡಿಯೊ ಅದಾಗಿತ್ತು. ಪೋಸ್ಟ್‌ನಲ್ಲಿ ಇರುವಂತೆ ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮವಲ್ಲ. ವಿಡಿಯೊದಲ್ಲಿದ್ದ ಪೂರ್ತಿ ಭಾಷಣ ಕೇಳಿದಾಗ, ಅವರೆಲ್ಲೂ ಅಫ್ಗಾನಿಸ್ತಾನಕ್ಕೆ ನೆರವು ನೀಡಿರುವ ಬಗ್ಗೆ ಹೇಳಿಲ್ಲ. ಅನುಮಾನ ಬಂದು ವಿಡಿಯೊದಲ್ಲಿನ ಆಡಿಯೊವನ್ನು ಎಐ ಧ್ವನಿ ಪತ್ತೆ ಮಾಡುವ ರಿಸೆಂಬಲ್ ಎಐ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ತಿರುಚಿದ ಆಡಿಯೊ ಎಂಬುದು ದೃಢಪಟ್ಟಿತು. ಮೂಲ ವಿಡಿಯೊದಲ್ಲಿದ್ದ ಧ್ವನಿಯನ್ನು ತಿರುಚಿ ನಕಲಿ ಆಡಿಯೊವನ್ನು ಸೃಷ್ಟಿಸಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಹೊಗಳಿ ಅಟ್ಟಕ್ಕೇರಿಸುವುದು

ರೇಣುಕಾ ನಿಡಗುಂದಿ

‘ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ’ ಎಂದು ತನ್ನನ್ನು ಮೆಚ್ಚಿಕೊಂಡವರು ಬಣ್ಣ ಬಣ್ಣದ ಮಾತುಗಳಿಂದ ಹೊಗಳಿ ಬಣ್ಣಿಸುವ ಕ್ರಿಯೆಯನ್ನು ಹೊನ್ನಶೂಲದ ಉರುಳಿಗೆ ವ್ಯಕ್ತಿಯ ಕೊರಳನ್ನಿಕ್ಕಿ ಜೀವವನ್ನು ತೇಯುವ ಕ್ರಿಯೆಗೆ ಹೋಲಿಸಿದ್ದಾರೆ ಬಸವಣ್ಣ. ಅತಿಯಾದ ಹೊಗಳಿಕೆಗೆ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವ ಅಪಾಯವಿರುತ್ತದೆ.

ನಾವು ವಾಸಿಸುವ ನೆರೆಹೊರೆ ಅಥವಾ ಕೆಲಸ ಮಾಡುವ ಸ್ಥಳಗಳಲ್ಲಿ ಇಂತಹ ಜನರಿರುವುದನ್ನು ಕಂಡಿದ್ದೇವೆ. ಹಲವರಿಗೆ ಇನ್ನೊಬ್ಬರಿಂದ ತಮ್ಮ ಕೆಲಸವಾಗಬೇಕು ಎಂದರೆ ಅವರನ್ನು ಅತಿಶಯವಾಗಿ ಹೊಗಳಿ ತಮ್ಮ ಕೆಲಸ ಸಿದ್ಧಿಸಿಕೊಳ್ಳುತ್ತಾರೆ. ಹೊಗಳಿದರಷ್ಟೇ ಕೆಲಸವಾಗುತ್ತದೆ ಎಂದು ಇತರರಿಗೂ ಉಪದೇಶಿಸುತ್ತಾರೆ. ಇನ್ನು ಅನೇಕರಿಗೆ ತಮ್ಮನ್ನು ಏಕೆ ಹೊಗಳುತ್ತಿದ್ದಾರೆ ಎನ್ನುವುದು ಬೇಗ ಗೊತ್ತಾಗುವುದಿಲ್ಲ. ಹೊಗಳಿದಾಗ ಉಬ್ಬಿಬಿಡುತ್ತಾರೆ. ಅಲ್ಲಿಗೆ ಹೊಗಳಿದವರ ಉದ್ದೇಶ ಈಡೇರಿದಂತೆಯೇ. ತಮ್ಮನ್ನು ಹೊಗಳಿದಾಗ ಆ ಹೊಗಳಿಕೆಗೆ ತಾವು ಅರ್ಹರಾಗಿದ್ದೇವೆಯೇ ಎಂಬ ಆತ್ಮವಿಮರ್ಶೆಯಲ್ಲಿ ತೊಡಗಿಕೊಂಡರೆ ಸತ್ಯ ತಾನಾಗಿಯೇ ತಿಳಿಯುತ್ತದೆ.

ಕೆಲವರು ಹೊಗಳಿದವರ ಉದ್ದೇಶವನ್ನು ಲೆಕ್ಕಿಸದೇ ಅವರ ಹೊಗಳಿಕೆಗೆ ತಾವು ಅರ್ಹರು ಎಂದೇ ಹೆಮ್ಮೆಪಡುತ್ತಾರೆ. ಸಣ್ಣ ತೆಗಳಿಕೆಯನ್ನೂ ಸಹಿಸದ ಇವರು ಅಪಮಾನ ಹೊಂದಿದವರಂತೆ ಕುಗ್ಗುತ್ತಾರೆ. ಅಥವಾ ಹೊಗಳಿಕೆ ತಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂಬ ಆತ್ಮಜ್ಞಾನವನ್ನು ಹೊಂದುತ್ತಾರೆ.

ಇಂಥ ಆತ್ಮಜ್ಞಾನ ಬಸವಣ್ಣನವರಿಗೆ ಇದ್ದುದರಿಂದಲೇ ಅವರು ಹೊಗಳಿಕೆಯನ್ನು ಹೊನ್ನಶೂಲ ಎಂದು ಕರೆದುದು. ಶೂಲ ಹೊನ್ನಿನದಾದರೇನು, ಕಬ್ಬಿಣದ್ದಾದರೇನು? ಅದು ಉಂಟುಮಾಡುವ ನೋವಿನ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗದು. ಹೊಗಳಿಕೆಗಿಂತ ಟೀಕೆಗೆ ಬಸವಣ್ಣ ಮಹತ್ವ ಕೊಟ್ಟರು.

ಮೂರ್ಖ ಕಾಗೆ ಮತ್ತು ಕುತಂತ್ರಿ ನರಿಯ ಬಗ್ಗೆ ಈಸೋಪನ ಒಂದು ಜನಪ್ರಿಯ ಕಥೆ ನೆನಪಿರಬಹುದು. ಹಸಿದ ಕಾಗೆ ಬ್ರೆಡ್ ತುಂಡನ್ನು ಕಚ್ಚಿಕೊಂಡು ಬಂದು ಮರದ ಕೊಂಬೆಯ ಮೇಲೆ ಕುಳಿತು ಆನಂದದಿಂದ ತಿನ್ನುತ್ತಿರುತ್ತದೆ. ಅಲ್ಲಿಗೆ ಬಂದ ಹಸಿದ ನರಿ ಬ್ರೆಡ್ ತುಂಡನ್ನು ಕದಿಯಬೇಕೆಂದು ಕಾಗೆಯನ್ನು ಹೊಗಳತೊಡಗುತ್ತದೆ. ‘ಕಾಗಕ್ಕ, ನೀನೆಷ್ಟು ಚೆಂದ, ನಿನ್ನ ದನಿಯೆಷ್ಟು ಚೆಂದ, ನಿನ್ನ ದನಿಯನ್ನು ಕೇಳುವ ಆಸೆಯಾಗಿದೆ ಒಂದು ಹಾಡು ಹೇಳು’ ಎನ್ನುತ್ತದೆ. ನರಿಯ ಹೊಗಳಿಕೆಗೆ ಉಬ್ಬಿಹೋದ ಕಾಗೆ.. ಕಾ... ಕಾ ಎಂದು ಬಾಯಿ ತೆರೆಯುತ್ತದೆ. ತಕ್ಷಣ ಅದರ ಬಾಯಿಂದ ಬಿದ್ದ ಬ್ರೆಡ್ ಚೂರನ್ನು ಎತ್ತಿಕೊಂಡು ನರಿ ಓಡಿಹೋಗುತ್ತದೆ. ಆಗಲೇ ತಾನು ನರಿಯ ಮೋಸಕ್ಕೆ ಬಲಿಯಾದೆನಲ್ಲ, ಬ್ರೆಡ್ಡಿನ ಚೂರನ್ನೂ ಕಳೆದುಕೊಂಡೆನಲ್ಲ ಎಂಬ ಅರಿವಿನಿಂದ ಕಾಗೆ ದುಃಖಪಡುತ್ತದೆ.

ಈ ಕತೆಯನ್ನು ಕೇಳಿಯೇ ನಾವೆಲ್ಲರೂ ಬೆಳೆದಿದ್ದೇವೆ. ಈಗಲೂ ನಮ್ಮ ಸುತ್ತಲೂ ನರಿಯಂತಹ ಕುತಂತ್ರಿಗಳು, ಮೋಸಗಾರರು ತಮ್ಮ ಬಲೆ ಹೆಣೆಯುತ್ತಲೇ ಇರುತ್ತಾರೆ. ಇಂತಹ ಕುತಂತ್ರಿಗಳ ಬಣ್ಣದ ಮಾತಿನ ಹೊಗಳಿಕೆಗೆ ಮರುಳಾಗದೇ, ನಮ್ಮ ವಿವೇಕವನ್ನು ಕಳೆದುಕೊಳ್ಳದೇ ಇರಬೇಕು. ಹೊಗಳಿಕೆಗೆ ಮತ್ತು ತೆಗಳಿಕೆಗೆ ಪ್ರತಿಕ್ರಿಯಿಸಬೇಡ ಮೌನಿಯಾಗು, ವಿಷಯದ ಬಗ್ಗೆ ಮನನ ಮಾಡು, ದುಡುಕಬೇಡ ಎನ್ನುತ್ತಾನೆ ಕೃಷ್ಣ ಗೀತೋಪದೇಶದಲ್ಲಿ.

ಗುಂಡಣ್ಣ



ಪದಬಂಧ 6202

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಈತ ಹೆದರುವ ವ್ಯಕ್ತಿ (3)
2.ಕನ್ನಡಿಗನ ಬಾಯಲ್ಲಿ ನೈಟ್ರೋಜನ್! (5)
4.ಎದುರಿಗೆ ಮೂರ್ತೀಭವಿಸುವುದು (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ (3)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆ ದಿನದಲ್ಲೇ ಬಂದಿರುವ ಮಂತ್ರಿ (3)
11.ತಿಲಕದ ಹತ್ತಿರವಿರಿಸಿದ ಎಳ್ಳು (2)
13.ಬಿಡುವು ಹೀಗೆ ಸಿಕ್ಕಿದೆ (3)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
16.ಕಲಹ ಮಾಡುವ ಸ್ವಭಾವದವಳು (5)
17.ಶಿವನಿಗೆ ಸಲ್ಲಿಸಿದ ಮುಡಿಪು (3)

ಮೇಲಿಂದ ಕೆಳಕ್ಕೆ

1.ಹಿಂಸೆ ಮಾಡಬಾರದೆಂಬ ವ್ರತ (5)
2.ಸಾಮೂಹಿಕವಾಗಿ ಮಾಡಿದ ಕಸರತ್ತು! (2)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10.ಇದು ಪಾಪಿಗಳ ಲೋಕ (3)
12.ರಾಮನ ಮಗನಿದ್ದರೇ ಈ ಹುರುಪು! (5)
15.ತುಂಟಿಯ ಅಧರ! (2)

6201ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕನಸು 3.ಕಣಜ 5.ಸ್ವಾದ 6.ಮಗ 8.ನವಮಿ 9.ರಿವಾಜು 10.ಉದ್ಧರಿ 11.ವನಿತ 12.ಯದಾವ 14.ನಂತರ 15.ನವ 17.ಮುದ 18.ವಿವರ 19.ರಜನಿ

ಮೇಲಿಂದ ಕೆಳಕ್ಕೆ: 1.ಕದ 2.ಸುಮ 3.ಕತ್ತರಿ 4.ಜನಜನಿತ 5.ಸ್ವಾಮಿವಿವೇಕಾನಂದ 7.ಗಡಾರಿ 10.ಉದಯರವಿ 11.ವರ್ದನ 13.ವಿಚಾರ 16.ವರ 17.ಮುನಿ

ಸುಡೊಕು 6586

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						8
6			4			5		9

6585 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಅಕ್ಟೋಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತೃತೀಯ ಗಂ. 25-47 **ನಕ್ಷತ್ರ:** ಅನುರಾಧ ಆಹೋರಾತ್ರ **ಯೋಗ:** ಸೌಭಾಗ್ಯ ಗಂ. 29-55 ಕರಣ: ತೈತಿಲ ಗಂ. 12-04 ತುಲಾ ಮಾಸದ 07 ನೇ ದಿನ. ಮಳೆ ನಕ್ಷತ್ರ : ಸ್ವಾತಿ 1 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 12-00 **ಸೂರ್ಯೋದಯ :** 06-26 **ಸೂರ್ಯಾಸ್ತ :** 06-03, ಮುಸ್ಲಿಂ ದಿನಾಂಕ : 01 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ :** 4, 7

ಮೇಷ: ನಿಮ್ಮ ತೀರ್ಮಾನವೇ ಅಂತಿಮವಾಗಿರುವ ಕಾರಣ ಕೆಲವೊಂದು ವಿಷಯಗಳನ್ನು ಎರಡೆರಡು ಬಾರಿ ಪರಾಮರ್ಶಿಸಿ ನಿರ್ಧಾರಕ್ಕೆ ಬನ್ನಿ. ಪಾರಂಪರಿಕ ವೃತ್ತಿಯನ್ನು ಮುಂದುವರಿಸುವವರಿಗೆ ಶುಭಫಲ ಪ್ರಾಪ್ತಿ.

ವೃಷಭ: ಆಪ್ತರ ಮನೆಯಲ್ಲಿನ ನಡೆಯುವ ಸಮಾರಂಭಗಳಿಗೆ ಜವಾಬ್ದಾರಿ, ಓಡಾಟ ಹೆಚ್ಚಲಿದೆ. ಗಣಪತಿಯ ಪ್ರಾರ್ಥನೆ ಮಾಡದೆ ಪ್ರಾರಂಭ ಮಾಡಿದ ಕೆಲಸಗಳಿಗೆ ಹಲವು ವಿಘ್ನಗಳು ಬಂದೊದಗಬಹುದು.

ಮಿಥುನ: ಕೆಲಸಗಳನ್ನು ಒಬ್ಬರೆ ಮಾಡಬಹುದೆಂದು ಅಂದುಕೊಂಡಿರುವ ಕೆಲಸಕ್ಕೆ ಇತರರ ಸಹಾಯ ಪಡೆಯುವುದು ಅನಿವಾರ್ಯ. ಸಹೋದರರ ನಡುವಿನ ವ್ಯಾಜ್ಯಗಳು ಮನೆಯಿಂದ ಹೊರಗೆ ಹೋಗುವುದು ಸರಿಯಲ್ಲ.

ಕರ್ಕಾಟಕ: ಮಾರುಕಟ್ಟೆಯಲ್ಲಿ ವ್ಯಾಪಾರ ಅಧಿಕ ಅವಕಾಶಗಳೊಂದಿಗೆ ಶುಭಫಲ ತರಲಿದೆ. ಆಸ್ತಿಗೆ ಸಂಬಂಧಿಸಿದಂತೆ ದಾಯಾದಿಗಳ ತಂಟೆ ತಕರಾರುಗಳು ನಿಧಾನವಾಗಿ ದೂರ ಸರಿಯಲಿವೆ.

ಸಿಂಹ: ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಸಂಜೆಯ ಮುಂದೆ ತಂಗಾಳಿಯ ಜತೆ ಸ್ನೇಹಿತರೊ ಅಥವಾ ಸಂಗಾತಿಯೊಂದಿಗೆ ಕಾಲ ಕಳೆಯುವಿರಿ. ಹಳದಿ ಬಣ್ಣವು ಶುಭ ತರಲಿದೆ.

ಕನ್ಯಾ: ಮಗನ ವಿವಾಹದ ಸಿದ್ಧತೆಗಳು ಚುರುಕಾಗಿ ಮತ್ತು ಸಂಭ್ರಮದಿಂದ ಸಾಗಲಿವೆ. ಪ್ರಯಾಣದಲ್ಲಿ ಕಾಳಜಿಯ ಅಗತ್ಯವಿದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಅಥವಾ ಗ್ರಾಮ ಲೆಕ್ಕಾಧಿಕಾರಿಗಳಿಗೆ ಬಿಡುವಿಲ್ಲದ ದಿನ.

ತುಲಾ: ಸುಂದರ ದಿನದ ಉಪಸಂಹಾರಕ್ಕೆ ಬಂದಾಗ ಮರುಕಳಿಸುವುದಿಲ್ಲವೆಂಬ ತಿಳಿನೋವು ಉಂಟಾಗಬಹುದು. ಶುಭ್ರವರ್ಣದ ವಸ್ತ್ರಗಳನ್ನು ಧರಿಸಿ ಇಂದಿನ ಸಮಾರಂಭದಲ್ಲಿ ಭಾಗವಹಿಸಿದಲ್ಲಿ ಘನತೆ ಹೆಚ್ಚುವುದು.

ವೃಶ್ಚಿಕ: ಕೆಲಸಗಳಿಗೆ ಸಂಗಾತಿಯ ಸಹಕಾರ ಹಿತವೆನಿಸುತ್ತದೆ. ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಮಾತನಾಡುವ ಎದುರಾಳಿಗಳೂ ತಲೆಬಾಗುವರು. ಮಕ್ಕಳು ಬೆಳವಣಿಗೆ ಹಾದಿಯಲ್ಲಿ ದಾರಿ ತಪ್ಪುತ್ತಿದ್ದಾರೆ ಎಂಬುದನ್ನು ಗಮನಿಸಿ.

ಧನು: ವಸ್ತುಗಳಿಗಾಗಿ ಇತರರು ಆಸೆ ಪಡುತ್ತಿರುವುದು ಹಾಸ್ಯಾಸ್ಪದವಾಗಿ ಕಾಣಬಹುದು. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು. ಪ್ರೀತಿಪಾತ್ರರನ್ನು ಭೇಟಿಯಾಗುವಿರಿ.

ಮಕರ: ವ್ಯವಹರಿಸುವಾಗ ಎಲ್ಲಾ ವಿಚಾರಗಳಲ್ಲೂ ಸಾವಧಾನವಾಗಿ ಮುಂದುವರಿಯಿರಿ. ಬರವಣಿಗೆಯಿಂದಾಗಿ ಜೀವನವನ್ನು ನಡೆಸುತ್ತಿರುವವರು ವಿವಾದಾತ್ಮಕ ಹೇಳಿಕೆಯನ್ನು ನೀಡುವಂಥ ಬರಹಗಳನ್ನು ಕೈಗೆತ್ತಿಕೊಳ್ಳದಿರಿ

ಕುಂಭ: ಸದ್ಯಕ್ಕೆ ನಿಮಗೆ ಸಿಕ್ಕಿರುವ ಯಶಸ್ಸು ಅತ್ಯುನ್ನತ ಮಟ್ಟದ್ದಲ್ಲವಾದ್ದರಿಂದ ಅದನ್ನೆ ಹೆಚ್ಚು ಸಂಭ್ರಮಿಸುವ ಬದಲು ದೊಡ್ಡದ್ದಕ್ಕೆ ಪ್ರಯತ್ನ ಪಡಿ. ಕೆಲಸವನ್ನು ಕಲಿತು ಹೆಚ್ಚು ದುಡಿಮೆ ಮಾಡುತ್ತಿರುವವರನ್ನು ಕಂಡು ಅಸೂಯೆ ಪಡಿ.

ಮೀನ: ಹಲವು ದೇಹಬಾಧೆಗಳಿಂದ ಬಳಲುತ್ತಿರುವವರಿಗೆ ಅನಾರೋಗ್ಯದ ಮೇಲೆ ಬೇಸರ ಹುಟ್ಟಬಹುದು. ಯಂತ್ರೋಪಕರಣಗಳ ಸರಿಪಡಿಸುವಿಕೆ ಅಥವಾ ಬಿಡಿ ಭಾಗಗಳ ಮಾರಾಟದಿಂದ ಲಾಭ ಹೊಂದುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,868
ಇಂದಿನ ಅಂತ್ಯ:	25,891
ದಿನದ ಗರಿಷ್ಠ:	26,104
	22

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹583

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183.50
ಆರ್‌ಎಸ್‌ಎಸ್-5	₹178.50
ಗುಡ್ ಲಾಟ್	₹165.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1400 (1400)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1475 (1470)
ಪಾಮೋಲಿನ್	₹1285 (1285)

ಮುದ್ರಮನೆ ಕಾಫಿ (50 ಕೆ.ಜಿಗೆ)	
ಎಪಿ	₹30000
ಎಸಿ	₹15960
ಆರ್‌ಪಿ	₹20000
ಆರ್‌ಸಿ	₹11340

ಅಡಿಕೆ ಧಾರಣೆ

ಕುಮಟಾ		ಪುತ್ತೂರು			
ಚಾಲಿ	42669-45499	ಕೋಕ	20000-31500	ಗೊರಬಲು	19050-43899
ಚಿಪ್ಪು	21899-34669	ಶಿವಮೊಗ್ಗ		ಹೊಸತು	59036-66099
ಕೋಕ	12011-33198	ಬೆಟ್ಟೆ	71069-74669	ರಾಶಿ	41855-66009
ಹಳೆಚಾಲಿ	42625-45898			ಸರಕು	60599-74500

ಅಮೆರಿಕದಿಂದ ನಿರ್ಬಂಧ, ರಿಲಯನ್ಸ್‌ಗೆ ಅಡ್ಡಿ?

ರಷ್ಯಾ ಕಂಪನಿಗಳಿಂದ ಕಚ್ಚಾ ತೈಲ ಖರೀದಿಸಿ, ಯುರೋಪ್ ಮತ್ತು ಅಮೆರಿಕದಲ್ಲಿ ಇಂಧನ ಮಾರಾಟಕ್ಕೆ ಅಡಚಣೆ

ನವದೆಹಲಿ (ಪಿಟಿಐ): ರಷ್ಯಾದ ತೈಲ ಕಂಪನಿಗಳ ಮೇಲೆ ಅಮೆರಿಕವು ನಿರ್ಬಂಧ ಹೇರಿರುವ ಪರಿಣಾಮವಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ರಷ್ಯಾದಿಂದ ತೈಲ ಆಮದನ್ನು ಕಡಿಮೆ ಮಾಡುವ ಆಲೋಚನೆಯಲ್ಲಿದೆ ಎಂದು ಮೂಲಗಳು ಹೇಳಿವೆ.

ರಷ್ಯಾ ಕಂಪನಿಗಳ ಮೇಲಿನ ನಿರ್ಬಂಧದ ಪರಿಣಾಮಗಳ ಬಗ್ಗೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಪರಿಶೀಲನೆ ನಡೆಸುತ್ತಿವೆ. ಆದರೆ ಅವು ಬಹುಪಾಲು ಕಚ್ಚಾ ತೈಲವನ್ನು ಯುರೋಪಿನ ವರ್ತಕರಿಂದ (ಇವರ ಮೇಲೆ ನಿರ್ಬಂಧ ಇಲ್ಲ) ಖರೀದಿಸುತ್ತಿವೆ. ಹೀಗಾಗಿ ಅವು ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ತಕ್ಷಣಕ್ಕೆ ನಿಲ್ಲಿಸಲಿಕ್ಕಿಲ್ಲ ಎಂದು ಮೂಲಗಳು ಹೇಳಿವೆ.

ರಿಲಯನ್ಸ್ ಕಂಪನಿಯು ರಷ್ಯಾದಿಂದ ಪ್ರತಿದಿನ ಸರಿಸುಮಾರು 8.5 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ರಿಯಾಯಿತಿ ಬೆಲೆಗೆ ಖರೀದಿಸಿದೆ. ಈ ಕಚ್ಚಾ ತೈಲವನ್ನು ಸಂಸ್ಕರಿಸಿ ಅದು ಪೆಟ್ರೋಲ್, ಡೀಸೆಲ್ ಮತ್ತು ಎಟಿಎಫ್‌ಅನ್ನು ಅಮೆರಿಕ, ಯುರೋಪಿನ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದೆ. ಇದರಿಂದ ಉತ್ತಮ ಲಾಭ ಗಳಿಸುತ್ತಿದೆ.



ಆದರೆ ಅಮೆರಿಕವು ರಷ್ಯಾದ ರೊಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ನಿರ್ಬಂಧ ವಿಧಿಸಿರುವ ಪರಿಣಾಮವಾಗಿ, ರಿಲಯನ್ಸ್‌ನ ವಹಿವಾಟಿನ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ರಷ್ಯಾದ ಈ ಎರಡು ಕಂಪನಿಗಳಿಂದ ಕಚ್ಚಾ ತೈಲ ಖರೀದಿಸುವವರು ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಎದುರಿಸಬೇಕಾಗುತ್ತದೆ.

ರಿಲಯನ್ಸ್ ಕಂಪನಿಯು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡುವ, ಸ್ಥಗಿತಗೊಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ರಿಲಯನ್ಸ್ ಕಂಪನಿಯು ಅಮೆರಿಕದಲ್ಲಿ ಹೆಚ್ಚಿನ ವಾಣಿಜ್ಯ ಹಿತಾಸಕ್ತಿ ಹೊಂದಿದೆ. ಈ ವಿಚಾರವಾಗಿ ರಿಲಯನ್ಸ್‌ನಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ರಿಲಯನ್ಸ್ ಕಂಪನಿಯು ಕಚ್ಚಾ ತೈಲ ಖರೀದಿಯನ್ನು ಇತರ ಕಡೆಗಳಿಂದ ಮಾಡುವ ಪ್ರಕ್ರಿಯೆ ಶುರುಮಾಡಿದೆ ಎಂದು ಗೊತ್ತಾಗಿದೆ. ರೊಸ್ನೆಫ್ಟ್ ಹಾಗೂ ಲುಕಾಯಿಲ್ ಕಂಪನಿಗಳ ಜೊತೆಗಿನ ವಹಿವಾಟನ್ನು ನವೆಂಬರ್ 21ಕ್ಕೆ ಮೊದಲು ನಿಲ್ಲಿಸಬೇಕಿದೆ.

ಸರ್ಕಾರಿ ಕಂಪನಿಗಳಿಂದ ಖರೀದಿ ಅಬಾಧಿತ?

ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳು ಮಧ್ಯವರ್ತಿ ವರ್ತಕರ ಮೂಲಕ ರಷ್ಯಾದ ಕಚ್ಚಾ ತೈಲ ಖರೀದಿಸುವುದನ್ನು ಸದ್ಯಕ್ಕಂತೂ ಮುಂದುವರಿಸುವ ನಿರೀಕ್ಷೆ ಇದೆ.

ಸರ್ಕಾರಿ ಸ್ವಾಮ್ಯದ ಕಂಪನಿಗಳು ರೊಸ್ನೆಫ್ಟ್ ಅಥವಾ ಲುಕಾಯಿಲ್ ಕಂಪನಿ ಜೊತೆ ಒಪ್ಪಂದ ಹೊಂದಿಲ್ಲ. ಅವು ಟೆಂಡರ್ ಮೂಲಕ ರಷ್ಯಾದ ಕಚ್ಚಾ ತೈಲ ಖರೀದಿಸುತ್ತಿವೆ. ಈ ಟೆಂಡರ್ ಪ್ರಕ್ರಿಯೆಗಳಲ್ಲಿ ಯುರೋಪಿನ ಅಥವಾ ದುಬೈ, ಸಿಂಗಪುರ ಮೂಲದ ತೈಲ ವ್ಯಾಪಾರಿಗಳು ಇರುತ್ತಾರೆ. ನಿರ್ಬಂಧದ ವ್ಯಾಪ್ತಿಯಲ್ಲಿ ಈ ವ್ಯಾಪಾರಿಗಳು ಇಲ್ಲ.

ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹಿಂದುಸ್ತಾನ್ ಪೆಟ್ರೋಲಿಯಂ, ಎಂಆರ್‌ಪಿಎಲ್ ಹಾಗೂ ಎಚ್‌ಪಿಸಿಎಲ್–ಮಿತ್ತಲ್ ಎನರ್ಜಿ ಕಂಪನಿಗಳು ರಷ್ಯಾದ ಕಚ್ಚಾ ತೈಲ ಖರೀದಿಸುತ್ತಿವೆ.

ಕೆಲವು ವರ್ತಕರು ರಷ್ಯಾದ ಕಚ್ಚಾ ತೈಲ ಖರೀದಿಸಲು ಹಿಂದೇಟು ಹಾಕಿದರೂ, ದುಬೈನಲ್ಲಿ ಹೊಸ ವರ್ತಕರನ್ನು ರಾತ್ರೋರಾತ್ರಿ ನೋಂದಾಯಿಸುವ ಶಕ್ತಿ ರಷ್ಯಾಕ್ಕೆ ಇದೆ. ಈ ವರ್ತಕರು ರಷ್ಯಾದ ಕಂಪನಿಗಳಿಂದ ಕಚ್ಚಾ ತೈಲ ಖರೀದಿಸಿ, ಅದನ್ನು ಭಾರತ ಮತ್ತು ಚೀನಾಕ್ಕೆ ಮಾರಾಟ ಮಾಡಬಲ್ಲರು ಎಂದು ಮೂಲಗಳು ವಿವರಿಸಿವೆ.

ತೈಲ ಮಾರುಕಟ್ಟೆಯು ಅಮೆರಿಕದ ನಿರ್ಬಂಧದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ನಿರ್ಬಂಧಗಳು ಬಹಳ ಕಠಿಣ ಎಂದಾಗಿದ್ದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 5ರಿಂದ 10 ಡಾಲರ್‌ನಷ್ಟು ಹೆಚ್ಚಾಗುತ್ತಿತ್ತು. ಆದರೆ 2 ಡಾಲರ್‌ನಷ್ಟೇ ಹೆಚ್ಚಳ ಆಗಿದೆ. ಅಂದರೆ, ರಷ್ಯಾದಿಂದ ಸಿಗುವ ಅಷ್ಟೂ ಕಚ್ಚಾ ತೈಲ ಇನ್ನು ಮುಂದೆ ಸಿಗುವುದೇ ಇಲ್ಲ ಎಂಬ ಪರಿಸ್ಥಿತಿ ಇಲ್ಲ ಎಂದು ಮೂಲವೊಂದು ವಿವರಿಸಿದೆ.

ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ನಯಾರಾ ಎನರ್ಜಿ (ಇದಕ್ಕೆ ರೊಸ್ನೆಫ್ಟ್ ಹೂಡಿಕೆ ಇದೆ) ಕಂಪನಿ ಕೂಡ ಅಮೆರಿಕ ಹೇರಿರುವ ನಿರ್ಬಂಧದ ಬಿಸಿ ಅನುಭವಿಸಬೇಕಿದೆ.

ರಷ್ಯಾದ ಕಚ್ಚಾ ತೈಲ ಸಂಸ್ಕರಿಸಿ ಸಿದ್ಧಪಡಿಸಿದ ಇಂಧನ ಆಮದನ್ನು ಜನವರಿ 21ರಿಂದ ಅನ್ವಯವಾಗುವಂತೆ ಐರೋಪ್ಯ ಒಕ್ಕೂಟ ನಿರ್ಬಂಧಿಸಿದೆ. ರಿಲಯನ್ಸ್ ಮತ್ತು ಎಂಆರ್‌ಪಿಎಲ್ ಐರೋಪ್ಯ ಒಕ್ಕೂಟಕ್ಕೆ ಇಂಧನ ರಫ್ತು ಮಾಡಬೇಕು ಎಂದಾದರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಕಡಿಮೆ ಮಾಡಬೇಕಾಗುತ್ತದೆ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಏರಿ ಇಳಿದ ಷೇರುಪೇಟೆ ಸೂಚ್ಯಂಕ

ಮುಂಬೈ (ಪಿಟಿಐ): ಭಾರತ ಮತ್ತು ಅಮೆರಿಕ ನಡುವೆ ವಾಣಿಜ್ಯ ಒಪ್ಪಂದ ಆಗುತ್ತದೆ ಎಂಬ ಆಶಾವಾದದ ಹಿನ್ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ತಂತ್ರಜ್ಞಾನ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳವಾಯಿತು. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 130 ಅಂಶ ಹೆಚ್ಚಳವಾಗಿ, 84,556ಕ್ಕೆ ವಹಿವಾಟು ಕೊನೆಗೊಂಡಿದೆ. ವಹಿವಾಟಿನ ನಡುವೆ ಸೆನ್ಸೆಕ್ಸ್ 863 ಅಂಶ ಜಿಗಿತ ಕಂಡು, 85,290ಕ್ಕೆ ಮುಟ್ಟಿತ್ತು. ಇದು 52 ವಾರಗಳ ಗರಿಷ್ಠ ಮಟ್ಟ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 22 ಅಂಶ ಏರಿಕೆಯಾಗಿ, 25,891ಕ್ಕೆ ಅಂತ್ಯಗೊಂಡಿದೆ.

ರಷ್ಯಾದ ಪ್ರಮುಖ ಎರಡು ಅತಿದೊಡ್ಡ ತೈಲ ಕಂಪನಿಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದೆ. ಇದರಿಂದ ಹೂಡಿಕೆದಾರರು ಲಾಭದ ಗಳಿಕೆಗಾಗಿ ಎಚ್ಚರಿಕೆ ನಡೆ ಅನುಸರಿಸಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ವಹಿವಾಟಿನ ವೇಳೆ ಕಂಡಿದ್ದ ಗರಿಷ್ಠ ಮಟ್ಟದ ಏರಿಕೆಯನ್ನು ಉಳಿಸಿಕೊಳ್ಳಲಾಗಲಿಲ್ಲ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 5.43ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 65.99 ಡಾಲರ್ ಆಗಿದೆ.

ಬ್ಯಾಂಕ್ ಖಾತೆಗೆ ನಾಲ್ಕು ಜನರ ನಾಮನಿರ್ದೇಶನಕ್ಕೆ ಅವಕಾಶ

ನವದೆಹಲಿ (ಪಿಟಿಐ): ಬ್ಯಾಂಕ್ ಖಾತೆಗೆ ಗರಿಷ್ಠ ನಾಲ್ಕು ಮಂದಿಯನ್ನು ನಾಮನಿರ್ದೇಶನ ಮಾಡುವ ಸೌಲಭ್ಯವು ನವೆಂಬರ್ 1ರಿಂದ ಜಾರಿಗೆ ಬರಲಿದೆ.

ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಕಾನೂನುಗಳಿಗೆ ತಿದ್ದುಪಡಿ ತರಲಾಗಿದೆ. ನಾಮನಿರ್ದೇಶನಕ್ಕೆ ಸಂಬಂಧಿಸಿದ ನಿಯಮದಲ್ಲಿಯೂ ತಿದ್ದುಪಡಿ ಆಗಿದೆ.

ಖಾತೆಗಳಿಗೆ ಗ್ರಾಹಕರು ಗರಿಷ್ಠ ನಾಲ್ಕು ಮಂದಿಯ ಹೆಸರನ್ನು ನಾಮನಿರ್ದೇಶನ ಮಾಡಬಹುದು. ಇಷ್ಟು ಹೆಸರುಗಳನ್ನು ಒಂದೇ ಬಾರಿಗೆ ಅಥವಾ ಒಂದಾದ ನಂತರ ಇನ್ನೊಂದರಂತೆ ನಾಮನಿರ್ದೇಶನ ಮಾಡಲು ಅವಕಾಶ ಇದೆ. ಇದರಿಂದಾಗಿ ಠೇವಣಿದಾರರ ಹಾಗೂ ನಾಮನಿರ್ದೇಶಿತ ವ್ಯಕ್ತಿಗಳ ಕ್ಲೇಮ್ ಇತ್ಯರ್ಥ ಸರಳವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಲಾಕರ್‌ಗಳಲ್ಲಿ ಇರುವ ವಸ್ತುಗಳಿಗೆ ಒಬ್ಬರ ನಂತರ ಇನ್ನೊಬ್ಬರ ಹೆಸರನ್ನು ನಾಮನಿರ್ದೇಶನ ಮಾಡಲು ಮಾತ್ರ ಅವಕಾಶ ಇದೆ.

‘ಠೇವಣಿದಾರರು ನಾಲ್ಕು ಜನರ ಹೆಸರನ್ನು ನಾಮನಿರ್ದೇಶನ ಮಾಡಿ, ಪ್ರತಿ ವ್ಯಕ್ತಿಯು ಠೇವಣಿ ಮೊತ್ತದಲ್ಲಿ ಎಷ್ಟು ಪ್ರಮಾಣದ ಮೊತ್ತಕ್ಕೆ ಹಕ್ಕುದಾರ ಎಂಬುದನ್ನು ಸ್ಪಷ್ಟಪಡಿಸಬಹುದು’ ಎಂದು ಪ್ರಕಟಣೆಯು ಹೇಳಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹369-615
ದ್ವಿತಳಿ (ಬಿ.ವಿ)	₹455-740

ಕೊಬ್ಬರಿ ದರ (ಕ್ವಿಂಟಲ್‌ಗೆ)

ಅರಸೀಕೆರೆ	₹26000-26000
ತಿಪಟೂರು	₹27000-28300
ತುಮಕೂರು	₹27000-27800

‘ವರ್ಷಾಂತ್ಯಕ್ಕೆ ರಷ್ಯಾದಿಂದ ಕಚ್ಚಾ ತೈಲ ಖರೀದಿ ಸ್ಥಗಿತ’

ಪ್ರಧಾನಿ ನರೇಂದ್ರ ಮೋದಿ ಮಾತುಕತೆ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚಾರ

ವಾಷಿಂಗ್ಟನ್/ನವದೆಹಲಿ (ಪಿಟಿಐ): ‘ಈ ವರ್ಷಾಂತ್ಯದ ವೇಳೆಗೆ ಭಾರತವು ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ಬಹುತೇಕ ಸ್ಥಗಿತಗೊಳಿಸಲಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ಆದಾಗ್ಯೂ, ‘ಈ ಪ್ರಕ್ರಿಯೆ ನಡೆಯಲು ಸ್ವಲ್ಪ ಕಾಲಾವಕಾಶದ ಅಗತ್ಯವಿದೆ. ಈ ವಿಚಾರದಲ್ಲಿ ಚೀನಾದ ಮನವೊಲಿಸಲು ಯತ್ನಿಸುತ್ತಿದ್ದೇನೆ’ ಎಂದು ತಿಳಿಸಿದ್ದಾರೆ.

ರಷ್ಯಾದಿಂದ ಚೀನಾ ಹಾಗೂ ಭಾರತವು ದೊಡ್ಡ ಪ್ರಮಾಣದಲ್ಲಿ ಕಚ್ಚಾತೈಲ ಖರೀದಿಸುತ್ತಿರುವ ರಾಷ್ಟ್ರಗಳಾಗಿವೆ.

‘ಭಾರತವು ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ಸ್ಥಗಿತಗೊಳಿಸಲಿದೆ ಎಂದು ಭರವಸೆ ನೀಡಿತ್ತು. ಈ ಪ್ರಕ್ರಿಯೆಯೂ ನಡೆಯುತ್ತಿದೆ. ಈಗಲೇ ನಿಲ್ಲಿಸಲು ಸಾಧ್ಯವಿಲ್ಲ. ಈ ವರ್ಷಾಂತ್ಯಕ್ಕೆ ಪೂರ್ತಿ ಕಡಿಮೆಯಾಗಲಿದ್ದು, ಬಹುತೇಕ ಕೊನೆಯಾಗಲಿದೆ. ಭಾರತ ತನ್ನ ಬೇಡಿಕೆಯ ಶೇಕಡ 40ರಷ್ಟು ಕಚ್ಚಾತೈಲವನ್ನು ಅಲ್ಲಿಂದಲೇ ಖರೀದಿಸುತ್ತಿದೆ. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಜೊತೆಗೆ ಮಂಗಳವಾರವಷ್ಟೇ ಮಾತನಾಡಿದ್ದೇನೆ. ಅವರು ಕೂಡ ತುಂಬಾ ಸಕಾರಾತ್ಮಕವಾಗಿ ಮಾತನಾಡಿದ್ದಾರೆ’ ಎಂದು ಶ್ವೇತಭವನದಲ್ಲಿ ಬುಧವಾರ ನಡೆದ ಮಾಧ್ಯಮ ಗೋಷ್ಠಿಯಲ್ಲಿ ಟ್ರಂಪ್ ತಿಳಿಸಿದ್ದಾರೆ.

ನರೇಂದ್ರ ಮೋದಿ– ಡೊನಾಲ್ಡ್ ಟ್ರಂಪ್

ರಷ್ಯಾದಿಂದ ಕಚ್ಚಾತೈಲವನ್ನು ಗಣನೀಯವಾಗಿ ಕಡಿಮೆ ಮಾಡಲಾಗುವುದು ಎಂದು ಭಾರತ ಭರವಸೆ ನೀಡಿದೆ ಎಂದು ಕಳೆದ ಕೆಲವು ದಿನಗಳಿಂದ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡುತ್ತಿದ್ದಾರೆ.

ರಷ್ಯಾದಿಂದ ಕಚ್ಚಾತೈಲ ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಸಂಘರ್ಷಕ್ಕೆ ಭಾರತವು ಪರೋಕ್ಷವಾಗಿ ಆರ್ಥಿಕ ನೆರವು ಒದಗಿಸುತ್ತಿದೆ ಎಂದು ಅಮೆರಿಕ ಆರೋಪಿಸುತ್ತಿದೆ.

ಚೀನಾದ ಜೊತೆಗೂ ಮಾತುಕತೆ: ‘ರಷ್ಯಾ– ಉಕ್ರೇನ್ ನಡುವಿನ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಜೊತೆಗೂ ಮಾತುಕತೆ ನಡೆಸಲಿದ್ದೇನೆ’ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

> **ನಾನು ಇದುವರೆಗೂ ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಸುಂಕದ ಕಾರಣದಿಂದಾಗಿಯೇ, ಐದರಿಂದ ಆರು ಯುದ್ಧಗಳನ್ನು ನಿಲ್ಲಿಸಿದ್ದೇನೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ಡೊನಾಲ್ಡ್ ವ್ಯಾಪಾರ ನೀತಿ ಸಮರ್ಥನೆ: ತನ್ನ ವ್ಯಾಪಾರ ನೀತಿಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಡೊನಾಲ್ಡ್ ಟ್ರಂಪ್, ಇದರಿಂದ ಅಮೆರಿಕದ ಅರ್ಥಿಕತೆಯೂ ಮತ್ತಷ್ಟು ಬಲವರ್ಧನೆಯಾಗಲಿದೆ ಎಂದಿದ್ದಾರೆ.

‘ಸುಂಕದಿಂದಾಗಿ ಒಂದು ದೇಶವಾಗಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸು-ತ್ತಿದ್ದೇವೆ, ದಶಕದಿಂದಲೂ ನಮ್ಮ ಮೇಲೆ ಸುಂಕ ಹೇರುವ ಮೂಲಕ ದೇಶಕ್ಕೆ ನಿಧಾನವಾಗಿ ಹಾನಿಯುಂಟು ಮಾಡಲಾಗಿತ್ತು. ಇದರಿಂದಾಗಿ ನಾವು 37 ಟ್ರಿಲಿಯನ್ ಡಾಲರ್ ಸಾಲದ ಹೊರೆಗೆ ಸಿಲುಕುವಂತಾಯಿತು. ಈಗ ನಾವು ಶ್ರೀಮಂತ ರಾಷ್ಟ್ರವಾಗಿದ್ದೇವೆ. ನಾವು ಹಿಂದೆಂದೂ ಮಾಡದ ರೀತಿಯಲ್ಲಿ ಹಣವನ್ನು ಪಡೆಯುತ್ತಿದ್ದೇವೆ’ ಎಂದು ಬಲವಾಗಿ ಸಮರ್ಥಿಸಿಕೊಂಡರು.

‘ಅಮೆರಿಕದ ಸಮೃದ್ಧಿಗಾಗಿ ಸುಂಕ ಹೇರುತ್ತಿದ್ದೇನೆ. ಸುಂಕ ಹೇರದಿದ್ದರೆ, ಅಮೆರಿಕವು ಮೂರನೇ ಜಗತ್ತಿನ ರಾಷ್ಟ್ರವಾಗಿರಲಿದೆ. ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಸುಂಕದಿಂದ ನಾವು ಶ್ರೀಮಂತರಾಗುತ್ತಿದ್ದು, ದೇಶವು ಹೆಚ್ಚು ಸುರಕ್ಷಿತವಾಗಿದೆ. ಅದಿಲ್ಲದಿದ್ದರೆ, ನಾವು ಸಂಕಷ್ಟಕ್ಕೆ ಸಿಲುಕಲಿದ್ದೇವೆ’ ಎಂದು ಸ್ಪಷ್ಟಪಡಿಸಿದ್ದಾರೆ.

ವ್ಯಾಪಾರ: ಮೋದಿ, ಟ್ರಂಪ್ ಮಾತುಕತೆ

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚರ್ಚಿಸಿದ್ದಾರೆ.

ಸುಂಕ ಹೇರಿಕೆ ಬಳಿಕ ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಹದಗೆಟ್ಟಿರುವ ಮಧ್ಯೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿ ದೀಪಾವಳಿ ಹಬ್ಬದ ಶುಭಾಶಯ ಕೋರಿದ್ದಾರೆ.

ಶ್ವೇತಭವನದಲ್ಲಿ ಹಮ್ಮಿಕೊಂಡಿದ್ದ ದೀಪಾವಳಿ ಕಾರ್ಯಕ್ರಮದಲ್ಲಿ ದೀಪ ಬೆಳಗಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ‘ಮೋದಿ ಅವರೊಂದಿಗೆ ವ್ಯಾಪಾರ ಕುರಿತು ಮಾತನಾಡಿರುವೆ’ ಎಂದು ಹೇಳಿದ್ದಾರೆ.

ಟ್ರಂಪ್ ಶುಭಾಶಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಜಾಲತಾಣದ ಮೂಲಕ ಧನ್ಯವಾದ ಸಲ್ಲಿಸಿದ್ದಾರೆ.

‘ದೀಪಾವಳಿ ಶುಭಾಶಯ ತಿಳಿಸಲು ದೂರವಾಣಿ ಕರೆ ಮಾಡಿದ್ದಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದಗಳು. ಬೆಳಕಿನ ಹಬ್ಬದ ಈ ಸಂದರ್ಭದಲ್ಲಿ, ವಿಶ್ವದ ಎರಡು ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳ ಸಂಬಂಧ ಮತ್ತಷ್ಟು ಪ್ರಕಾಶಮಾನವಾಗಲಿದೆ. ಎಲ್ಲ ಮಾದರಿಯ ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನಿಂದ ನಿಲ್ಲಬೇಕು’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಮಾತುಕತೆ ವೇಳೆ ಪಾಕಿಸ್ತಾನದ ಯಾವುದೇ ವಿಚಾರವೂ ಕೂಡ ಚರ್ಚೆಗೆ ಬಂದಿಲ್ಲ’ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಎಸ್‌ಬಿಐಗೆ ವಿಶ್ವದ ಅತ್ಯುತ್ತಮ ಗ್ರಾಹಕ ಬ್ಯಾಂಕ್ ಪ್ರಶಸ್ತಿ

ನವದೆಹಲಿ (ಪಿಟಿಐ): 2025ನೇ ಸಾಲಿನ ‘ವಿಶ್ವದ ಅತ್ಯುತ್ತಮ ಗ್ರಾಹಕ ಬ್ಯಾಂಕ್’ ಮತ್ತು ‘ಭಾರತದಲ್ಲಿನ ಅತ್ಯುತ್ತಮ ಬ್ಯಾಂಕ್’ ಪ್ರಶಸ್ತಿಗೆ ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಭಾಜನವಾಗಿದೆ.

ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವಾರ್ಷಿಕ ಸಭೆಯಲ್ಲಿ ನ್ಯೂಯಾರ್ಕ್ ಮೂಲದ ಗ್ಲೋಬಲ್ ಫೈನಾನ್ಸ್ ಸಂಸ್ಥೆ ಈ ಪ್ರಶಸ್ತಿ ಪ್ರದಾನ ಮಾಡಿದೆ.

ಈ ಎರಡು ಪ್ರಶಸ್ತಿಗಳು ನಾವೀನ್ಯ, ಆರ್ಥಿಕ ಒಳಗೊಳ್ಳುವಿಕೆ ಮತ್ತು ಗ್ರಾಹಕರಿಗೆ ಶ್ರೇಷ್ಠವಾಗಿದ್ದನ್ನು ನೀಡುವುದಕ್ಕೆ ಬದ್ಧವಾಗಿರುವ ಜಾಗತಿಕ ಬ್ಯಾಂಕಿಂಗ್ ನಾಯಕನಾಗಿ ಎಸ್‌ಬಿಐ ಸ್ಥಾನವನ್ನು ಸದೃಢಗೊಳಿಸುತ್ತದೆ ಎಂದು ಬ್ಯಾಂಕ್ ಗುರುವಾರ ತಿಳಿಸಿದೆ.

ಗ್ಲೋಬಲ್ ಫೈನಾನ್ಸ್‌ನಿಂದ ಎಸ್‌ಬಿಐಗೆ ಈ ಪ್ರಶಸ್ತಿ ಬಂದಿದ್ದಕ್ಕಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ ಮೂಲಕ ಅಭಿನಂದನೆ ಸಲ್ಲಿಸಿದ್ದಾರೆ. ಪ್ರಸ್ತುತ ಬ್ಯಾಂಕ್ 52 ಕೋಟಿ ಗ್ರಾಹಕರನ್ನು ಹೊಂದಿದೆ.

ಮುಂಬೈ ಧಾರಣೆ (ಶೇಂಗಾ) 23-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1410)
ಒಂದು ವಾರದ ಡೆಲಿವರಿ	1405 (1405)
ಪಾಮ್ ವಾರದ ಡೆಲಿವರಿ	1283 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1415)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,100 (1,26,600)
ಬೆಳ್ಳಿ ಕೆ.ಜಿಗೆ	1,56,000 (1,57,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಸಿಯಾನ್ ಶೃಂಗ: ವರ್ಚುವಲ್ ಮೂಲಕ ಮೋದಿ ಭಾಗಿ

ನವದೆಹಲಿ (ಪಿಟಿಐ): ಮುಂದಿನ ವಾರ ಮಲೇಷ್ಯಾದಲ್ಲಿ ನಡೆಯಲಿರುವ ಅಸಿಯಾನ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಹಾಜರಾಗಲಿದ್ದಾರೆ.

ಅಸಿಯಾನ್ ಸಭೆಯು ಅಕ್ಟೋಬರ್ 26ರಿಂದ 28ರವರೆಗೆ ನಡೆಯಲಿದೆ.

‘ಅಸಿಯಾನ್ ಶೃಂಗಸಭೆಯಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗುವುದನ್ನು ತಪ್ಪಿಸಿಕೊಳ್ಳಲು ಪ್ರಧಾನಿ ಮೋದಿ ಅವರು ವರ್ಚುವಲ್ ಆಗಿ ಭಾಗಿಯಾಗುತ್ತಿದ್ದಾರೆ’ ಎಂದು ಕಾಂಗ್ರೆಸ್ ಟೀಕಿಸಿದೆ.

ಸಂಕ್ಷಿಪ್ತ ಸುದ್ದಿ

ಮಿಸ್ತ್ರಿ ಮರುನೇಮಕಕ್ಕೆ ಪ್ರಸ್ತಾವ

ನವದೆಹಲಿ (ಪಿಟಿಐ): ಆಜೀವ ಟ್ರಸ್ಟಿಯಾಗಿ ಮೆಹ್ಲಿ ಮಿಸ್ತ್ರಿ ಅವರನ್ನು ಮರುನೇಮಿಸಲು ಟಾಟಾ ಟ್ರಸ್ಟ್ಸ್ ಮುಂದಾಗಿದೆ. ಈ ಕುರಿತ ಪ್ರಸ್ತಾವ ಸಿದ್ಧಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸರ್ ರತನ್ ಟಾಟಾ ಟ್ರಸ್ಟ್, ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ಮತ್ತು ಬಾಯಿ ಹಿರಾಬಾಯಿ ಜೆಮ್‌ಶೆಡ್‌ಜೀ ಟಾಟಾ ನವ್‌ಸರಿ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಮಿಸ್ತ್ರಿ ಅವರನ್ನು ಮರುನೇಮಕ ಮಾಡಲು ಟಾಟಾ ಟ್ರಸ್ಟ್‌ನ ಸಿಇಒ, ಟಾಟಾ ಟ್ರಸ್ಟ್‌ನ ಇತರೆ ಟ್ರಸ್ಟಿಗಳಿಗೆ ಪ್ರಸ್ತಾವವನ್ನು ಗುರುವಾರ ಕಳುಹಿಸಿದ್ದಾರೆ.

ದಿವಂಗತ ರತನ್ ಟಾಟಾ ಅವರ ಆತ್ಮೀಯರಾಗಿದ್ದ ಮಿಸ್ತ್ರಿ ಅವರು 2022ರಲ್ಲಿ ಮೊದಲ ಬಾರಿಗೆ ಟಾಟಾ ಟ್ರಸ್ಟ್‌ಗೆ ಮೂರು ವರ್ಷದ ಅವಧಿಗೆ ನೇಮಕವಾಗಿದ್ದರು. ಈ ಅವಧಿ ಅಕ್ಟೋಬರ್ 28ರಂದು ಕೊನೆಗೊಳ್ಳಲಿದೆ. ಟಾಟಾ ಟ್ರಸ್ಟ್ಸ್ ಈ ವಿಚಾರಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ.

ಈ ವಾರದ ಆರಂಭದಲ್ಲಿ ವೇಣು ಶ್ರೀನಿವಾಸನ್ ಅವರನ್ನು ಆಜೀವ ಸದಸ್ಯರನ್ನಾಗಿ ಟಾಟಾ ಟ್ರಸ್ಟ್ಸ್ ಸರ್ವಾನುಮತದಿಂದ ಮರುನೇಮಕ ಮಾಡಿತ್ತು.

ಭಾರತ ಮೂಲದ ಸುನೀಲ್ ಅಮೃತ್‌ಗೆ ‘ಬ್ರಿಟಿಷ್ ಅಕಾಡೆಮಿ’ ಪುಸ್ತಕ ಪ್ರಶಸ್ತಿ

ಲಂಡನ್ (ಪಿಟಿಐ): ಭಾರತೀಯ ಮೂಲದ ಇತಿಹಾಸಕಾರ ಸುನೀಲ್ ಅಮೃತ್ ಅವರ ‘ದಿ ಬರ್ನಿಂಗ್ ಅರ್ಥ್: ಆ್ಯನ್ ಎನ್ವಿರಾನ್‌ಮೆಂಟಲ್ ಹಿಸ್ಟರಿ ಆಫ್ ದಿ ಲಾಸ್ಟ್ 500 ಇಯರ್ಸ್’ ಕೃತಿಯು ಈ ವರ್ಷದ ‘ಬ್ರಿಟಿಷ್ ಅಕಾಡೆಮಿ’ ಪುಸ್ತಕ ಪ್ರಶಸ್ತಿಗೆ ಭಾಜನವಾಗಿದೆ.

ಸೃಜನೇತರ ಕೃತಿಗಳಿಗಾಗಿ ನೀಡುವ ಈ ಅಂತರರಾಷ್ಟ್ರೀಯ ಪ್ರಶಸ್ತಿಯು ಒಟ್ಟು 25 ಸಾವಿರ ಪೌಂಡ್ (ಅಂದಾಜು ₹29 ಲಕ್ಷ) ಮೊತ್ತವನ್ನು ಒಳಗೊಂಡಿದೆ. ಅಮೆರಿಕದ ಯೇಲ್ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಅಮೃತ್, ದಕ್ಷಿಣ ಭಾರತ ಮೂಲದ ದಂಪತಿಗೆ ಕೆನ್ಯಾದಲ್ಲಿ ಜನಿಸಿದರು. ಸಿಂಗಪುರದಲ್ಲಿ ಆರಂಭಿಕ ಶಿಕ್ಷಣ ಪಡೆದ ಅವರು, ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ. ಬುಧವಾರ ಸಂಜೆ ಲಂಡನ್‌ನ ಬ್ರಿಟಿಷ್ ಅಕಾಡೆಮಿಯಲ್ಲಿ ನಡೆದ ಸಮಾರಂಭದಲ್ಲಿ ತೀರ್ಪುಗಾರರ ತಂಡದ ಅಧ್ಯಕ್ಷೆ ರೆಬೆಕಾ ಅರ್ಲ್ ಈ ಪ್ರಶಸ್ತಿ ಘೋಷಿಸಿದರು.

ರಾಣಿ ಚನ್ನಮ್ಮ ನೆನಪಿನ ವಿಶೇಷ ನಾಣ್ಯ

ಬೆಂಗಳೂರು: ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮ ಅವರ 200ನೇ ಜಯಂತಿ ಅಂಗವಾಗಿ ಕೇಂದ್ರ ಸರ್ಕಾರವು ₹200 ಮೌಲ್ಯದ ವಿಶೇಷ ನಾಣ್ಯ ರೂಪಿಸಿದೆ.

ಈ ನಾಣ್ಯವು ಶೇ 50ರಷ್ಟು ಬೆಳ್ಳಿಯನ್ನು ಒಳಗೊಂಡಿದೆ. ಉಳಿದಂತೆ ಶೇ 40ರಷ್ಟು ತಾಮ್ರ, ಶೇ 5ರಷ್ಟು ಸತು ಮತ್ತು ಶೇ 5ರಷ್ಟು ನಿಕಲ್ ಅನ್ನು ಈ ನಾಣ್ಯ ತಯಾರಿಕೆಯಲ್ಲಿ ಬಳಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆಯಲ್ಲಿ ತಿಳಿಸಿದೆ.

ಹೈದರಾಬಾದ್‌ನಲ್ಲಿ ಈ ನಾಣ್ಯ ತಯಾರಾಗಿದೆ. ನಾಣ್ಯದ ಒಂದು ಬದಿಯಲ್ಲಿ ರಾಣಿ ಚನ್ನಮ್ಮರ ಚಿತ್ರವಿರಲಿದೆ. ನಾಣ್ಯದ ಮೇಲೆ ಮತ್ತು ಕೆಳಭಾಗದಲ್ಲಿ ‘ಕಿತ್ತೂರಿನ ರಾಣಿ ಚನ್ನಮ್ಮರ ಜಯದ 200ನೇ ವರ್ಷಾಚರಣೆ’ ಎಂಬ ಬರಹ ಇರಲಿದೆ. ಇನ್ನೊಂದು ಬದಿಯಲ್ಲಿ ₹200 ಸಂಕೇತ ಮತ್ತು ರಾಷ್ಟ್ರ ಲಾಂಛನ ಇರಲಿದೆ. ನಾಣ್ಯದ ಸುತ್ತಳತೆ 44 ಮಿ.ಮೀ. ಇದ್ದು, 35 ಗ್ರಾಂ ತೂಕ ಹೊಂದಿದೆ ಎಂದು ತಿಳಿಸಿದೆ.

ಸಾಮೂಹಿಕ ಅತ್ಯಾಚಾರ: ಆರು ಮಂದಿ ಸೆರೆ

ಒಂದನೇ ಪುಟದಿಂದ...

ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ನೆಲಸಿದ್ದರು ಎಂದು ಮೂಲಗಳು ಹೇಳಿವೆ.

ಮಂಗಳವಾರ ರಾತ್ರಿ 7 ಗಂಟೆಯ ಸುಮಾರಿಗೆ ಸಂತ್ರಸ್ತೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದರು. ಮಕ್ಕಳು ಹಾಗೂ ಪತಿಯ ಸ್ನೇಹಿತನ ಜತೆಗೆ ಮನೆಯಲ್ಲಿ ಇದ್ದರು. ಅದೇ ಸಂದರ್ಭದಲ್ಲಿ ನಾಲ್ಕು ಬೈಕ್‌ಗಳಲ್ಲಿ ಬಂದಿದ್ದ ಏಳು ಮಂದಿ ಆರೋಪಿಗಳು, ತಾವು ಪೀಣ್ಯ ಠಾಣೆ ಪೊಲೀಸರ ಬಾತ್ಮೀದಾರರು ಎಂದು ಸಂತ್ರಸ್ತೆಯ ಬಳಿ ಹೇಳಿಕೊಂಡಿದ್ದರು. ಈ ಮನೆಯಲ್ಲಿ ವೇಶ್ಯಾವಾಟಿಕೆ ಹಾಗೂ ಡ್ರಗ್ಸ್ ದಂಧೆ ನಡೆಯುತ್ತಿದೆ ಎಂಬುದಾಗಿ ಬೆದರಿಸಿದ್ದರು ಎಂದು ಮೂಲಗಳು ಹೇಳಿವೆ.

ಬ್ಯಾಟ್‌ನಿಂದ ಹಲ್ಲೆ: ಬಾಡಿಗೆ ಮನೆಯಲ್ಲಿ ಡ್ರಗ್ಸ್ ದಂಧೆ ಹಾಗೂ ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದಿರಲು ₹1 ಲಕ್ಷ ನೀಡುವಂತೆ ಆರೋಪಿಗಳು ಬೇಡಿಕೆ ಇಟ್ಟಿದ್ದರು. ನಂತರ, ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆ ನಡೆಸಿದ್ದರು. ಸಂತ್ರಸ್ತೆಯ ಮಗ ಹಾಗೂ ಪತಿಯ ಸ್ನೇಹಿತನಿಗೆ ಹೊಡೆದು ಕೊಠಡಿಯಲ್ಲಿ ಕೂಡಿ ಹಾಕಿದ್ದರು. ಬಳಿಕ ಪಕ್ಕದ ಮನೆಯೊಂದಕ್ಕೆ ಮಹಿಳೆಯನ್ನು ಎಳೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದರು ಎಂದು ಮೂಲಗಳು ತಿಳಿಸಿವೆ.

ನಗದು, ಮೊಬೈಲ್ ದೋಚಿ ಪರಾರಿ: ಕೃತ್ಯ ಎಸಗಿದ ಬಳಿಕ ಆರೋಪಿಗಳು ಮನೆಯಲ್ಲಿದ್ದ ₹25 ಸಾವಿರ ನಗದು ಹಾಗೂ ಎರಡು ಮೊಬೈಲ್ ದೋಚಿ ಪರಾರಿ ಆಗಿದ್ದರು. ಸಂತ್ರಸ್ತೆ ಪುತ್ರ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳಕ್ಕೆ ತೆರಳುವಷ್ಟರಲ್ಲಿ ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಸಂತ್ರಸ್ತೆ ಹಾಗೂ ಹಲ್ಲೆಗೊಳಗಾಗಿದ್ದ ಇಬ್ಬರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಮೂವರು ಚೇತರಿಸಿಕೊಳ್ಳುತ್ತಿದ್ದಾರೆ. ಆರೋಪಿಗಳ ವಿರುದ್ಧ ಡಕಾಯಿತಿ, ಅತ್ಯಾಚಾರ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿವೆ.

ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿದ ಪೊಲೀಸರು

ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ

‘ನೆಲಮಂಗಲ ಡಿವೈಎಸ್‌ಪಿ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಸಂತ್ರಸ್ತೆಗೆ ಫೋಟೊ ತೋರಿಸಿದಾಗ ಆರೋಪಿಗಳ ಹೆಸರು ಹೇಳುತ್ತಿದ್ದಾರೆ. ಅವರಿಗೆ ಪರಿಚಯ ಇದ್ದವರೇ ಕೃತ್ಯ ಎಸಗಿರುವಂತೆ ಕಂಡುಬರುತ್ತಿದೆ. ತನಿಖೆಯ ಬಳಿಕ ಆರೋಪಿಗಳ ಹಿನ್ನೆಲೆ ಗೊತ್ತಾಗಲಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಭ್ರೂಣಲಿಂಗ ಪತ್ತೆ: ನಾಲ್ವರ ಬಂಧನ

ಒಂದನೇ ಪುಟದಿಂದ...

ಬಂಗಲೆಯಲ್ಲಿ ಭ್ರೂಣಪತ್ತೆ: ‘ಹಿಸ್ ಹೋಲಿನೆಸ್’–‘ಸ್ವಾಮಿ ಶಿವಾನಂದ ಪರಮಹಂಸ ನಿಲಯ’ ಫಲಕವಿದ್ದ ಬಂಗಲೆಯ ಮೊದಲ ಮಹಡಿಯಲ್ಲಿ ಲಿಂಗ ಪತ್ತೆ ಕಾರ್ಯ ನಡೆದಿತ್ತು. ಭ್ರೂಣ ಹತ್ಯೆ ಮಾಡಿಸಲು ವೈದ್ಯರೊಬ್ಬರು ಬರುವುದನ್ನೇ ಮೂವರು ಗರ್ಭಿಣಿಯರು ಕಾಯುತ್ತಿದ್ದರು’ ಎಂದು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ತಂಡದ ಸದಸ್ಯರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮಲ್ಲಹಳ್ಳಿ ವೃತ್ತದಲ್ಲಿ ಗರ್ಭಿಣಿಯ ಸೋಗಿನಲ್ಲಿದ್ದ ಪುಟ್ಟಸಿದ್ದಮ್ಮ ಅವರಿಂದ ₹30 ಸಾವಿರ ನಗದು ಪಡೆದ ಆರೋಪಿ ಸ್ವಾಮಿ, ಕಾರಿನಲ್ಲಿ ಗೋವಿಂದರಾಜು ಎಂಬುವರೊಂದಿಗೆ ಬಂಗಲೆಗೆ ಕಳುಹಿಸಿಕೊಟ್ಟ. ಮಾರ್ಗ ಮಧ್ಯೆ ರೂಪಾ ಹಾಗೂ ಉಮಾ ಎಂಬ ಮಹಿಳೆಯರು ಹತ್ತಿಕೊಂಡರು. ಉಮಾ ಎಂಬುವರಿಂದಲೂ ಆರೋಪಿಗಳು ₹25 ಸಾವಿರ ಪಡೆದಿದ್ದರು’ ಎಂದು ಹೇಳಿದ್ದಾರೆ.

‘ರೂಪಾ ಅವರ ಪತಿ ಹರೀಶ್‌ನಾಯಕ, ಉಮಾ ಅವರ ಪತಿ ಶಿವಕುಮಾರ್ ಅವರೂ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ₹30 ಸಾವಿರ ಹಣ ನೀಡಿದ್ದರು. ಮನೆಯ ಮಾಲೀಕರಾದ ಶ್ಯಾಮಲಾ ಅವರನ್ನು ವಿಚಾರಿಸಿದಾಗ ಆರಂಭದಲ್ಲಿ ಈ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದರು. ಬಳಿಕ ಬನ್ನೂರಿನ ಎಸ್.ಕೆ. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗಿ ಒಪ್ಪಿಕೊಂಡಿದ್ದಾರೆ. ವಿಚಾರಣೆ ನಡೆಸಿದಾಗ ಆಕೆಯ ಗಂಡ ಕಾರ್ತಿಕ್ ಮತ್ತು ಪುಟ್ಟರಾಜು ಎಂಬುವರೊಂದಿಗೆ ಸೇರಿಕೊಂಡು ಭ್ರೂಣಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ಕಾರ್ಯ ನಡೆಸುತ್ತಿದ್ದುದು ಬಯಲಾಯಿತು’ ಎಂದು ತಿಳಿಸಿದ್ದಾರೆ.

ಭ್ರೂಣಲಿಂಗ ಪತ್ತೆ, ಹತ್ಯೆ ನಡೆಯುತ್ತಿದ್ದ ಹುನಗನಹಳ್ಳಿ ಹುಂಡಿ ಗ್ರಾಮದ ಮನೆ

ಪಿಸಿಪಿಎನ್‌ಡಿಟಿ ಉಪನಿರ್ದೇಶಕ ವಿವೇಕ್ ದೊರೈ, ಮಂಡ್ಯ ಡಿಎಚ್‌ಒ ಡಾ.ಮೋಹನ್‌ಕುಮಾರ್, ಕುಟುಂಬ ಕಲ್ಯಾಣಾಧಿಕಾರಿ ಡಾ.ಬೆಟ್ಟಸ್ವಾಮಿ, ರೇಡಿಯಾಲಜಿಸ್ಟ್ ವಿಜಯಶರಧಿ, ಸಿಬ್ಬಂದಿ ಅನಿಲ್ ಪಿ.ಥಾಮಸ್, ಎನ್. ಅರುಣ್‌ಕುಮಾರ್, ಬಿ.ಮಂಗಳಾ, ಪುಟ್ಟಸಿದ್ಧಮ್ಮ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/- ದಿಂದ 86,000/- .(ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ವೈಯಕ್ತಿಕ

Change of Name

I, VANAJAKSHI, Spouse of Sakleshpur Chinappa Jagadeesha resident of 105, 1st C Main Road, 4th C Cross, Near Bethel church, OMBR Layout, Dodda Banaswadi, Bangalore-560043, Bengaluru Urban, Karnataka, India, have changed my name from Vanajakshi to Vanajakshi K M Affidavit dated 14-10-2025 at Bangalore.

ಪ್ರವಾಸ

Travel Agencies

4 ಜ್ಯೋತಿರ್ಲಿಂಗದೊಂದಿಗೆ ಗುಜರಾತ್ ಹಾಗೂ ಮಧ್ಯಪ್ರದೇಶ ಪ್ರವಾಸ ನಾಗೇಶ್ವರ ಸೋಮನಾಥ್ ಓಂಕಾರೇಶ್ವರ್ ಮಹಾಕಾಳೇಶ್ವರ ನಿಷ್ಕಳಂಕ ಮಹಾದೇವ ಗಂಗೇಶ್ವರ ಮಹಾದೇವ್ ಇತರೆ ಸ್ಥಳಗಳು: 9480843945/ 9019462508

Travel

ಕಾಶಿ ಅಯೋಧ್ಯ, ಗಯಾ,ಕೊಲ್ಕತ್ತಾ ಪುರಿಜಗನ್ನಾಥ್ ಭುವನೇಶ್ವರ್ 10 ದಿನಗಳು. ವೈಷ್ಣೋದೇವಿ ಕಾಶ್ಮೀರ್ ಫ್ಯಾಮಿಲಿ ಪ್ರವಾಸ 10 ದಿನಗಳು. ಗ್ಯಾಂಟಾಕ್ ಡಾರ್ಜಲಿಂಗ್,ಸಿಕ್ಕಿಂ ಫ್ಯಾಮಿಲಿ ಪ್ರವಾಸಗಳಿಗಾಗಿ ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಮಲ್ಲೇಶ್ವರ ಬೆಂಗಳೂರು.3. 9448294477

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

RESPECTFUL HOMAGE

Sri G. N. Somasekhar
Trustee
Seshadripuram Educational Trust
Bengaluru | Mysuru | Mandya | Tumakuru
The President, Trustees, Principals, Staff and Students of Seshadripuram Group of Institutions pay their respectful homage to
Sri G. N. Somasekhar
who left for his heavenly abode on
22-10-2025

ನಿಧನ

ಶ್ರೀ ಡಿ.ಎಸ್.ಗೌಡ
ಮಾಜಿ ಶಾಸಕರು, ದೇವನಹಳ್ಳಿ
ನಮ್ಮ ಕುಟುಂಬದ ಬೆಳಕು ಹಾಗೂ ಮಾರ್ಗದರ್ಶಕರು, ಶಾಂತ ಸ್ವರೂಪದ ವ್ಯಕ್ತಿತ್ವದ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಡಿ.ಎಸ್. ಗೌಡ ರವರು ಇಂದು (ದಿನಾಂಕ: 23-10-2025) ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಶ್ರೀಯುತರ ಅಂತ್ಯಕ್ರಿಯೆಯನ್ನು ದಿನಾಂಕ: 25-10-2025 ರ ಶನಿವಾರ ಬೆಳಗ್ಗೆ 10.00 ಗಂಟೆಗೆ ದೇವನಹಳ್ಳಿ ತಾಲ್ಲೂಕಿನ ನಾಗನಾಯಕನಹಳ್ಳಿಯಲ್ಲಿ ನೆರವೇರಿಸಲಾಗುವುದು.
ಅಂತಿಮ ದರ್ಶನದ ವ್ಯವಸ್ಥೆಯನ್ನು ನಾಳೆ 24-10-2025 ರಂದು ಮಧ್ಯಾಹ್ನ 12.00 ಗಂಟೆಯಿಂದ ನಂ.389, ನ್ಯಾಯಾಧೀಶರ ಕಾಲೋನಿ (Judges Colony), ನೀಲ್‌ಗಿರೀಸ್ ಪಕ್ಕ, ಆರ್.ಟಿ ನಗರದಲ್ಲಿರುವ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು : ಡಿ.ಎಸ್. ಗೌಡ ಕುಟುಂಬ ಹಾಗೂ ಬಂಧು-ಮಿತ್ರರು. ಮೊ: 9845866666

ಚುಟುಕು ಸುದ್ದಿ

₹79,000 ಕೋಟಿ ಮೌಲ್ಯದ ಶಸ್ತ್ರಾಸ್ತ್ರ ಖರೀದಿಗೆ ಒಪ್ಪಿಗೆ



ನವದೆಹಲಿ (ಪಿಟಿಐ): ಸೇನಾ ಯುದ್ಧ ಸಾಮರ್ಥ್ಯಗಳನ್ನು ಹೆಚ್ಚಿಸಲು ₹79,000 ಕೋಟಿ ಮೌಲ್ಯದ ಖರೀದಿ ಪ್ರಸ್ತಾವನೆಗಳಿಗೆ ರಕ್ಷಣಾ ಸಚಿವಾಲಯ ಗುರುವಾರ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) ಸಭೆಯಲ್ಲಿ ಈ ಅನುಮೋದನೆ ನೀಡಲಾಗಿದೆ.

ನಾಗ್ ಕ್ಷಿಪಣಿಗಳು, ಮೂರೂ ಸಶಸ್ತ್ರ ಪಡೆಗಳು ಬಳಸಬಹುದಾದ ಯುದ್ಧ ಹಡಗುಗಳು ಮತ್ತು ಎಲೆಕ್ಟ್ರಾನಿಕ್ ಗುಪ್ತಚರ ಹಾಗೂ ಕಣ್ಗಾವಲು ವ್ಯವಸ್ಥೆಗಳು ಸೇರಿದಂತೆ ಶಸ್ತ್ರಾಸ್ತ್ರ ಮತ್ತು ಸೇನಾ ಹಾರ್ಡ್‌ವೇರ್‌ಗಳ ಖರೀದಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

‘ಆಪರೇಷನ್ ಸಿಂಧೂರ’ ನಡೆದ ನಂತರ ಶಸ್ತ್ರಾಸ್ತ್ರ ಖರೀದಿಗೆ ಸಂಬಂಧಿಸಿದ ಎರಡನೇ ನಿರ್ಧಾರ ಇದಾಗಿದೆ. ಆಗಸ್ಟ್ 5ರಂದು ₹67,000 ಕೋಟಿ ಮೌಲ್ಯದ ಖರೀದಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿತ್ತು.

ತೇಜಸ್ವಿ ಸಿಎಂ, ಸಹಾನಿ ಡಿಸಿಎಂ ಅಭ್ಯರ್ಥಿ

ಬಿಹಾರ ವಿಧಾನಸಭೆ ಚುನಾವಣೆ: ‘ಇಂಡಿಯಾ’ ಕೂಟದಿಂದ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆಗೆ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಹಾಗೂ ವಿಕಾಸಶೀಲ ಇನ್ಸಾನ್ ಪಕ್ಷದ (ವಿಐಪಿ) ಮುಖ್ಯಸ್ಥ ಮುಕೇಶ್ ಸಹಾನಿ ಅವರನ್ನು ಉಪಮುಖ್ಯ ಮಂತ್ರಿ ಅಭ್ಯರ್ಥಿಯನ್ನಾಗಿ ‘ಇಂಡಿಯಾ’ ಕೂಟ ಗುರುವಾರ ಘೋಷಿಸಿದೆ. ಈ ಮೂಲಕ, ಕೊನೆಗೂ ಮುಖ್ಯಮಂತ್ರಿ ಅಭ್ಯರ್ಥಿ ವಿಷಯದಲ್ಲಿ ಮಹಾಮೈತ್ರಿಕೂಟ ಒಮ್ಮತಕ್ಕೆ ಬಂದಿದೆ.



ತೇಜಸ್ವಿ ಯಾದವ್

ಆರ್‌ಜೆಡಿಯೊಂದಿಗಿನ ಭಿನ್ನಾಭಿಪ್ರಾಯಗಳನ್ನು ಶಮನಗೊಳಿಸಲು ಬುಧವಾರದಿಂದ ಪಟ್ನಾದಲ್ಲಿ ಬೀಡುಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಅಶೋಕ್ ಗೆಹಲೋತ್ ಅವರು ಮಾಧ್ಯಮಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು. ಈ ನಿರ್ಧಾರಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅನುಮೋದನೆ ನೀಡಿದ್ದಾರೆ ಎಂದೂ ತಿಳಿಸಿದರು.

‘ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಅವರೊಂದಿಗೆ ಸಮಾಲೋಚಿಸಿ ಹಾಗೂ ಮೈತ್ರಿ ಪಾಲುದಾರರೊಂದಿಗೆ ಚರ್ಚಿಸಿ ತೇಜಸ್ವಿ ಅವರನ್ನು ನಮ್ಮ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಮಾಡಿದ್ದೇವೆ. ಬಿಹಾರದ ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಗಮನದಲ್ಲಿಟ್ಟುಕೊಂಡು ಸಹಾನಿ ಹೆಸರನ್ನು ಘೋಷಿಸಲಾಗಿದೆ. ಇನ್ನೊಬ್ಬ ಉಪಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನು ಮುಂದಿನ ದಿನಗಳಲ್ಲಿ ಘೋಷಿಸಲಾಗುವುದು’ ಎಂದರು.

ಈ ನಡುವೆ, ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ದಲಿತ ಅಥವಾ ಮುಸ್ಲಿಂ ನಾಯಕರೊಬ್ಬರನ್ನು ಉಪಮುಖ್ಯ ಮಂತ್ರಿಯನ್ನಾಗಿ ಮಾಡಬೇಕೆಂದು ರಾಜ್ಯ ಕಾಂಗ್ರೆಸ್‌ನ ಗುಂಪೊಂದು ಒತ್ತಾಯಿಸಿದೆ.

ಗೊಂದಲ ನಿವಾರಿಸುವ ಪ್ರಯತ್ನ: ತೇಜಸ್ವಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಿ ಚುನಾವಣೆ ಎದುರಿಸುವುದು ಕಾಂಗ್ರೆಸ್‌ಗೆ ಸುತರಾಂ ಇಷ್ಟವಿರಲಿಲ್ಲ. ರಾಹುಲ್ ಗಾಂಧಿ ಅವರ ಮತ ಅಧಿಕಾರ ಯಾತ್ರೆಯಲ್ಲೂ ಈ ಬಗ್ಗೆ ಪರೋಕ್ಷ ಸಂದೇಶ ರವಾನಿಸಲಾಗಿತ್ತು. ಈ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳೋಣ ಎಂದು ಕಾಂಗ್ರೆಸ್ ನಾಯಕರು ಆರ್‌ಜೆಡಿ ನಾಯಕರಿಗೆ ಸ್ಪಷ್ಟಪಡಿಸಿದ್ದರು. ಇದರಿಂದ ಆರ್‌ಜೆಡಿ ನಾಯಕರು ಕೆರಳಿದ್ದರು.

ಸೀಟು ಹಂಚಿಕೆ ಕಗ್ಗಂಟು ಉಂಟಾಗಲು ಈ ಮನಸ್ತಾಪವೂ ಪ್ರಮುಖ ಕಾರಣ. ಈ ಬಿಕ್ಕಟ್ಟು ಬಗೆಹರಿಸುವ ಹೊಣೆಯನ್ನು ಗೆಹಲೋತ್ ಅವರಿಗೆ ಪಕ್ಷ ವಹಿಸಿತು. ಆರ್‌ಜೆಡಿ ನಾಯಕ ಲಾಲೂ ಪ್ರಸಾದ್ ಹಾಗೂ ತೇಜಸ್ವಿ ಯಾದವ್ ಅವರೊಂದಿಗೆ ಗೆಹಲೋತ್ ಸಂಧಾನ ಸಭೆಗಳನ್ನು ನಡೆಸಿದ ಬಳಿಕ ಸಿಎಂ ಹಾಗೂ ಡಿಸಿಎಂ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗಿದೆ. ಈ ಮೂಲಕ, ಮೈತ್ರಿಯ ಗೊಂದಲ ನಿವಾರಿಸುವ ಪ್ರಯತ್ನ ಮಾಡಲಾಗಿದೆ.

2020ರ ವಿಧಾನಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಕೂಟವು ಎನ್‌ಡಿಎಗಿಂತ 12,700 ಕಡಿಮೆ ಮತಗಳನ್ನು ಪಡೆದಿತ್ತು. ಈ ಸಲ ಸಣ್ಣ ಪಕ್ಷ ಹಾಗೂ ಸಮುದಾಯಗಳಿಗೆ ಮೈತ್ರಿಕೂಟ ಆದ್ಯತೆ ನೀಡಿದೆ.

ಜಾತಿ ಹಾಗೂ ಸಮುದಾಯಗಳಿಗೆ ಹೆಚ್ಚಿನ ಉಪಮುಖ್ಯಮಂತ್ರಿಗಳು ಇರುತ್ತಾರೆ ಎಂಬ ಸಂದೇಶದೊಂದಿಗೆ ಒಗ್ಗಟ್ಟು ಪ್ರದರ್ಶನ ಹಾಗೂ ಇಂಡಿಯಾ ಇನ್‌ಕ್ಲೂಸಿವ್ ಪಾರ್ಟಿಗಳಂತಹ ಹೊಸ ಪಕ್ಷಗಳ ಸೇರ್ಪಡೆಯಿಂದ ಮೈತ್ರಿಕೂಟ ಅಧಿಕಾರದ ಗದ್ದುಗೆ ಏರಬಹುದು ಎಂಬುದು ಮೈತ್ರಿಕೂಟದ ಲೆಕ್ಕಾಚಾರ.

ಚುನಾವಣಾ ವೇಳಾಪಟ್ಟಿ ಘೋಷಣೆಯಾದ ಬಳಿಕ ಮೈತ್ರಿಕೂಟದ ನಾಯಕರು ಮೊದಲ ಬಾರಿಗೆ ಒಗ್ಗಟ್ಟು ಪ್ರದರ್ಶಿಸಿದರು. ಆದರೆ, 10 ಕ್ಷೇತ್ರಗಳಲ್ಲಿ ಮೈತ್ರಿಕೂಟದ ಅಭ್ಯರ್ಥಿಗಳು ‘ಫ್ರೆಂಡ್ಲಿ ಫೈಟ್’ಗೆ ಅಣಿಯಾಗಿದ್ದಾರೆ. ‘ಮೈತ್ರಿಕೂಟದಲ್ಲಿ ಶೇ 1–2ರಷ್ಟು ಗೊಂದಲ ಸಾಮಾನ್ಯ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಂದಾಣಿಕೆ ಏರ್ಪಡಲಿದೆ’ ಎಂದು ನಾಯಕರು ವಿಶ್ವಾಸ ವ್ಯಕ್ತಪಡಿಸಿದರು

‘ಘಟಬಂಧನ್ ಅಲ್ಲ, ಲಟಬಂಧನ್’

ನವದೆಹಲಿ (ಪಿಟಿಐ): ‘ವಿರೋಧ ಪಕ್ಷಗಳದ್ದು ಘಟಬಂಧನ್ ಅಲ್ಲ, ಲಟಬಂಧನ್ (ಅಪರಾಧಿಗಳ ಕೂಟ)’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ವಾಗ್ದಾಳಿ ನಡೆಸಿದರು.

ನರೇಂದ್ರ ಮೋದಿ

ಘಟಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ತೇಜಸ್ವಿ ಯಾದವ್ ಅವರನ್ನು ಘೋಷಿಸಿದ ಬೆನ್ನಿಗೆ, ಪ್ರತಿಪಕ್ಷಗಳ ಒಕ್ಕೂಟದ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅವರು, ‘ಮೈತ್ರಿಕೂಟದಲ್ಲಿರುವ ನವದೆಹಲಿ ಹಾಗೂ ಬಿಹಾರದ ಎಲ್ಲ ನಾಯಕರು ಜಾಮೀನಿನ ಮೇಲೆ ಹೊರಗಿದ್ದಾರೆ’ ಎಂದರು.

‘ಬಿಹಾರದಲ್ಲಿದ್ದ ಜಂಗಲ್ ರಾಜ್ ಆಡಳಿತವನ್ನು ಇನ್ನೂ ನೂರು ವರ್ಷ ಚರ್ಚಿಸಲಾಗುವುದು. ಪ್ರತಿಪಕ್ಷಗಳು ತಮ್ಮ ದುಷ್ಕೃತ್ಯಗಳನ್ನು ಮರೆಮಾಚಲು ಎಷ್ಟೇ ಪ್ರಯತ್ನಿಸಿದರೂ ಜನರು ಕ್ಷಮಿಸುವುದಿಲ್ಲ’ ಎಂದಿದ್ದಾರೆ.

‘ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಅವರ ಆಡಳಿತದ ಅವಧಿಯ ‘ಜಂಗಲ್ ರಾಜ್’ನಲ್ಲಿ ನಡೆದ ದೌರ್ಜನ್ಯಗಳ ಬಗ್ಗೆ ಹಿರಿಯರು, ಯುವಕರಿಗೆ ತಿಳಿಸುವುದನ್ನು ಖಚಿತಪಡಿಸಿಕೊಳ್ಳಿ’ ಎಂದು ಮೋದಿ ಅವರು ಬಿಜೆಪಿ ಕಾರ್ಯಕರ್ತರಿಗೆ ಹೇಳಿದರು.

ಮುಕೇಶ್ ಸಹಾನಿ ಆಯ್ಕೆಗೆ ಕಾರಣವೇನು?

ರಾಜ್ಯದಲ್ಲಿ ಶೇ 9–10ರಷ್ಟಿರುವ ನಿಶಾದ್ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ ಸಹಾನಿ ಅವರನ್ನು ಉಪಮುಖ್ಯ-ಮಂತ್ರಿ ಅಭ್ಯರ್ಥಿಯನ್ನಾಗಿ ‘ಇಂಡಿಯಾ’ ಕೂಟವು ಆಯ್ಕೆ ಮಾಡಿತು. 2020ರಲ್ಲಿ ಮೈತ್ರಿಕೂಟದಿಂದ ಹೊರನಡೆದಿದ್ದ ಸಹಾನಿ ಅವರ ಬಗ್ಗೆ ಆರ್‌ಜೆಡಿ ನಾಯಕರು ಅನುಮಾನ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಹಾಗೂ ಎಡ ಪಕ್ಷಗಳ ನಾಯಕರ ಮನವೊಲಿಕೆ ಬಳಿಕ ಮಣಿದರು ಎಂದು ಮೂಲಗಳು ತಿಳಿಸಿವೆ.

ಮುಕೇಶ್ ಸಹಾನಿ

60 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ವಿಐಪಿ ಪಟ್ಟು ಹಿಡಿದಿತ್ತು. 15 ಕ್ಷೇತ್ರಗಳನ್ನಷ್ಟೇ ನೀಡಲು ಆರ್‌ಜೆಡಿ ಒಪ್ಪಿತ್ತು. ಸಿಪಿಐ (ಎಂಎಲ್) ಎಲ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಹಾಗೂ ರಾಹುಲ್ ಗಾಂಧಿ ಮಧ್ಯಪ್ರವೇಶದ ಬಳಿಕ ಮೈತ್ರಿಕೂಟದಲ್ಲಿ ಉಳಿಯಲು ವಿಐಪಿ ನಾಯಕರು ಒಪ್ಪಿದ್ದರು. ಸಹಾನಿ ಕೂಡ ಏಕೈಕ ಉಪಮುಖ್ಯಮಂತ್ರಿ ಅಭ್ಯರ್ಥಿಯಾಗಲು ಬಯಸಿದ್ದರು. ಆದರೆ, ಮೈತ್ರಿಕೂಟ ಅದಕ್ಕೆ ಮಣಿದಿಲ್ಲ.

ಲಾಲೂ ಅವರ ಪಕ್ಷವು ಯಾದವ–ಮುಸ್ಲಿಂ ಮತ ಬ್ಯಾಂಕ್ ಅನ್ನು ಬಹುವಾಗಿ ನೆಚ್ಚಿಕೊಂಡಿದೆ. ಎನ್‌ಡಿಎ ಮೈತ್ರಿಕೂಟವು ಕುರ್ಮಿ–ಪ್ರಬಲ ಜಾತಿಗಳ ಮತಗಳ ನೆರವಿನಿಂದ ಗೆದ್ದು ಬರುತ್ತಿದೆ. ಸಹಾನಿ ಅವರನ್ನು ಉಪಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸುವ ಮೂಲಕ ಅತಿ ಹಿಂದುಳಿದ ವರ್ಗಗಳಿಗೆ (ಇಬಿಸಿ) ಪ್ರಾಧಾನ್ಯ ನೀಡಲಾಗಿದೆ. ರಾಜ್ಯದಲ್ಲಿ ಇಬಿಸಿಗಳು ಶೇ 36ರಷ್ಟಿದ್ದಾರೆ.

ನಾರಾಯಣ ಗುರುಗಳ ಆದರ್ಶ ಆಧುನಿಕ ಜಗತ್ತಿಗೆ ಪ್ರಸ್ತುತ: ಮುರ್ಮು

ತಿರುವನಂತಪುರ (ಪಿಟಿಐ): ಭಾರತದ ಅತ್ಯಂತ ಶ್ರೇಷ್ಠ ಸಮಾಜ ಸುಧಾರಕ, ಆಧ್ಯಾತ್ಮಿಕ ನಾಯಕರಲ್ಲಿ ಶ್ರೀ ನಾರಾಯಣ ಗುರು ಅಗ್ರಗಣ್ಯರಾಗಿದ್ದು, ಸಮಾನತೆ–ಏಕತೆ ಕುರಿತಂತೆ ಅವರು ನೀಡಿರುವ ಸಂದೇಶ, ಆದರ್ಶಗಳು ಆಧುನಿಕ ಜಗತ್ತಿಗೆ ಅತಿ ಹೆಚ್ಚು ಪ್ರಸ್ತುತವಾಗಿವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಕೇರಳದ ವರ್ಕಳದ ಶಿವಗಿರಿ ಮಠದಲ್ಲಿ ಗುರುವಾರ ನಡೆದ ನಾರಾಯಣ ಗುರುಗಳ ಮಹಾಸಮಾಧಿಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮುರ್ಮು ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಅವರು, ‘ಜನರನ್ನು ಅಜ್ಞಾನದಿಂದ, ಕತ್ತಲಿನಿಂದ, ಮೌಢ್ಯದಿಂದ ಹೊರತರುವುದಕ್ಕಾಗಿಯೇ ಗುರುಗಳು ತಮ್ಮ ಇಡೀ ಜೀವನವನ್ನು ಮುಡಿಪಿಟ್ಟಿದ್ದರು. ಪ್ರತಿಯೊಂದು ಜೀವಾತ್ಮದಲ್ಲೂ ಪರಮಾತ್ಮನ ಅಸ್ತಿತ್ವವಿದೆ ಎಂದು ನಂಬಿದ್ದ ಅವರು, ಸಮಾನತೆ, ಏಕತೆ, ಮಾನವೀಯತೆ, ಪ್ರೀತಿ ಹಾಗೂ ತಮ್ಮ ಆದರ್ಶಗಳ ಮೂಲಕ ಪೀಳಿಗೆಗಳಿಗೆ ಪ್ರೇರಣೆ ನೀಡಿದ್ದರು’ ಎಂದಿದ್ದಾರೆ.

‘ಜ್ಞಾನ ಮತ್ತು ಸಹಾನುಭೂತಿಯಿಂದ ಮಾತ್ರ ಮುಕ್ತಿ ಸಾಧ್ಯವೇ ಹೊರತು ಅಂಧಭಕ್ತಿಯಿಂದ ಅಲ್ಲ ಎಂದು ನಂಬಿದ್ದ ಗುರುಗಳು, ಒಂದು ಜಾತಿ–ಒಂದು ಧರ್ಮ, ಮಾನವ ಕುಲಕ್ಕೆ ಒಬ್ಬನೇ ದೇವರು ಎಂದು ಸಾರಿದ್ದರು. ಅವರ ಬೋಧನೆಗಳು ಪ್ರತಿಯೊಬ್ಬ ಮನುಷ್ಯನಲ್ಲೂ ಇರುವ ದೈವತ್ವ ಒಂದೇ ಎಂಬುದನ್ನು ನಮಗೆ ನೆನಪಿಸುತ್ತದೆ’ ಎಂದು ಮುರ್ಮು ಹೇಳಿದ್ದಾರೆ.

‘ಮಾನವತೆಗೆ ಎದುರಾಗಿರುವ ಸಂಘರ್ಷಗಳಿಗೆಲ್ಲಾ ಗುರುಗಳ ಸಮಾನತೆ, ಏಕತೆ ಹಾಗೂ ಪರಸ್ಪರ ಗೌರವದ ಸಿದ್ಧಾಂತಗಳೇ ಪರಿಹಾರ. ಅವುಗಳನ್ನು ಅಳವಡಿಸಿಕೊಳ್ಳಬೇಕು’ ಎಂದೂ ಮುರ್ಮು ಕರೆ ನೀಡಿದ್ದಾರೆ.

ರಾಷ್ಟ್ರಪತಿ ಮುರ್ಮು ಟೀಕಿಸಿ ಸ್ಟೇಟಸ್ ಡಿವೈಎಸ್‌ಪಿ ವಿವರಣೆ ಕೇಳಿದ ಎಸ್‌ಪಿ

ಪಾಲಕ್ಕಾಡ್ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಶಬರಿಮಲೆ ದೇಗುಲಕ್ಕೆ ಭೇಟಿ ನೀಡಿದ್ದ ವೇಳೆ ಹಲವು ಧಾರ್ಮಿಕ ಪದ್ಧತಿಗಳು ಹಾಗೂ ಹೈಕೋರ್ಟ್ ಆದೇಶದ ಉಲ್ಲಂಘನೆಯಾಗಿದೆ ಎಂದು ವಾಟ್ಸ್‌ಆ್ಯಪ್‌ನಲ್ಲಿ ಡಿವೈಎಸ್‌ಪಿ ಒಬ್ಬರು ಸ್ಟೇಟಸ್ ಹಾಕಿದ್ದರು. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ಮುಖ್ಯಸ್ಥರು ಡಿವೈಎಸ್‌ಪಿ ಅವರಿಂದ ಸ್ಪಷ್ಟನೆ ಕೋರಿದ್ದಾರೆ.

ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ ಡಿವೈಎಸ್‌ಪಿ ಇದೀಗ ಆ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ‘ಇದು ಅಚಾತುರ್ಯದಿಂದ ಆದ ತಪ್ಪು’ ಎಂದು ಒಪ್ಪಿಕೊಂಡಿದ್ದಾರೆಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

‘ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ವಾಟ್ಸ್‌ಆ್ಯಪ್‌ಗೆ ಸಂದೇಶವೊಂದು ಬಂದಿತ್ತು. ಅದರಲ್ಲಿ ಮುರ್ಮು ಅವರ ಭೇಟಿ ವೇಳೆ ಶಬರಿಮಲೆಯಲ್ಲಿ ಕೆಲ ಸಂಪ್ರದಾಯ ಹಾಗೂ ಹೈಕೋರ್ಟ್ ಆದೇಶದ ಉಲ್ಲಂಘನೆಯಾಗಿದೆ ಎಂದು ಬರೆಯಲಾಗಿತ್ತು. ಆ ಸಂದೇಶ ಓದುತ್ತಿದ್ದ ಸಂದರ್ಭದಲ್ಲಿ ನನಗೇ ತಿಳಿಯದಂತೆ ಆ ಸಂದೇಶ ಸ್ಟೇಟಸ್‌ಗೆ ಅಪ್‌ಲೋಡ್ ಆಗಿದೆ. ಸ್ಟೇಟಸ್ ಗಮನಿಸಿ, ಕೆಲವು ಮಂದಿ ಕರೆ ಮಾಡಿ ವಿಚಾರಿಸಿದಾಗಲೇ ಸ್ಟೇಟಸ್ ಹಾಕಿರುವುದು ನನ್ನ ಗಮನಕ್ಕೆ ಬಂದಿದ್ದು’ ಎಂದು ಡಿವೈಎಸ್‌ಪಿ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

ನಕಲಿ ವಿಡಿಯೊ ಹಂಚಿಕೆ; ಬಿಜೆಪಿ ವಿರುದ್ಧ ಆಪ್ ಕಿಡಿ

ಚಂಡೀಗಢ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿಯು ನಕಲಿ ವಿಡಿಯೊ ಹಂಚುವ ಮೂಲಕ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಚಾರಿತ್ರ್ಯಹರಣದಲ್ಲಿ ನಿರತವಾಗಿದೆ ಎಂದು ಆಮ್‌ಆದ್ಮಿ ಪಕ್ಷ ಆರೋಪಿಸಿದೆ.

ಮಲ್ವಿಂದರ್ ಸಿಂಗ್ ಕಾಂಗ್

ಮೊರಿಂಡಾ ಪಟ್ಟಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಆಮ್ ಆದ್ಮಿ ಪಕ್ಷದ ಸಂಸದ ಹಾಗೂ ವಕ್ತಾರ ಮಲ್ವಿಂದರ್ ಸಿಂಗ್ ಕಾಂಗ್, ‘ಕೃತಕ ಬುದ್ಧಿಮತ್ತೆಯ ಮೂಲಕ ರಚಿಸಿದ ನಕಲಿ ವಿಡಿಯೊ ಬಳಸಿಕೊಂಡು, ಮುಖ್ಯಮಂತ್ರಿ ಮಾನ್ ಅವರ ಚಾರಿತ್ರ್ಯಹರಣ-ದಲ್ಲಿ ಬಿಜೆಪಿ ತೊಡಗಿದೆ’ ಎಂದು ಆರೋಪಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ವಿಷಯ ಹರಡಿದ ಆರೋಪದ ಮೇಲೆ ಕೆನಡ ಮೂಲದ ಜಗ್‌ಮನ್ ಸಮ್ರ ವಿರುದ್ಧ ಪಂಜಾಬ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಯಮುನಾ ಸ್ವಚ್ಛತಾಕಾರ್ಯ

ಪಿಟಿಐ ಚಿತ್ರ

‘ಛತ್’ ಹಬ್ಬ ಸಮೀಪಿಸುತ್ತಿರುವಂತೆಯೇ ದೆಹಲಿ ಜಲ ಮಂಡಳಿಯ ಕಾರ್ಮಿಕರು ಯಮುನಾ ನದಿಯಲ್ಲಿ ವಿಷಕಾರಿ ನೊರೆ ಹಾಗೂ ಮಾಲಿನ್ಯ ಮಟ್ಟವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಗುರುವಾರ ಕಾಳಿಂದಿ ಕುಂಜ್‌ನಲ್ಲಿ ನದಿಗೆ ರಾಸಾಯನಿಕ ಸಿಂಪಡಿಸಿದರು

₹252 ಕೋಟಿ ಮೌಲ್ಯದ ಡ್ರಗ್ಸ್ ವಶ: ಆರೋಪಿ ಬಂಧನ

ಮುಂಬೈ (ಪಿಟಿಐ): ₹252 ಕೋಟಿ ಮೌಲ್ಯದ ಮೆಫೆಡ್ರೋನ್ ಮಾದಕವಸ್ತು ಪ್ರಕರಣದ ಪ್ರಮುಖ ಆರೋಪಿ ಮಹಮ್ಮದ್ ಸಲೀಂ ಮಹಮ್ಮದ್ ಸೊಹೇಲ್ ಶೇಖ್ ಎಂಬಾತನನ್ನು ಬಂಧಿಸಿರುವುದಾಗಿ ಮುಂಬೈ ಪೊಲೀಸರು ಗುರುವಾರ ತಿಳಿಸಿದ್ದಾರೆ. ದುಬೈನಿಂದ ಈತನನ್ನು ಗಡಿಪಾರು ಮಾಡಲಾಗಿದೆ.

ಶೇಖ್ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಲಾಗಿತ್ತು. ಕೆಲ ದಿನಗಳ ಹಿಂದೆ ದುಬೈನಲ್ಲಿ ತನಿಖಾ ಸಂಸ್ಥೆಗಳು ಆತನನ್ನು ವಶಕ್ಕೆ ಪಡೆದು ಮುಂಬೈಗೆ ಕರೆತಂದವು. ಆಗ ಬಂಧಿಸಲಾಗಿದೆ ಎಂದು ಅಧಿಕಾರಿಯೊ-ಬ್ಬರು ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ ಮಾದಕ ವಸ್ತುಗಳ ತಯಾರಿಕಾ ಘಟಕಗಳನ್ನು ತೆರೆಯಲು ಶೇಖ್ ಹವಣಿಸುತ್ತಿದ್ದ. ಉತ್ತೇಜಕ ಔಷಧದ ರೂಪದಲ್ಲಿ ಬಳಸುವ ಸಂಶ್ಲೇಷಿತ ಉದ್ದೀಪನ ವಸ್ತು ಮೆಫೆಡ್ರೋನ್ ಮಾರಾಟಕ್ಕೆ ಪ್ರಯತ್ನಿಸು-ತ್ತಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.

ಒಂದು ಮತಕಳವಿಗೆ ₹80 ‘ಕೂಲಿ’

ಒಂದನೇ ಪುಟದಿಂದ..

‘ಮೊಹಮ್ಮದ್ ಅಶ್ಫಾಕ್ ಮತ್ತು ಅಕ್ರಂ ಅವರು ಆ ಮೂರು ತಿಂಗಳ ಅವಧಿಯಲ್ಲಿ, ಇತರ ಮೂವರಿಗೂ ನಿಯಮಿತವಾಗಿ ದೊಡ್ಡ ಮೊತ್ತದ ಹಣ ಪಾವತಿ ಮಾಡಿದ್ದಾರೆ. ಈ ಅಕ್ರಮ ಎಸಗಲು ಮೊಹಮ್ಮದ್ ಅಶ್ಫಾಕ್ ಮತ್ತು ಅಕ್ರಂ ಅವರಿಗೆ ಚಾರ್ಟರ್ಡ್ ಅಕೌಂಟೆಂಟ್ ಒಬ್ಬರ ಮೂಲಕ ಹಣ ಪಾವತಿಯಾಗಿದೆ. ಚಾರ್ಟರ್ಡ್ ಅಕೌಂಟೆಂಟ್‌ಗೆ ಕಲಬುರಗಿಯ ಬಾರ್ ಆ್ಯಂಡ್ ರೆಸ್ಟೋರೆಂಟ್ ಉದ್ಯೋಗಿ ಒಬ್ಬರ ಖಾತೆ ಮೂಲಕ ಹಣ ನೀಡಲಾಗಿದೆ. ಬಾರ್ ಉದ್ಯೋಗಿಯ ಖಾತೆಗೆ ಹಣ ಜಮೆ ಮಾಡಿದವರು ಯಾರು ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಆಳಂದ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಸುಭಾಷ ಗುತ್ತೇದಾರ ಅವರ ಮನೆ, ಕಚೇರಿ ಮತ್ತು ಅವರ ಒಡೆತನದ ಸಪ್ನಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಮೇಲೆ ತನಿಖೆಯ ಭಾಗವಾಗಿ ಎಸ್‌ಐಟಿ ಅಧಿಕಾರಿಗಳು ಈಚೆಗೆ ದಾಳಿ ನಡೆಸಿದ್ದರು. ಕಲಬುರಗಿಯ ಇಬ್ಬರು ಸಿ.ಎಗಳ ಮನೆ–ಕಚೇರಿಗಳಲ್ಲೂ ಶೋಧ ನಡೆಸಿದ್ದರು. ಇದೇ ವೇಳೆ ಗುತ್ತೇದಾರ ಅವರ ಆಳಂದದ ಮನೆ ಎದುರು ದಾಖಲೆ ಪತ್ರಗಳಿಗೆ ಬೆಂಕಿ ಹಾಕಲಾಗಿತ್ತು.

ಲಾಗಿನ್ ಬಿಗಿಗೊಳಿಸಿದ ಆಯೋಗ

ಮತದಾರರ ಚೀಟಿ ರದ್ದುಪಡಿಸುವ ಅಥವಾ ಸೇರಿಸುವ ಉದ್ದೇಶದಿಂದ ಅರ್ಜಿ ಸಲ್ಲಿಸಲು ಚುನಾವಣಾ ಆಯೋಗದ ಪೋರ್ಟಲ್‌ಗೆ ಲಾಗಿನ್ ಆಗುವ ವಿಧಾನವನ್ನು, ಆಯೋಗವು ಬಿಗಿಗೊಳಿಸಿದೆ.

ಈ ಮೊದಲು ಎಪಿಕ್ ಸಂಖ್ಯೆ (ಮತದಾರರ ಚೀಟಿ ಸಂಖ್ಯೆ), ಯಾವುದಾದರೂ ಮೊಬೈಲ್ ಸಂಖ್ಯೆಯನ್ನು ಬಳಸಿಕೊಂಡು ಈ ಪೋರ್ಟಲ್‌ಗೆ ಲಾಗಿನ್ ಆಗಬಹುದಾಗಿತ್ತು. ಎಪಿಕ್ ಒಬ್ಬರದು, ಮೊಬೈಲ್ ಇನ್ಯಾರದ್ದೋ ಆಗಿದ್ದರೂ ಲಾಗಿನ್ ಆಗಬಹುದಾಗಿತ್ತು. ಆಳಂದ ಕ್ಷೇತ್ರದ ಪ್ರಕರಣದಲ್ಲಿ ಹೀಗೆಯೇ ಬೇರೆ–ಬೇರೆಯವರ ವಿವರಗಳನ್ನು ಬಳಸಿಕೊಂಡು ಲಾಗಿನ್ ಆಗಲಾಗಿತ್ತು.

ಆದರೆ ಈಗ ಎಪಿಕ್ ಯಾರದ್ದೋ, ಅವರ ಆಧಾರ್ ಜತೆಗೆ ಜೋಡಿಸಿರುವ ಮೊಬೈಲ್ ಸಂಖ್ಯೆ ಇದ್ದರಷ್ಟೇ ಲಾಗಿನ್ ಸಾಧ್ಯವಾಗುವಂತೆ ಚುನಾವಣಾ ಆಯೋಗವು ಬದಲಾವಣೆ ಮಾಡಿದೆ. ಜತೆಗೆ ಒಂದು ಲಾಗಿನ್‌ನಿಂದ ಹಲವು ಅರ್ಜಿಗಳನ್ನು ಸಲ್ಲಿಸಲು ಇದ್ದ ಅವಕಾಶವನ್ನು ಮಿತಿಗೊಳಿಸಿದೆ.

ಆಳಂದ ಕ್ಷೇತ್ರದಲ್ಲಿ ಅಕ್ರಮವಾಗಿ 6,000ಕ್ಕೂ ಹೆಚ್ಚು ಮತದಾರರ ಚೀಟಿಗಳನ್ನು ರದ್ದುಪಡಿಸಲು ಯತ್ನಿಸಲಾಗಿತ್ತು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೆಪ್ಟೆಂಬರ್ 18ರಂದು ಸುದ್ದಿ-ಗೋಷ್ಠಿಯಲ್ಲಿ ಆರೋಪಿಸಿದ್ದರು. ಮತಕಳವು ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಿ ರಾಜ್ಯ ಸರ್ಕಾರವು ಸೆಪ್ಟೆಂಬರ್ 20ರಂದು ಆದೇಶಿಸಿತ್ತು. ಸೆಪ್ಟೆಂಬರ್ 24ರಂದು ಆಯೋಗವು ಈ ಬದಲಾವಣೆಗಳನ್ನು ಜಾರಿಗೆ ತಂದಿತ್ತು.

‘ಶಕ್ತಿ’ ಪ್ರದರ್ಶನಕ್ಕೆ ಪೈಪೋಟಿ

ಒಂದನೇ ಪುಟದಿಂದ...

‘ರಾಜ್ಯ ಸರ್ಕಾರ ಈಗಾಗಲೇ ಗೊಂಡ ಪರ್ಯಾಯ ಪದವಾದ ಕುರುಬ ಸಮಾಜವನ್ನು ಎಸ್ಟಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ 11 ವರ್ಷಗಳು ಕಳೆದಿವೆ. ಆದರೆ, ಈತನಕ ಕೇಂದ್ರ ಸರ್ಕಾರ ಎಸ್‌.ಟಿ ಮೀಸಲಾತಿ ನೀಡಿಲ್ಲ. ಇದನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಚಿತ್ತಾಪುರದ ಕನಕ ಭವನದಿಂದ ತಹಶೀಲ್ದಾರ್ ಕಚೇರಿ ತನಕ ನ.2ರಂದು ಪ್ರತಿಭಟನಾ ಮೆರವಣಿಗೆ ನಡೆಸಲು ಅನುಮತಿ ನೀಡಬೇಕು’ ಎಂದು ಗೊಂಡ–ಕುರುಬ ಎಸ್‌.ಟಿ ಹೋರಾಟ ಸಮಿತಿ ಮನವಿ ಸಲ್ಲಿಸಿದೆ.

‘ರಾಜ್ಯ ಹಾಗೂ ದೇಶದಲ್ಲಿ ಶಾಂತಿ, ಸಹಬಾಳ್ವೆ ಹಾಗೂ ನೆಮ್ಮದಿಗಾಗಿ ನ.2ರಂದು ‘ಪ್ರೇಯರ್ ವಾಕ್’ (ಪ್ರಾರ್ಥನಾ ನಡಿಗೆ) ನಡೆಸಲು ಅವಕಾಶ ನೀಡಬೇಕು’ ಎಂದು ಕೋರಿ ಇಂಡಿಯನ್ ಕ್ರಿಶ್ಚಿಯನ್ ವೆಲ್‌ಫೇರ್ ಅಸೋಸಿಯೇಷನ್ ಕರ್ನಾಟಕ ಸಂಘಟನೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದೆ.

‘ಅತಿವೃಷ್ಟಿಯಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದ್ದು, ಎನ್‌ಡಿಆರ್‌ಎಫ್ ಪರಿಹಾರ ವಿತರಣೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಮಹಾರಾಷ್ಟ್ರಕ್ಕೆ ₹1,566 ಕೋಟಿ ಪರಿಹಾರ ಘೋಷಿಸಿದ್ದರೆ, ಕರ್ನಾಟಕಕ್ಕೆ ಬರೀ ₹385 ಕೋಟಿ ಕೊಟ್ಟಿದೆ. ಈ ತಾರತಮ್ಯ ಖಂಡಿಸಿ ಹಸಿರು ಶಾಲು ಹಾಗೂ ಬಾರಕೋಲು ಹಿಡಿದು ನ.2ರಂದು ಪಥಸಂಚಲನ ನಡೆಸಲು ಅವಕಾಶ ನೀಡಬೇಕು’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕ ಮನವಿ ಮಾಡಿದೆ.

‘ಆರ್‌ಎಸ್‌ಎಸ್‌ಗೆ ಲಾಠಿ ಹಿಡಿದು ಪಥಸಂಚಲನಕ್ಕೆ ಅವಕಾಶ ನೀಡಿದರೆ, ಬೇರೆ ಸಂಘಟನೆಯವರೂ ತಮ್ಮಿಷ್ಟದಂತೆ ಲಾಠಿ, ತಲವಾರ, ಚಾಕು ಸೇರಿ ವಿವಿಧ ಆಯುಧಗಳ ಪ್ರದರ್ಶನಕ್ಕೆ ಅವಕಾಶ ನೀಡಬೇಕಾಗುತ್ತದೆ. ಹೀಗಾಗಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡಬಾರದು. ಒಂದೊಮ್ಮೆ ಆರ್‌ಎಸ್‌ಎಸ್‌ಗೆ ಅನುಮತಿ ನೀಡಿದರೆ, ಭೀಮ್ ಆರ್ಮಿ ಹಾಗೂ ವಿವಿಧ ಸಂಘಟನೆಗಳ ಜೊತೆಗೆ ನಮ್ಮ ಸಂಘಟನೆಯಿಂದಲೂ ಪರ್ಯಾಯವಾಗಿ ಪಥಸಂಚಲನ ನಡೆಸುತ್ತೇವೆ’ ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಎಚ್ಚರಿಸಿದೆ. ಇನ್ನೊಂದೆಡೆ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿದ ಸೌಹಾರ್ದ ಕರ್ನಾಟಕ ಸಂಘಟನೆಯ ಮುಖಂಡರು, ‘ಚಿತ್ತಾಪುರ ದಲ್ಲಿ ಆರ್‌ಎಸ್‌ಎಸ್‌ಗೆ ಪಥಸಂಚಲನಕ್ಕೆ ಅನುಮತಿ ನೀಡಬಾರದು’ ಎಂದು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಅಡುಗೆ ಸಹಾಯಕ ಅಮಾನತು

ಬಸವಕಲ್ಯಾಣ (ಬೀದರ್ ಜಿಲ್ಲೆ): ನಗರದಲ್ಲಿ ಅಕ್ಟೋಬರ್ 14ರಂದು ನಡೆದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಪಾಲ್ಗೊಂಡ ಬಗ್ಗೆ ವಾಟ್ಸ್‌ಆ್ಯಪ್‌ನಲ್ಲಿ ದೂರು ಬಂದಿದ್ದರಿಂದ ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯದ ಅಡುಗೆ ಸಹಾಯಕ ಪ್ರಮೋದಕುಮಾರ ಅವರನ್ನು ಅಮಾನತು ಮಾಡಲಾಗಿದೆ.

ಪ್ರಮೋದಕುಮಾರ ಅವರು ಗಣವೇಷ ಧರಿಸಿ ಪಾಲ್ಗೊಂಡಿದ್ದರಿಂದ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಶಬರಿಮಲೆ: ಮಾಜಿ ಎ.ಒ ವಶಕ್ಕೆ

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ದೇವಸ್ಥಾನದ ಮಾಜಿ ಆಡಳಿತಾಧಿಕಾರಿ ಬಿ. ಮುರಾರಿ ಬಾಬು ಅವರನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ವಶಕ್ಕೆ ಪಡೆದಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಚಂಗನಾಶ್ಶೇರಿ ಗ್ರಾಮದ ಬಾಬು ಅವರ ನಿವಾಸದಲ್ಲಿ ಅವರನ್ನು ಎಸ್‌ಐಟಿ ತಂಡದವರು ಬುಧವಾರ ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ಹೇಳಿವೆ. ಬಳಿಕ ಅವರನ್ನು ವಿಚಾರಣೆ ಸಲುವಾಗಿ ತಿರುವನಂತಪುರದ ಅಪರಾಧ ವಿಭಾಗಕ್ಕೆ ಸ್ಥಳಾಂತರಿಸಲಾ-ಗಿದೆ. ಚಿನ್ನ ಕಳವು ಪ್ರಕರಣದ ಬೆನ್ನಲ್ಲೇ ಬಾಬು ಅವರನ್ನು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಮಾನತುಗೊಳಿಸಿದೆ.

ಶಬರಿಮಲೆ ದೇಗುಲದ ದ್ವಾರ ಪಾಲಕರ ವಿಗ್ರಹಗಳಲ್ಲಿ ಮತ್ತು ಶ್ರೀಕೋವಿಲ್‌ನ (ಗರ್ಭಗುಡಿ) ಬಾಗಿಲಿನ ಚೌಕಟ್ಟುಗಳಿಂದ ಚಿನ್ನ ಕಣ್ಮರೆ ಪ್ರಕರಣಗಳಲ್ಲಿ ಬಾಬು ಆರೋಪಿಯಾಗಿದ್ದಾರೆ.

ಆಸ್ತಿ ಮಾರಾಟ: ಪ್ರಾಪ್ತ ವಯಸ್ಸಿಗೆ ಬಂದ ಮಕ್ಕಳು ನಿರಾಕರಿಸಬಹುದು

ನವದೆಹಲಿ (ಪಿಟಿಐ): ಅಪ್ರಾಪ್ತ ವಯಸ್ಕರಾಗಿದ್ದಾಗ ತಮ್ಮ ಹೆಸರಿನಲ್ಲಿದ್ದ ಆಸ್ತಿಯನ್ನು ಪೋಷಕರು ನ್ಯಾಯಾಲಯದ ಪೂರ್ವಾನುಮತಿ ಪಡೆಯದೆ ಮಾರಿದ್ದರೆ, ಅಂತಹ ಆಸ್ತಿ ವರ್ಗಾವಣೆಯನ್ನು ಆ ಮಕ್ಕಳು ಪ್ರಾಪ್ತ ವಯಸ್ಕರಾದ ಬಳಿಕ ನಿರಾಕರಿಸಲು ಮೊಕದ್ದಮೆ ಹೂಡಬೇಕಾದ ಅಗತ್ಯವೇನಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಮಹತ್ವದ ತೀರ್ಪು ನೀಡಿದೆ.

ಅಪ್ರಾಪ್ತ ವಯಸ್ಸಿನ ಮಕ್ಕಳು, ಪ್ರಾಪ್ತ ವಯಸ್ಕರಾದ ಬಳಿಕ ಸ್ವತಂತ್ರವಾಗಿ ಆ ಆಸ್ತಿಯನ್ನು ಮಾರಾಟ ಮಾಡುವ ಅಥವಾ ವರ್ಗಾಯಿಸುವ ಮೂಲಕ ಹಿಂದಿನ ಆಸ್ತಿ ವರ್ಗಾವಣೆಯನ್ನು ಧಿಕ್ಕರಿಸಬಹುದು ಎಂದು ಸುಪ್ರೀಂ ಕೋರ್ಟ್ ಅಕ್ಟೋಬರ್ 7ರ ತೀರ್ಪಿನಲ್ಲಿ ಹೇಳಿದೆ. ಆಸ್ತಿ ಮಾರಾಟ ನಿರಾಕರಿಸಲು ಮೊಕದ್ದಮೆ ಹೂಡಬೇಕು ಎಂಬುದು ಕಡ್ಡಾಯವೇನಲ್ಲ ಎಂದು ಅದು ತಿಳಿಸಿದೆ. ದಾವಣಗೆರೆಯ ಕೆ.ಎಸ್‌. ಶಿವಪ್ಪ ವರ್ಸಸ್ ಕೆ. ನೀಲಮ್ಮ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಪಂಕಜ್ ಮಿಥಲ್ ಮತ್ತು ಪ್ರಸನ್ನ ಬಿ ವರಾಳೆ ಅವರ ಪೀಠವು ತೀರ್ಪು ಪ್ರಕಟಿಸಿದೆ.

ನಾಲ್ಕು ಗಂಟೆಗಳ ಕಾಲ ರೈಲುಗಳ ಸಂಚಾರದಲ್ಲಿ ವ್ಯತ್ಯಯ

ಅಸ್ಸಾಂ: ಹಳಿ ಮೇಲೆ ಐಇಡಿ ಸ್ಫೋಟ

ಪ್ರಜಾವಾಣಿ ವಾರ್ತೆ

ಗುವಾಹಟಿ: ಪಶ್ಚಿಮ ಅಸ್ಸಾಂನ ಬೊಡೊಲ್ಯಾಂಡ್ ಪ್ರಾಂತ್ಯದ (ಬಿಟಿಆರ್) ಕೋಕ್ರಾಝಾರ್ ಸಮೀಪದಲ್ಲಿರುವ ರೈಲು ಹಳಿಯ ಮೇಲೆ ದುಷ್ಕರ್ಮಿಗಳು ಕಚ್ಚಾ ಬಾಂಬ್ (ಐಇಡಿ) ಸ್ಫೋಟಿಸಿರುವ ಘಟನೆ ಗುರುವಾರ ನಡೆದಿದೆ.

ಇದರಿಂದಾಗಿ ನಾಲ್ಕು ಗಂಟೆಗಳ ಕಾಲ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿದ್ದು, ಎಂಟು ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿತ್ತು.

ಸಾಂದರ್ಭಿಕ ಚಿತ್ರ

ಈಶಾನ್ಯ ಗಡಿನಾಡು ರೈಲ್ವೆ ಅಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಕೋಕ್ರಾಝಾರ್ ಮಾರ್ಗವಾಗಿ ತೆರಳುತ್ತಿದ್ದ ಸರಕು ಸಾಗಣೆ ರೈಲು ಜರ್ಕ್‌ನಿಂದಾಗಿ ತಡರಾತ್ರಿ 1 ಗಂಟೆ ಸಮಯಕ್ಕೆ ನಿಲ್ಲುವಂತಾಗಿತ್ತು. ಬಳಿಕ ಪರಿಶೀಲಿಸಿದಾಗ ರೈಲು ಹಳಿಗಳ ಮೇಲೆ ಕಚ್ಚಾ ಬಾಂಬ್ ಸ್ಫೋಟಿಸಿರುವ ಶಂಕೆ ವ್ಯಕ್ತವಾಗಿದೆ ಎಂದಿದ್ದಾರೆ.

ಸ್ಫೋಟದಿಂದ ಹಳಿಗಳು ಹಾನಿಗೀಡಾಗಿದ್ದು, ಬೆಳಿಗಿನ ಜಾವ 5.25ಕ್ಕೆ ಅವುಗಳನ್ನು ಸರಿಪಡಿಸಿ, ರೈಲುಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಪ್ರಕರಣದ ತನಿಖೆಯನ್ನು ಆರ್‌ಪಿಎಫ್ ಮತ್ತು ಗುಪ್ತಚರ ಅಧಿಕಾರಿಗಳು ನಡೆಸುತ್ತಿದ್ದಾರೆ ಎಂದೂ ತಿಳಿಸಿದ್ದಾರೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಘಟನೆಯನ್ನು ಖಂಡಿಸಿದ್ದಾರೆ. ಜತೆಗೆ ದಾಳಿಯ ಹಿಂದಿರುವ ಶಂಕಿತ ವ್ಯಕ್ತಿಯನ್ನು ಗುರುತಿಸಲಾಗಿದೆ ಆತನನ್ನು ಬಂಧಿಸುವ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ.

ಹಿಂಸಾಚಾರದ ಭೀತಿ: ಬೊಡೊಲ್ಯಾಂಡ್ ಪ್ರಾಂತ್ಯದಲ್ಲಿ ಆಗಾಗ ನಡೆಯುತ್ತಲೇ ಇದ್ದ ಸಂಘರ್ಷಕ್ಕೆ 2020ರಲ್ಲಿ ಹೊಸದಾಗಿ ಬೊಡೊಲ್ಯಾಂಡ್ ಮಂಡಳಿ ಸೃಷ್ಟಿಸುವ ಮೂಲಕ ಅಂತ್ಯ ಹಾಡಲಾಗಿತ್ತು.

ಪ್ರದೇಶದಲ್ಲಿನ ಬಂಡುಕೋರರು ಕೂಡ ಶಸ್ತ್ರ ತ್ಯಜಿಸಿ ಮುಖ್ಯವಾಹಿನಿಗೆ ಸೇರಿದ್ದರು. ಆದರೆ, ಗುರುವಾರ ನಡೆದಿರುವ ಸ್ಫೋಟ ಬಿಟಿಆರ್‌ನಲ್ಲಿ ಹೊಸ ಸಂಘರ್ಷಕ್ಕೆ ನಾಂದಿ ಹಾಡುವುದೇ ಎಂಬ ಭೀತಿ ಶುರುವಾಗಿದೆ. ಶಾಂತಿ ಕದಡಲು ಯತ್ನಿಸಿರುವವರ ವಿರುದ್ಧ ಕ್ರಮಕ್ಕೆ ಸ್ಥಳೀಯ ಪಕ್ಷಗಳು ಆಗ್ರಹಿಸಿವೆ.

ಶೂ ಪ್ರಕರಣ: 27ಕ್ಕೆ ‘ಸುಪ್ರೀಂ’ ವಿಚಾರಣೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್‌.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಹಿರಿಯ ವಕೀಲ ರಾಕೇಶ್ ಕಿಶೋರ್ ಅವರನ್ನು ನ್ಯಾಯಾಂಗ ನಿಂದನೆಗೆ ಗುರಿಪಡಿಸುವ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇದೇ 27ರಂದು ನಡೆಸಲಿದೆ.

ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ಪ್ರಕರಣಗಳ ವೇಳಾಪಟ್ಟಿ ಪ್ರಕಾರ, ಸುಪ್ರೀಂ ಕೋರ್ಟ್‌ನ ವಕೀಲರ ಸಂಘ (ಎಸ್‌ಸಿಬಿಎ) ಸಲ್ಲಿಸಿರುವ ಈ ಕುರಿತ ಅರ್ಜಿಯ ವಿಚಾರಣೆ ಇದೇ 27ರಂದು ನಡೆಯಲಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ವಿಚಾರಣೆ ನಡೆಸಲಿದೆ.

ನಾಲ್ಕರ ಘಟ್ಟಕ್ಕೆ ಹರ್ಮನ್ ಪಡೆ

ಮಂದಾನ, ಪ್ರತೀಕಾ ಶತಕಗಳ ಭರಾಟೆಯಲ್ಲಿ ಬಸವಳಿದ ನ್ಯೂಜಿಲೆಂಡ್

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಮಹಿಳೆಯರ ಕ್ರಿಕೆಟ್ ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆಸ್ಟ್ರೇಲಿಯಾ	6	5	0	1	11	1.704
ದಕ್ಷಿಣ ಆಫ್ರಿಕಾ	6	5	1	0	10	0.276
ಇಂಗ್ಲೆಂಡ್	6	4	1	1	9	1.024
ಭಾರತ	6	3	3	0	6	0.628
ನ್ಯೂಜಿಲೆಂಡ್	6	1	3	2	4	-0.490
ಶ್ರೀಲಂಕಾ	6	1	3	2	4	-1.035
ಬಾಂಗ್ಲಾದೇಶ	6	1	5	0	2	-0.578
ಪಾಕಿಸ್ತಾನ	6	0	4	2	2	-2.651

ನವಿ ಮುಂಬೈ (ಪಿಟಿಐ): ಸ್ಮೃತಿ ಮಂದಾನ (109; 95ಎ) ಮತ್ತು ಪ್ರತೀಕಾ ರಾವಲ್ (122;134ಎ) ಅವರ ಶತಕಗಳ ಆರ್ಭಟದಿಂದಾಗಿ ಭಾರತ ಮಹಿಳಾ ಕ್ರಿಕೆಟ್ ತಂಡವು ಗುರುವಾರ ನ್ಯೂಜಿಲೆಂಡ್ ತಂಡವನ್ನು ಡಕ್ವರ್ಥ್ ಲೂಯಿಸ್ ನಿಯಮದನ್ವಯ 53 ರನ್‌ಗಳಿಂದ ಮಣಿಸಿ, ಮಹಿಳೆಯರ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಮುನ್ನಡೆಯಿತು.

ಗುರುವಾರ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 49 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 340 ರನ್ ಗಳಿಸಿತು. ಮಳೆ ಬಂದ ಕಾರಣ ಭಾರತದ ಇನಿಂಗ್ಸ್‌ನಲ್ಲಿ ಒಂದು ಓವರ್ ಕಡಿತ ಮಾಡಿ ಆಡಿಸಲಾಗಿತ್ತು. ಮತ್ತೆಯೂ ಮಳೆ ಸುರಿದ ಕಾರಣ ಡಿಎಲ್‌ಎಸ್ ನಿಯಮದನ್ವಯ ನ್ಯೂಜಿಲೆಂಡ್ ತಂಡಕ್ಕೆ ಗುರಿಯನ್ನು 325 ರನ್‌ಗಳಿಗೆ (44 ಓವರ್‌ಗಳಲ್ಲಿ) ಪರಿಷ್ಕರಿಸಲಾಯಿತು.

ಗುರಿಯನ್ನು ಬೆನ್ನಟ್ಟಿದ ನ್ಯೂಜಿಲೆಂಡ್ 8 ವಿಕೆಟ್‌ಗೆ 271 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಎರಡನೇ ಓವರ್‌ನಲ್ಲೇ ಕ್ರಾಂತಿ ಗೌಡ್ ಅವರು ಆರಂಭಿಕ ಆಟಗಾರ್ತಿ ಸೂಝಿ ಬೇಟ್ಸ್ ಅವರ ವಿಕೆಟ್ ಪಡೆದು ಆಘಾತ ನೀಡಿದರು. ನಂತರದಲ್ಲಿ ಅಮೆಲಿಯಾ ಕೆರ್ (45; 53ಎ), ಬ್ರೂಕ್ ಹ್ಯಾಲಿಡೇ (81;84ಎ) ಮತ್ತು ವಿಕೆಟ್ ಕೀಪರ್ ಇಸಾಬೆಲ್ಲಾ ಗೇಜ್ (ಔಟಾಗದೇ 65;51ಎ) ಅವರು ಹೋರಾಟ ತೋರಿದರೂ ಗೆಲುವಿಗೆ ಅದು ಸಾಕಾಗಲಿಲ್ಲ. ಭಾರತದ ಪರ ರೇಣುಕಾ ಸಿಂಗ್ ಮತ್ತು ಕ್ರಾಂತಿ ಗೌಡ್ ತಲಾ ಎರಡು ವಿಕೆಟ್ ಪಡೆದರು.

ಈ ಗೆಲುವಿನೊಂದಿಗೆ ಭಾರತ, ನಾಲ್ಕನೇ ತಂಡವಾಗಿ ಸೆಮಿಫೈನಲ್ ಪ್ರವೇಶಿಸಿತು. ಇದಕ್ಕೂ ಮುನ್ನ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ನಾಲ್ಕರ ಘಟ್ಟಕ್ಕೆ ಮುನ್ನಡೆದಿದ್ದವು. ಈ ಸೋಲಿನೊಂದಿಗೆ ನ್ಯೂಜಿಲೆಂಡ್ ತಂಡದ ಸೆಮಿಫೈನಲ್ ಕನಸು ಕಮರಿತು. ಟೂರ್ನಿಯಲ್ಲಿರುವ ಎಲ್ಲಾ ಎಂಟು ತಂಡಗಳಿಗೆ ಗುಂಪು ಹಂತದಲ್ಲಿ ತಲಾ ಒಂದು ಪಂದ್ಯ ಬಾಕಿ ಉಳಿದಿವೆ. ಭಾರತವು ಇದೇ 26ರಂದು ತನ್ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಇದಕ್ಕೂ ಮುನ್ನ ನ್ಯೂಜಿಲೆಂಡ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭರ್ತಿ ಆತ್ಮವಿಶ್ವಾಸದೊಂದಿಗೆ ಕ್ರೀಸ್‌ಗೆ ಬಂದ ಆರಂಭಿಕ ಜೋಡಿ ಸ್ಮೃತಿ ಮತ್ತು ಪ್ರತೀಕಾ ಕಿವೀಸ್ ಬೌಲರ್‌ಗಳಿಗೆ ಕಬ್ಬಿಣದ ಕಡಲೆಯಾದರು. ಟೂರ್ನಿಯ ಆರಂಭಿಕ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಸ್ಮೃತಿ ಶತಕ ದಾಖಲಿಸಿದರು.

ವಿಶ್ವಕಪ್ ಇತಿಹಾಸದಲ್ಲಿ ಸ್ಮೃತಿಗೆ ಮೂರನೇ ಶತಕ ಇದಾಗಿದೆ. ಆಫ್‌ಸ್ಪಿನ್ನರ್ ಈಡನ್ ಕ್ಯಾರ್ಸನ್ ಅವರ ಎಸೆತವನ್ನು ಸಿಕ್ಸರ್‌ಗೆತ್ತುವ ಮೂಲಕ ನೂರರ ಗಡಿ ದಾಟಿದರು. ಇದು ಅವರಿಗೆ ಒಟ್ಟಾರೆ 14ನೇ ಏಕದಿನ ಕ್ರಿಕೆಟ್ ಶತಕವಾಗಿದೆ. ಆಸ್ಟ್ರೇಲಿಯಾದ ಮೆಗ್ ಲ್ಯಾನಿಂಗ್ (15 ಶತಕ) ದಾಖಲೆ ಸರಿಗಟ್ಟಲು ಸ್ಮೃತಿಗೆ ಇನ್ನೊಂದು ಹೆಜ್ಜೆ ಮಾತ್ರ ಬಾಕಿ ಇದೆ.

ಪ್ರತೀಕಾ ಅವರಿಗೆ ವಿಶ್ವಕಪ್ ಟೂರ್ನಿಯಲ್ಲಿ ಇದು ಮೊದಲ ಶತಕ. ಮೊದಲ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ ದಾಖಲೆಯ 212 ರನ್ ಸೇರಿಸಿದರು. ಇದರಿಂದಾಗಿ ತಂಡವು ಪ್ರಸಕ್ತ ಟೂರ್ನಿಯ ಗರಿಷ್ಠ ಮೊತ್ತವನ್ನು ದಾಖಲಿಸಿತು. ಪ್ರತೀಕಾ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಜೆಮಿಮಾ ರಾಡ್ರಿಗಸ್ ಅವರೊಂದಿಗೆ 76 ರನ್ ಕಲೆಹಾಕಿದರು. ಜೆಮಿಮಾ ಅವರಿಗೆ ಒಂದು ಜೀವದಾನ ಲಭಿಸಿತು. ಇದರ ಲಾಭ ಪಡೆದ ಅವರು 39 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಇದು ವಿಶ್ವಕಪ್ ಟೂರ್ನಿಯ ವೇಗದ ಅರ್ಧಶತಕವಾಗಿ ದಾಖಲಾಯಿತು. 34ನೇ ಓವರ್‌ನಲ್ಲಿ ಸ್ಮೃತಿ ಮಂದಾನ ಅವರ ವಿಕೆಟ್ ಗಳಿಸಿದ ಸೂಝಿ ಬೇಟ್ಸ್ ಅವರು ಜೊತೆಯಾಟಕ್ಕೆ ತಡೆಯೊಡ್ಡಿದರು. ಆದರೆ ಪ್ರತೀಕಾ ಮತ್ತು ಜೆಮಿಮಾ ಬೀಸಾಟ ಮುಂದುವರಿಸಿದರು. 43ನೇ ಓವರ್‌ನಲ್ಲಿ ಪ್ರತೀಕಾ ಅವರ ಆಟಕ್ಕೆ ಅಮೆಲಿಯಾ ಕೆರ್ ತೆರೆ ಎಳೆದರು. ಹರ್ಮನ್‌ಪ್ರೀತ್ ಕೌರ್ 11 ಎಸೆತಗಳಲ್ಲಿ 10 ರನ್ ಗಳಿಸಿದರು. 48 ಓವರ್ ಮುಗಿದಾಗ ಮಳೆ ಸುರಿಯಿತು.

ಮುಖ್ಯಾಂಶಗಳು

- ಏಕದಿನ ಕ್ರಿಕೆಟ್‌ನಲ್ಲಿ ಸ್ಮೃತಿ ಮಂದಾನ 14ನೇ ಶತಕ
- ಮೊದಲ ವಿಕೆಟ್‌ಗೆ ಮಂದಾನ–ಪ್ರತೀಕಾ 212 ರನ್ ಜೊತೆಯಾಟ
- ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಈಗಾಗಲೇ ಸೆಮಿಫೈನಲ್‌ಗೆ ಅರ್ಹತೆ



ಪಿಟಿಐ ಚಿತ್ರಗಳು

ಸ್ಕೋರ್ ಕಾರ್ಡ್

ಭಾರತ: 3 ವಿಕೆಟ್‌ಗೆ 340 (49 ಓವರ್‌ಗಳಲ್ಲಿ)
ಪ್ರತೀಕಾ ಸಿ ಬದಲಿ ಫೀಲ್ಡರ್ (ಹನ್ನಾ) ಬಿ ಜೆಸ್ 122 (134ಎ, 4x13, 6x2)
ಮಂದಾನ ಸಿ ಬದಲಿ ಫೀಲ್ಡರ್ (ಹನ್ನಾ) ಬಿ ಬೇಟ್ಸ್ 109 (95ಎ, 4x10, 6x4)
ಜೆಮಿಮಾ ರಾಡ್ರಿಗಸ್ ಔಟಾಗದೇ 76 (55ಎ, 4x11)
ಹರ್ಮನ್‌ಪ್ರೀತ್ ಸಿ ಕಾರ್ಸನ್ ಬಿ ಮೇರ್ 10 (11ಎ, 4x1)
ರಿಚಾ ಘೋಷ್ ಔಟಾಗದೇ 4 (1ಎ, 4x1)
ಇತರೆ: 19 (ಲೆಗ್‌ಬೈ 11, ನೋಬಾಲ್ 2, ವೈಡ್ 6)
ವಿಕೆಟ್ ಪತನ: 1-212 (ಸ್ಮೃತಿ ಮಂದಾನ, 33.2), 2-288 (ಪ್ರತೀಕಾ ರಾವಲ್, 42.6), 3-336 (ಹರ್ಮನ್‌ಪ್ರೀತ್ ಕೌರ್, 48.5)
ಬೌಲಿಂಗ್: ರೋಸ್ ಮೇರಿ ಮೇರ್ 8-1-52-1, ಜೆಸ್ ಕೆರ್ 8-1-51-0, ಸೋಫಿ ಡಿವೈನ್ 6-0-34-0, ಈಡನ್ ಕಾರ್ಸನ್ 6-0-46-0, ಲಿಯಾ ತಹುಹು 4-0-37-0, ಅಮೆಲಿಯಾ ಕೆರ್ 10-0-69-1, ಸೂಝಿ ಬೇಟ್ಸ್ 7-0-40-1

ನ್ಯೂಜಿಲೆಂಡ್: 8ಕ್ಕೆ 271 (44 ಓವರ್‌ಗಳಲ್ಲಿ) (ಗೆಲುವಿನ ಗುರಿ 325 ರನ್)
ಬೇಟ್ಸ್ ಸಿ ಪ್ರತೀಕಾ ಬಿ ಕ್ರಾಂತಿ 1 (6ಎ)
ಜಾರ್ಜಿಯಾ ಬಿ ರೇಣುಕಾ 30 (25ಎ, 4x5, 6x1)
ಅಮೆಲಿಯಾ ಸಿ ಮಂದಾನ ಬಿ ಸ್ನೇಹ 45 (53ಎ, 4x4)
ಸೋಫಿ ಬಿ ರೇಣುಕಾ 6 (9ಎ, 4x1)
ಬ್ರೂಕ್ ಸಿ ರಾಣಾ ಬಿ ಚಾರಿಣಿ 81 (84ಎ, 4x9, 6x1)
ಗ್ರೀನ್ ಸಿ ಕ್ರಾಂತಿ ಬಿ ಪ್ರತೀಕಾ 18 (20ಎ, 4x2)
ಇಸಾಬೆಲ್ಲಾ ಗೇಜ್ ಔಟಾಗದೇ 65 (51ಎ, 4x10)
ಜೆಸ್ ಸಿ ಮಂದಾನ ಬಿ ಕ್ರಾಂತಿ 18 (13ಎ, 6x2)
ಇತರೆ: 6 (ಲೆಗ್‌ಬೈ 4, ವೈಡ್ 2)
ವಿಕೆಟ್ ಪತನ: 1-1 (ಸೂಝಿ ಬೇಟ್ಸ್, 1.3), 2-51 (ಜಾರ್ಜಿಯಾ ಪ್ಲಿಮ್ಮರ್, 9.3), 3-59 (ಸೋಫಿ ಡಿವೈನ್, 11.3), 4-115 (ಅಮೆಲಿಯಾ ಕೆರ್, 20.5 ಓವರ್), 5-154 (ಮ್ಯಾಡಿ ಗ್ರೀನ್, 27.6), 6-226 (ಬ್ರೂಕ್ ಹ್ಯಾಲಿಡೇ, 38.4), 7-266 (ಜೆಸ್ ಕೆರ್, 42.6), 8-271 (ರೋಸ್ ಮೇರಿ ಮೇರ್, 43.6)
ಬೌಲಿಂಗ್: ರೇಣುಕಾ ಸಿಂಗ್ 6-0-25-2, ಕ್ರಾಂತಿ ಗೌಡ್ 9-0-48-2, ಸ್ನೇಹ ರಾಣಾ 8-0-60-1, ಶ್ರೀಚಾರಿಣಿ 9-0-58-1, ದೀಪ್ತಿ ಶರ್ಮಾ 8-0-57-1, ಪ್ರತೀಕಾ ರಾವಲ್ 4-0-19-1
ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ (109 ರನ್, 3 ಕ್ಯಾಚ್)

ಫಲಿತಾಂಶ: ಭಾರತಕ್ಕೆ 53 ರನ್‌ಗಳ ಜಯ (ಡಿಎಲ್‌ಎಸ್ ನಿಯಮದನ್ವಯ)

ಲಯಕ್ಕೆ ಮರಳಿದ ರೋಹಿತ್ • ಸರಣಿ ಆಸ್ಟ್ರೇಲಿಯಾ ಕೈವಶ

ಕೂಪರ್ ಆಟಕ್ಕೆ ಒಲಿದ ಜಯ

ಅಡಿಲೇಡ್ (ಪಿಟಿಐ): ಭಾರತ ತಂಡದಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳುವ ಒತ್ತಡದಲ್ಲಿರುವ ಅನುಭವಿ ಬ್ಯಾಟರ್ ರೋಹಿತ್ ಶರ್ಮಾ ಆಸ್ಟ್ರೇಲಿಯಾ ಎದುರಿನ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಕೊನೆಗೂ ಲಯ ಕಂಡುಕೊಂಡರು. ಆದರೆ ಅವರ ಆಟದ ಬಲದಿಂದ ಜಯ ಸಾಧಿಸುವಲ್ಲಿ ತಂಡವು ಸಫಲವಾಗಲಿಲ್ಲ.

ಗುರುವಾರ ಇಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 2 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯನ್ನು 2–0 ಯಿಂದ ಕೈವಶ ಮಾಡಿಕೊಂಡಿತು. ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು. ನಾಯಕ ಶುಭಮನ್ ಗಿಲ್ (9 ರನ್) ಮತ್ತೊಮ್ಮೆ ವೈಫಲ್ಯ ಅನುಭವಿಸಿದರು.

ವಿರಾಟ್ ಕೊಹ್ಲಿ ಸತತ ಎರಡನೇ ಪಂದ್ಯದಲ್ಲಿಯೂ ಖಾತೆ ತೆರೆಯಲಿಲ್ಲ. ಮೊದಲ ಪಂದ್ಯದಲ್ಲಿ ಆಫ್‌ಸ್ಟಂಪ್ ಹೊರಗಿನ ಎಸೆತ ಕೆಣಕಿ ದಂಡ ಕಟ್ಟಿದ್ದರು. ಈ ಪಂದ್ಯದಲ್ಲಿ ಝೇವಿಯರ್ ಬಾರ್ಟ್‌ಲೆಟ್ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದರು. 17 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡ ತಂಡ ಆತಂಕಕ್ಕೀಡಾಯಿತು.

ಆದರೆ ಇನ್ನೊಂದು ಬದಿಯಲ್ಲಿದ್ದ ಆರಂಭಿಕ ಬ್ಯಾಟರ್ ರೋಹಿತ್ 97 ಎಸೆತಗಳಲ್ಲಿ ಗಳಿಸಿದ 73 ರನ್‌ಗಳ ನೆರವಿನಿಂದ ತಂಡವು ಚೇತರಿಸಿಕೊಂಡಿತು. ತಮ್ಮ ಎಂದಿನ ಬೀಸಾಟಕ್ಕೆ ಕಡಿವಾಣ ಹಾಕಿದ ರೋಹಿತ್ ಏಕಾಗ್ರತೆ ಮತ್ತು ತಾಳ್ಮೆಯುತ ಬ್ಯಾಟಿಂಗ್ ಮಾಡಿದರು. ಏಳು ಬೌಂಡರಿ ಮತ್ತು ಎರಡು ಸಿಕ್ಸರ್ ಬಾರಿಸಿದರು.

ಅವರಿಗೆ ಶ್ರೇಯಸ್ ಅಯ್ಯರ್ (61; 77ಎಸೆತ) ಬೆಂಬಲವಾಗಿ ನಿಂತರು. ಇವರು ಮೂರನೇ ವಿಕೆಟ್ ಜೊತೆಯಾಟದಲ್ಲಿ ಗಳಿಸಿದ 118 ರನ್ ಗಳ ಬಲದಿಂದ ತಂಡವು 9 ವಿಕೆಟ್‌ಗಳಿಗೆ 264 ರನ್ ಗಳಿಸಿತು. ಅಕ್ಷರ್ ಪಟೇಲ್ (44; 41ಎ), ಹರ್ಷಿತ್ ರಾಣಾ (24; 18ಎ) ಮತ್ತು ಅರ್ಷದೀಪ್ ಸಿಂಗ್ (13; 14ಎ) ಅವರೂ ಮಹತ್ವದ ಕಾಣಿಕೆ ನೀಡಿದರು. ಆದರೆ ಆ್ಯಡಂ ಜಂಪಾ (60ಕ್ಕೆ4) ಅವರ ಉತ್ತಮ ದಾಳಿಯ ಮುಂದೆ ಭಾರತ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಆತಿಥೇಯರು ಭಾರತದ ಸ್ಪಿನ್ನರ್‌ಗಳ ಮುಂದೆ ಪರದಾಡಿದರು. ಅದರೆ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರ ಗೈರು ಎದ್ದುಕಂಡಿತು.

ಆತಿಥೇಯ ಬಳಗದ ಮ್ಯಾಥ್ಯೂ ಶಾರ್ಟ್ (74; 78ಎ, 4X4, 6X2) ಬಿಟ್ಟರೆ ಉಳಿದ ಅಗ್ರಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ಇದರಿಂದಾಗಿ ಆಸ್ಟ್ರೇಲಿಯಾ 132 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು. ಎಡಗೈ ವೇಗಿ ಅರ್ಷದೀಪ್ ಸಿಂಗ್ ಮತ್ತು ರಾಣಾ ಪರಿಣಾಮಕಾರಿ ದಾಳಿ ಮಾಡಿದರು. ಆದರೆ ಈ ಹಂತದಿಂದ ಬಿಗಿಹಿಡಿತ ಸಾಧಿಸಿ ಗೆಲುವಿನತ್ತ ಸಾಗುವಲ್ಲಿ ನಾಯಕ ಶುಭಮನ್ ಗಿಲ್ ತಂತ್ರಗಳು ಫಲಿಸಲಿಲ್ಲ.

ಆಸ್ಟ್ರೇಲಿಯಾದ ಕೂಪರ್ ಕೊನೊಲಿ ಮತ್ತು ಆ್ಯಡಂ ಜಂಪಾ ಜಯದ ಸಂಭ್ರಮ ಆಚರಿಸಿದರು ಎಎಫ್‌ಪಿ ಚಿತ್ರಗಳು

ಅರ್ಧಶತಕ ದಾಖಲಿಸಿದ ರೋಹಿತ್ ಶರ್ಮಾ

ಮಧ್ಯಮ ಕ್ರಮಾಂಕದ ಬ್ಯಾಟರ್, 22 ವರ್ಷದ ಕೂಪರ್ ಕೊನೊಲಿ (ಅಜೇಯ 61; 53ಎ, 4X5, 6X1) ಮತ್ತು ಮಿಚೆಲ್ ಒವೆನ್ (36; 23ಎ) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. 46.2 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 265 ರನ್ ಗಳಿಸಿದ ಆಸ್ಟ್ರೇಲಿಯಾ ಸರಣಿಯನ್ನು ತನ್ನದಾಗಿಸಿಕೊಂಡಿತು. ಕೊನೆಯ ಪಂದ್ಯವು ಸಿಡ್ನಿಯಲ್ಲಿ ಶನಿವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 9ಕ್ಕೆ 264 (ರೋಹಿತ್ ಶರ್ಮಾ 73, ಶ್ರೇಯಸ್ ಅಯ್ಯರ್ 61, ಅಕ್ಷರ್ ಪಟೇಲ್ 44, ಹರ್ಷಿತ್ ರಾಣಾ ಔಟಾಗದೇ 24, ಅರ್ಷದೀಪ್ ಸಿಂಗ್ 13, ಮಿಚೆಲ್ ಸ್ಟಾರ್ಕ್ 62ಕ್ಕೆ2, ಝೇವಿಯರ್ ಬಾರ್ಟ್‌ಲೆಟ್ 39ಕ್ಕೆ3, ಆ್ಯಡಂ ಜಂಪಾ 60ಕ್ಕೆ4) ಆಸ್ಟ್ರೇಲಿಯಾ: 46.2 ಓವರ್‌ಗಳಲ್ಲಿ 8ಕ್ಕೆ265 (ಟ್ರಾವಿಸ್ ಹೆಡ್ 28, ಮ್ಯಾಥ್ಯೂ ಶಾರ್ಟ್ 74, ಮ್ಯಾಟ್ ರೆನ್ಷಾ 30, ಕೂಪರ್ ಕೊನೊಲಿ ಔಟಾಗದೇ 61, ಮಿಚೆಲ್ ಒವೆನ್ 36, ಅರ್ಷದೀಪ್ ಸಿಂಗ್ 41ಕ್ಕೆ2, ಹರ್ಷಿತ್ ರಾಣಾ 59ಕ್ಕೆ2, ವಾಷಿಂಗ್ಟನ್ ಸುಂದರ್ 37ಕ್ಕೆ2) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 2 ವಿಕೆಟ್‌ಗಳ ಜಯ ಮತ್ತು ಸರಣಿಯಲ್ಲಿ 2–0 ಮುನ್ನಡೆ. **ಪಂದ್ಯಶ್ರೇಷ್ಠ:** ಆ್ಯಡಂ ಜಂಪಾ.

ಭಾರತ ಕಬಡ್ಡಿ ತಂಡಗಳಿಗೆ ಚಿನ್ನ

ರಿಫಾ, ಬಹರೇನ್ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಗುರುವಾರ ಏಷ್ಯನ್ ಯೂತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡವು.

ಭಾರತ ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಐದು ಕಂಚು ಗೆದ್ದು ಪದಕ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ಚೀನಾ ಆರು ಚಿನ್ನ, 10 ಬೆಳ್ಳಿ ಮತ್ತು ಒಂದು ಕಂಚಿನೊಂದಿಗೆ ಅಗ್ರಸ್ಥಾನದಲ್ಲಿದೆ, ನಂತರದಲ್ಲಿ ಥಾಯ್ಲೆಂಡ್, ಉಜ್ಬೇಕಿಸ್ತಾನ ದೇಶಗಳಿವೆ.

ಮಹಿಳೆಯರ ಕಬಡ್ಡಿ ಫೈನಲ್‌ನಲ್ಲಿ ಭಾರತ 75–21ರಿಂದ ಇರಾನ್ ತಂಡವನ್ನು ಮಣಿಸಿತು. ಪುರುಷರ ತಂಡವು 35–32ರಿಂದ ಇರಾನ್ ತಂಡವನ್ನು ಸೋಲಿಸಿತು.

ಡಿ.6ರಂದು ಮಿಡ್‌ನೈಟ್ ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಬೆಂಗಳೂರು ಐಟಿ ಕಾರಿಡಾರ್ (ಆರ್‌ಬಿಐಟಿಸಿ) ಆಶ್ರಯದಲ್ಲಿ 18ನೇ ಆವೃತ್ತಿಯ 'ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್' ಡಿಸೆಂಬರ್ 6ರಂದು ವೈಟ್‌ಫೀಲ್ಡ್ ಕೆಟಿಪಿಓನಲ್ಲಿ ನಡೆಯಲಿದೆ.

'ಮನಾ ಗ್ರೂಪ್ ಪ್ರಾಯೋಜಕತ್ವದಲ್ಲಿ ನಡೆಯುವ ಈ ಓಟದಲ್ಲಿ 12 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಸಶಸ್ತ್ರ ಪಡೆಗಳ ಸಿಬ್ಬಂದಿ, ಅಥ್ಲೀಟ್‌ಗಳು, ಕಾರ್ಪೊರೇಟ್ ಕಂಪನಿ ಉದ್ಯೋಗಿಗಳು, ಎನ್‌ಜಿಓ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ' ಎಂದು ಆರ್‌ಬಿಐಟಿಸಿ ಅಧ್ಯಕ್ಷ ಶ್ರೀರಂಗ್ ತಾಂಬೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'2007ರಿಂದ ಈತನಕದ 17 ಆವೃತ್ತಿಗಳಲ್ಲಿ ₹35 ಕೋಟಿಗೂ ಹೆಚ್ಚು ನಿಧಿಯನ್ನು ಸಾಮಾಜಿಕ ಉದ್ದೇಶಗಳಿಗೆ ಸಂಗ್ರಹಿಸಲಾಗಿದೆ. ಹಿಂದಿನ ಆವೃತ್ತಿಗಳಿಗಿಂತ ಈ ಬಾರಿ ಶೇ 30ರಷ್ಟು ನೋಂದಣಿ ಹೆಚ್ಚಾಗಿದೆ. ಈ ವರ್ಷದ ಮ್ಯಾರಥಾನ್ ಅನ್ನು ಭಾರತೀಯ ಸಶಸ್ತ್ರ ಪಡೆಗಳಿಗೆ ಸಮರ್ಪಿಸಲು ನಿರ್ಧರಿಸಲಾಗಿದೆ' ಎಂದು ಅವರು ತಿಳಿಸಿದರು.

ಮ್ಯಾರಥಾನ್ ಜರ್ಸಿಯನ್ನು ಭಾರತೀಯ ಸೇನೆಯ ಕರ್ನಾಟಕ ಮತ್ತು ಕೇರಳ ಉಪ ಪ್ರಾದೇಶಿಕ ಜನರಲ್ ಆಫೀಸರ್ ಕಮಾಂಡಿಂಗ್ ಮೇಜರ್ ಜನರಲ್ ವಿ.ಟಿ. ಮ್ಯಾಥ್ಯೂ ಅನಾವರಣ ಮಾಡಿದರು.

ಆಸಕ್ತರು ನೋಂದಣಿಗೆ ಈ ವೆಬ್‌ಸೈಟ್ ಸಂಪರ್ಕಿಸಬಹುದು: www.midnightmarathon.inEvent Highlights.

ಮ್ಯಾಚ್ ಫಿಕ್ಸಿಂಗ್: ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ

ಮಧ್ಯಪ್ರವೇಶಿಸಲು ಬಿಸಿಸಿಐಗೆ ಅನುಮತಿ

ನವದೆಹಲಿ: ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್ ಪ್ರಕರಣದ ಆರು ಜನ ಆರೋಪಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು 2022ರಲ್ಲಿ ರದ್ದುಗೊಳಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ, ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ಮಧ್ಯ ಪ್ರವೇಶಿಸಲು ಬಿಸಿಸಿಐಗೆ ಅನುಮತಿ ನೀಡಲಾಗಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಲ್ಯ ಬಾಗ್ಚಿ ಅವರನ್ನೊಳಗೊಂಡ ನ್ಯಾಯಪೀಠವು ಈ ಕುರಿತಂತೆ ಇದೇ 16 ರಂದು ಬಿಸಿಸಿಐಗೆ ನ್ಯಾಯಾಲಯಕ್ಕೆ ಸಹಾಯ ಮಾಡಲು ಅವಕಾಶ ಕಲ್ಪಿಸಿದೆ.

ಪ್ರತಿವಾದಿಗಳು ಮುಂದಿನ ನಾಲ್ಕು ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸುವಂತೆ ತಿಳಿಸಿದೆ. ಕೇಂದ್ರ ಸರ್ಕಾರವೂ ಪ್ರಮಾಣ ಪತ್ರ ಸಲ್ಲಿಸಲು ಕೊನೆಯ ಅವಕಾಶ ನೀಡಲಾಗಿದ್ದು ವಿಚಾರಣೆಯನ್ನು ನವೆಂಬರ್ 27ಕ್ಕೆ ನಿಗದಿಪಡಿಸಲಾಗಿದೆ.

ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ನಡೆದಿತ್ತೆನ್ನಲಾದ ಮ್ಯಾಚ್ ಫಿಕ್ಸಿಂಗ್ ಪ್ರಕರಣವನ್ನು ಮೂರು ವರ್ಷಗಳ ಹಿಂದೆ ರದ್ದುಗೊಳಿಸಿದ್ದ ಹೈಕೋರ್ಟ್ ತೀರ್ಪು ಪ್ರಶ್ನಿಸಿದ್ದ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ವಕೀಲ ಡಿ. ಎಲ್. ಚಿದಾನಂದ ಅವರ ಮೂಲಕ ಸಲ್ಲಿಸಲಾದ ವಿಶೇಷ ಅನುಮತಿ ಅರ್ಜಿಯಲ್ಲಿ 'ಇದು ಅಗತ್ಯ ಮತ್ತು ಸರಿಯಾದ ನಿಲುವು' ಎಂದು ಬಿಸಿಸಿಐ ಸಮರ್ಥಿಸಿಕೊಂಡಿದೆ.

2018 ಮತ್ತು 2019ರಲ್ಲಿ ನಡೆದಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಗಳ ಕೆಲವು ಪಂದ್ಯಗಳಲ್ಲಿ ಮೋಸದಾಟ ನಡೆದ ಆರೋಪಗಳು ಕೇಳಿಬಂದಿದ್ದವು. ಅದರಲ್ಲಿ ಇಬ್ಬರು ಆಟಗಾರರು, ತಂಡವೊಂದರ ಮಾಲೀಕ, ತಂಡದ ಉಸ್ತುವಾರಿ, ಒಬ್ಬ ಕೋಚ್, ಒಬ್ಬ ಬುಕ್ಕಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಒಬ್ಬ ಸದಸ್ಯರ ಮೇಲೆ ಸೆಕ್ಷನ್ 420 ಮತ್ತು 120 ಬಿ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಈ ಪ್ರಕರಣ ವನ್ನು 2022ರ ಜನವರಿ 10ರಂದು ಹೈಕೋರ್ಟ್ ರದ್ದುಗೊಳಿಸಿತ್ತು.

ಶಿವಮೊಗ್ಗದಲ್ಲಿ ಐದು ವರ್ಷಗಳ ನಂತರ ರಣಜಿ ಟ್ರೋಫಿಯ ಪಂದ್ಯ

ಶಿವಮೊಗ್ಗ: ಇಲ್ಲಿನ ನವುಲೆಯಲ್ಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಕ್ರೀಡಾಂಗಣದಲ್ಲಿ ಅ. 25ರಿಂದ 28ರವರೆಗೆ ರಣಜಿ ಟ್ರೋಫಿ ಎಲೀಟ್ ವಿಭಾಗದ 'ಬಿ' ಗುಂಪಿನ ಕ್ರಿಕೆಟ್ ಪಂದ್ಯ ನಡೆಯಲಿದೆ.

ಮಯಂಕ್ ಅಗರ್‌ವಾಲ್ ನಾಯಕತ್ವದ ಕರ್ನಾಟಕ ತಂಡ ಹಾಗೂ ದೀಪರಾಜ್ ಗಾಂವ್ಕರ್ ನೇತೃತ್ವದ ಗೋವಾ ತಂಡಗಳು ಮುಖಾಮುಖಿಯಾಗಲಿವೆ. ರಾಜ್‌ಕೋಟ್‌ನಲ್ಲಿ ನಡೆದಿದ್ದ ಪ್ರಸಕ್ತ ಅಭಿಯಾನದ ತನ್ನ ಮೊದಲ ಪಂದ್ಯದಲ್ಲಿ ಕರ್ನಾಟಕವು ಸೌರಾಷ್ಟ್ರ ತಂಡವನ್ನು ಎದುರಿಸಿತ್ತು. ಮೊದಲು ಬ್ಯಾಟ್ ಮಾಡಿದ್ದ ಕರ್ನಾಟಕ ಕೇವಲ 4 ರನ್‌ಗಳ ಅಂತರದಲ್ಲಿ ಮೊದಲ ಇನ್ನಿಂಗ್ಸ್ ಲೀಡ್ ಬಿಟ್ಟುಕೊಟ್ಟಿತ್ತು. ಡ್ರಾ ಪಂದ್ಯದಲ್ಲಿ ಬರೀ 1 ಅಂಕ ಗಳಿಸಿರುವ ಕರ್ನಾಟಕ ತಂಡ ಈಗ ಒತ್ತಡದಲ್ಲಿದೆ.

'ಪಂದ್ಯದ ಯಶಸ್ಸಿಗೆ ಈಗಾಗಲೇ ಅಗತ್ಯ ಸಿದ್ಧತೆಗಳು ಪೂರ್ಣಗೊಂಡಿವೆ. ಪಂದ್ಯ ವೀಕ್ಷಣೆಗೆ ಉಚಿತ ಪ್ರವೇಶವಿದೆ. 2020ರ ಜನವರಿ 4ರಿಂದ 7ರವರೆಗೆ ಇದೇ ಮೈದಾನದಲ್ಲಿ ಕರ್ನಾಟಕ ಹಾಗೂ ಮಧ್ಯಪ್ರದೇಶ ನಡುವೆ ರಣಜಿ ಪಂದ್ಯ ನಡೆದಿತ್ತು. ಐದು ವರ್ಷಗಳ ನಂತರ ಶಿವಮೊಗ್ಗ ನಗರ ಮತ್ತೆ ಆತಿಥ್ಯ ವಹಿಸುತ್ತಿದೆ' ಎಂದು ಕೆಎಸ್‌ಸಿಎ ಶಿವಮೊಗ್ಗ ವಲಯದ ಹಿಂದಿನ ಸಂಚಾಲಕರೂ ಆದ ವಿಧಾನಪರಿಷತ್ ಸದಸ್ಯ ಡಿ.ಎಸ್.ಅರುಣ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನೂತನ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ: ಸಾರ್ವಜನಿಕರ ಪ್ರತಿಕ್ರಿಯೆ ಆಹ್ವಾನ

ನವದೆಹಲಿ (ಪಿಟಿಐ): ನೂತನ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯ ಕರಡು ನಿಯಮಗಳ ಕುರಿತು ಸಾರ್ವಜನಿಕರು ಪ್ರತಿಕ್ರಿಯೆ ಸಲ್ಲಿಸಲು ನವೆಂಬರ್ 14ರವರೆಗೆ ಕ್ರೀಡಾ ಸಚಿವಾಲಯ ಅವಕಾಶ ಕಲ್ಪಿಸಿದೆ.

ರಾಷ್ಟ್ರೀಯ ಕ್ರೀಡಾ ಮಂಡಳಿ, ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಮತ್ತು ರಾಷ್ಟ್ರೀಯ ಕ್ರೀಡಾ ಚುನಾವಣಾ ಸಮಿತಿ ಸ್ಥಾಪನೆ ಸಂಬಂಧ ಕರಡು ನಿಯಮಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಸಾರ್ವಜನಿಕರ ಪ್ರತಿಕ್ರಿಯೆಗೆ ಆಹ್ವಾನ ನೀಡಲಾಗಿದೆ.

ಪ್ರತಿಕ್ರಿಯೆಗಳನ್ನು ಸಚಿವಾಲಯಕ್ಕೆ ಅಂಚೆ ಮೂಲಕ ಅಥವಾ rules-nsga2025@sports.gov.in ಇಮೇಲ್ ಮೂಲಕ ಸಲ್ಲಿಸಬಹುದು. ಸಚಿವ ಮನ್ಸುಖ್ ಮಾಂಡವೀಯ 2026ರ ಮೊದಲಾರ್ಧದಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲು ಉತ್ಸುಕರಾಗಿದ್ದಾರೆ.

ಸಾತ್ವಿಕ್–ಚಿರಾಗ್ ಜೋಡಿಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.

ಪುರುಷರ ಡಬಲ್ಸ್ ವಿಭಾಗದ 32ರ ಘಟ್ಟದ ಪಂದ್ಯದಲ್ಲಿ ಭಾರತದ ಜೋಡಿಯು 18-21, 20-22ರಿಂದ ಇಂಡೊನೇಷ್ಯಾದ ಮುಹಮ್ಮದ್ ರಿಯಾನ್ ಅರ್ಡಿಯಾಂಟೊ–ರಹಮತ್ ಹಿದಾಯತ್ ಅವರಿಗೆ ಬುಧವಾರ ಮಣಿದರು.

ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು ಮಹಿಳಾ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಹೂಡಾ 14–21, 11–21ರಿಂದ ಅಗ್ರ ಶ್ರೇಯಾಂಕದ ವಾಂಗ್ ಝಿಯಿ (ಚೀನಾ) ಅವರಿಗೆ ಸೋತರು. ಇದಕ್ಕೂ ಮೊದಲು ಹೂಡಾ 11-21, 21-13, 21-16ರಿಂದ ಮಲೇಷ್ಯಾದ ಲೆಟ್ಶಾನಾ ಕರುಪತೇವನ್ ಅವರನ್ನು ಹಿಮ್ಮೆಟ್ಟಿಸಿದರು. ಭಾರತದ ಅನುಪಮಾ ಉಪಾಧ್ಯಾಯ ಮತ್ತು ಅನ್ಮೋಲ್ ಖಾರ್ಬ್ ಅವರೂ ನಿರಾಸೆ ಮೂಡಿಸಿದರು. ಅನುಪಮಾ 15-21, 11-21ರಿಂದ ಚೀನಾದ ಹಾನ್ ಯುಯೆ ವಿರುದ್ಧ; ಖಾರ್ಬ್ 15-21, 9-21ರಿಂದ ಕೊರಿಯಾದ ಆನ್ ಸೆ-ಯಂಗ್ ವಿರುದ್ಧ ಸೋತರು.

ಪ್ರೊ ಕಬಡ್ಡಿ: ಲೀಗ್ ಹಂತದ ಅಭಿಯಾನ ಮುಕ್ತಾಯ, ಎಂಟು ತಂಡಗಳು ಪ್ಲೇಆಫ್‌ಗೆ

ಮೂರನೇ ಸ್ಥಾನಕ್ಕೆ ಬೆಂಗಳೂರು ಬುಲ್ಸ್

ನವದೆಹಲಿ (ಪಿಟಿಐ): ರೇಡರ್‌ಗಳಾದ ಆಕಾಶ್ ಶಿಂಧೆ ಮತ್ತು ಅಲಿರೆಜಾ ಮಿರ್ಜೈಯನ್ ಅವರ 'ಸೂಪರ್ ಟೆನ್' ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಗುರುವಾರ ಪಂದ್ಯದಲ್ಲಿ 54–26ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಬುಲ್ಸ್ ತಂಡಕ್ಕೆ 18 ಪಂದ್ಯಗಳಲ್ಲಿ 11ನೇ ಗೆಲುವು ಇದಾಗಿದೆ. ಒಟ್ಟು 22 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನದೊಂದಿಗೆ ಲೀಗ್ ಅಭಿಯಾನ ಮುಗಿಸಿ, ಪ್ಲೇ ಆಫ್‌ನತ್ತ ಹೆಜ್ಜೆ ಹಾಕಿತು. ಮಿನಿ ಕ್ವಾಲಿಫೈಯರ್‌ನಲ್ಲಿ ಬುಲ್ಸ್ ತಂಡವು ಇದೇ 26ರಂದು ತೆಲುಗು ಟೈಟನ್ಸ್ ತಂಡವನ್ನು ಎದುರಿಸಲಿದೆ.

ತ್ಯಾಗರಾಜ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಲ್ಲಿ ನಡೆದ ಪಂದ್ಯದಲ್ಲಿ ಬುಲ್ಸ್ ಆಟಗಾರರು ಆರಂಭದಿಂದಲೇ ಚುರುಕಿನ ಆಟ ಪ್ರದರ್ಶಿಸಿದರು. ಹೀಗಾಗಿ, ಬುಲ್ಸ್ ತಂಡವು ಮೊದಲಾರ್ಧದಲ್ಲಿ 36–7 ಅಂಕಗಳ ಬೃಹತ್ ಮುನ್ನಡೆ ಗಳಿಸಿತು. ಉತ್ತರಾರ್ಧದಲ್ಲಿ ಜೈಂಟ್ಸ್ ತಂಡವು ಕೊಂಚ ಪ್ರತಿರೋಧ ತೋರಿ ಸೋಲಿನ ಅಂತರವನ್ನು ಕಡಿಮೆ ಮಾಡಿಕೊಂಡಿತು. ಬುಲ್ಸ್ ತಂಡಕ್ಕೆ ಇದು ಸತತ ಮೂರನೇ ಗೆಲುವಾಗಿದೆ.

ಬುಲ್ಸ್ ಪರ ಅನುಭವಿ ರೇಟರ್ ಆಕಾಶ್ 11 ಅಂಕ ಗಳಿಸಿದರೆ, ಅಲಿರೆಜಾ 10 ಅಂಕ ತಂದಿತ್ತರು. ಡಿಫೆಂಡರ್ ಸಂಜಯ್ ಧುಲ್ ಮತ್ತು ಆಶಿಶ್ ಮಲಿಕ್ 'ಹೈಫೈ' ಸಾಧನೆ ಮಾಡಿದರು. ಜೈಂಟ್ಸ್ ಪರ ಶ್ರೀಧರ ಆನಂದ ಕದಂ (8) ಏಕಾಂಗಿ ಹೋರಾಟ ತೋರಿದರು.

ಗುಜರಾತ್ ಜೈಂಟ್ಸ್ ರೇಡರ್‌ನನ್ನು ಟ್ಯಾಕಲ್ ಮಾಡಿದ ಬೆಂಗಳೂರು ಬುಲ್ಸ್ ಆಟಗಾರರು ಎಕ್ಸ್ ಚಿತ್ರ

ಜೈಂಟ್ಸ್ ತಂಡಕ್ಕೆ ಇದು 18 ಪಂದ್ಯಗಳಲ್ಲಿ 12ನೇ ಸೋಲಾಗಿದೆ. ಒಟ್ಟು 12 ಅಂಕ ಗಳಿಸಿರುವ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ 11ನೇ ಸ್ಥಾನದೊಂದಿಗೆ ಹಾಲಿ ಆವೃತ್ತಿಯ ಅಭಿಯಾನ ಮುಗಿಸಿತು.

ಯೋಧಾಸ್‌ಗೆ ಗೆಲುವು: ದಿನದ ಮತ್ತೊಂದು ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡವು 35–32 ಅಂತರದಿಂದ ಯು ಮುಂಬಾ ತಂಡವನ್ನು ಮಣಿಸಿತು. ದಿನದ ಮೂರನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು 33–18ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿತು.

ಪ್ಲೇ ಆಫ್‌ಗೆ ಎಂಟು ತಂಡಗಳು: ಲೀಗ್ ಪಟ್ಟಿಯಲ್ಲಿ ಕ್ರಮವಾಗಿ ಮೊದಲ ಎಂಟು ಸ್ಥಾನ ಪಡೆದ ಪುಣೇರಿ ಪಲ್ಟನ್ (26 ಅಂಕ), ದಬಂಗ್ ಡೆಲ್ಲಿ (26), ಬುಲ್ಸ್ (22), ತೆಲುಗು ಟೈಟನ್ಸ್ (20), ಹರಿಯಾಣ ಸ್ಟೀಲರ್ಸ್ (20), ಯು ಮುಂಬಾ (20), ಪಟ್ನಾ ಪೈರೇಟ್ಸ್ (16), ಜೈಪುರ ಪಿಂಕ್ ಪ್ಯಾಂಥರ್ಸ್ (16) ಪ್ಲೇ ಆಫ್ ಹಂತ ಪ್ರವೇಶಿಸಿದವು. ಯು.ಪಿ. ಯೋಧಾಸ್ (14), ತಮಿಳು ತಲೈವಾಸ್ (12), ಗುಜರಾತ್ ಜೈಂಟ್ಸ್ (12) ಬೆಂಗಾಲ್ ವಾರಿಯರ್ಸ್ (12) ಟೂರ್ನಿಯಿಂದ ಹೊರಬಿದ್ದವು.

ಕಿಂಗ್ಸ್‌ಗೆ ಬಹುತುಳೆ ಸ್ಪಿನ್ ಕೋಚ್

ಚಂಡೀಗಡ (ಪಿಪಿಟಿಐ): ಭಾರತ ತಂಡದ ಮಾಜಿ ಆಟಗಾರ ಸಾಯಿರಾಜ್ ಬಹುತುಳೆ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಆಡುವ ಪಂಜಾಬ್ ಕಿಂಗ್ಸ್ ತಂಡಕ್ಕೆ ಸ್ಪಿನ್ ಬೌಲಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ.



ಸಾಯಿರಾಜ್ ಅವರು ಭಾರತದ ಪರ ಎರಡು ಟೆಸ್ಟ್ ಮತ್ತು ಎಂಟು ಏಕದಿನ ಪಂದ್ಯಗಳನ್ನು ಆಡಿದ್ದಾರೆ. 52 ವರ್ಷದ ಅವರು ಕರ್ನಾಟಕದ ಸುನಿಲ್ ಜೋಶಿ ಅವರಿಂದ ತೆರವಾದ ಸ್ಥಾನಕ್ಕೆ ನೇಮಕಗೊಂಡಿದ್ದಾರೆ. ಜೋಶಿ ಅವರು 2023ರಿಂದ ಕಿಂಗ್ಸ್ ತಂಡದಲ್ಲಿ ಸ್ಪಿನ್ ಬೌಲಿಂಗ್ ಕೋಚ್ ಆಗಿದ್ದರು.

ಬಹುತುಳೆ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ಕೇರಳ, ಗುಜರಾತ್, ವಿದರ್ಭ ಮತ್ತು ಬಂಗಾಲದಂತಹ ದೇಶೀಯ ತಂಡಗಳಿಗೆ ಮಾರ್ಗದರ್ಶನ ನೀಡಿದ್ದ ಮುಂಬೈನ ಬಹುತುಳೆ, ರಾಜಸ್ಥಾನ ರಾಯಲ್ಸ್ ತಂಡಕ್ಕೂ ಸ್ಪಿನ್ ಕೋಚ್ ಆಗಿದ್ದರು.